ಸಂಪುಟ : 13 Volume | ಸಂಚಿಕೆ : 194 Issue | ಪುಟಗಳು : 08 Pages | ಭಾನುವಾರ 14 ಸೆಪ್ಟೆಂಬರ್ 2025 | ₹2 | RNINO:KARKAN/2011/48371 | BDR/054/2026-20274 | www.mallammanudi.in | mallammanudi@gmail.com | 9448604450

ಬೀದರ | ಕಲ್ಬುರ್ಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ & ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಕಟ

# ಮಲ್ಲಮ್ಮ ನುಡಿ

MN ಸತ್ಯಮೇವ ಜಯತೆ ಕನ್ನಡ ಕಿರಣ

Mallammanudi Regional News Paper
ಪ್ರಾದೇಶಿಕ ಕನ್ನಡ ದೈನಿಕ

ಸಂಪಾದಕರು: ರಮೇಶ ರೆಡ್ಡಿ

**ಬೆಳಗು**

" ಶಕ್ತಿಯೇ ಜೀವನ ದೌರ್ಬಲ್ಯವೇ ಮರಣ "
- ಸ್ವಾಮಿ ವಿವೇಕಾನಂದ

ವಿವಾದಾತ್ಮಕ ಸಾಹಿತಿಗಳಿಂದ ದೂರವಿರಿ 2 | ಅಸೂಯೆಯಿಂದ ಬದುಕು ಹಸನಾಗದು 4 | ರಾಷ್ಟ್ರೀಯ ಪೌಷ್ಟಿಕ ದಿನಾಚರಣೆ 8

# ನಾನು ನಿಮ್ಮ ಜೊತೆಗಿದ್ದೇನೆ
## ಮಣಿಪುರ ಜನರಿಗೆ ಪ್ರಧಾನಿ ಮೋದಿ ಭರವಸೆ

ಇಂಫಾಲ:ಸೆ.13:ನಾನುನಿಮ್ಮೊಂದಿಗಿದ್ದೇನೆ.ಭಾರತ ಸರ್ಕಾರವು ಮಣಿಪುರದ ಜನರೊಂದಿಗಿದೆ ಎಂದು ಪ್ರಧಾನಿ ನರೇಂದ್ರ ಮೋದಿಯವರು ಭರವಸೆಯ ಮಾತುಗಳನ್ನಾಡಿದ್ದಾರೆ.ಚುರಾಚಂದಾಪುರದ ಶಾಂತಿ ಮೈದಾನದಲ್ಲಿಮೈತೇಯಿ ಹಾಗೂ ಕುಕಿ ಸಂತ್ರಸ್ಥರನ್ನು ಭೇಟಿಯಾಗಿಸಂವಾದನಡೆಸಿದರು.ಈವೇಳೆರಾಜ್ಯದಲ್ಲಿ ಶಾಂತಿಪುನಃಸ್ಥಾಪಿಸಲುಕೇಂದ್ರದಬದ್ಧತೆಯಭರವಸೆಯನ್ನು ನೀಡಿದರು. ನಾನು ನಿಮ್ಮೊಂದಿಗಿದ್ದೇನೆ. ಭಾರತ ಸರ್ಕಾರವು ಮಣಿಪುರದ ಜನರೊಂದಿಗಿದೆ ಎಂದು ನಾನುಇಂದುಭರವಸೆನೀಡುತ್ತೇನೆ.ಮಣಿಪುರವುನಮ್ಮ ಭರವಸೆಯ ಭೂಮಿ ಎಂದು ಮೋದಿ ಬಣ್ಣಿಸಿದರು. ಈ ಪ್ರದೇಶವನ್ನು ಆವರಿಸಿದ್ದ ಹಿಂಸಾಚಾರದ ನಂತರ ರಾಜ್ಯವು ಚೇತರಿಸಿಕೊಳ್ಳುತ್ತಿದೆ. ಸಂತ್ರಸ್ತರೊಂದಿಗೆ ಮಾತನಾಡಿಮಣಿಪುರದಲ್ಲಿಭರವಸೆಮತ್ತು ವಿಶ್ವಾಸದ ಹೊಸ ಉದಯ ಹೊರಹೊಮ್ಮುತ್ತಿದೆ ಎಂದು ನಾನು ಹೇಳಬಲ್ಲೆಎಂದರು.ಯಾವುದೇಪ್ರದೇಶದಅಭಿವೃದ್ಧಿಗೆ ಶಾಂತಿಯನ್ನು ಸ್ಥಾಪಿಸುವುದು ನಿರ್ಣಾಯಕವಾಗಿದೆ. ಕಳೆದ ಹನ್ನೊಂದು ವರ್ಷಗಳಲ್ಲಿ, ಈಶಾನ್ಯದಲ್ಲಿ



ದೀರ್ಘಕಾಲದಿಂದ ಇದ್ದ ಅನೇಕ ವಿವಾದಗಳು ಮತ್ತು ಸಂಘರ್ಷಗಳು ಕೊನೆಗೊಂಡಿವೆ. ಜನರು ಶಾಂತಿಯ ಹಾದಿಯನ್ನು ಆರಿಸಿಕೊಂಡಿದ್ದಾರೆ. ಅಭಿವೃದ್ಧಿಗೆ ಆದ್ಯತೆ ನೀಡಿದ್ದಾರೆಎಂದುಹೇಳಿದರು.ಇತ್ತೀಚೆಗೆಕಣಿವೆಗಳಲ್ಲಿನ ವಿವಿಧಗುಂಪುಗಳೊಂದಿಗೆಒಪ್ಪಂದದಮಾತುಕತೆಗಳು ನಡೆದಿವೆ ಎಂದು ನಾವು ತೃಪ್ತರಾಗಿದ್ದೇವೆ. ಇವೆಲ್ಲವೂ ಭಾರತಸರ್ಕಾರದಪ್ರಯತ್ನದಭಾಗವಾಗಿದ್ದು,ಶಾಂತಿಯ ಕಡೆಗೆಕೆಲಸಮಾಡಲುಸಂವಾದ, ಗೌರವಮತ್ತು ಪರಸ್ಪರ ತಿಳುವಳಿಕೆಗೆಆದ್ಯತೆನೀಡುತ್ತವೆ.ಶಾಂತಿಯಹಾದಿಯಲ್ಲಿ ಮುಂದುವರಿಯಲು,ನಿಮ್ಮ ಕನಸುಗಳನ್ನು ನನಸಾಗಿಸಲು ಮತ್ತು ನಿಮ್ಮ ಮಕ್ಕಳಭವಿಷ್ಯವನ್ನು ಸುರಕ್ಷಿತಗೊಳಿಸಲು ನಾನುಎಲ್ಲಾಸಂಸ್ಥೆಗಳಿಗೆಮನವಿಮಾಡುತ್ತೇನೆಎಂದರು. ಮಣಿಪುರದಜನರಜೀವನವನ್ನು ಮತ್ತೆ ಹಳಿಗೆತರಲು, ನಿರಾಶ್ರಿತಕುಟುಂಬಗಳಿಗೆ7,000 ಹೊಸಮನೆಗಳನ್ನು ನಿರ್ಮಿಸಲುಸಹಾಯಮಾಡುವುದುಸೇರಿದಂತೆಭಾರತ ಸರ್ಕಾರವು ಸಾಧ್ಯವಿರುವ ಎಲ್ಲ ಪ್ರಯತ್ನಗಳನ್ನು ಮಾಡುತ್ತಿದೆ. ಸುಮಾರು 3,000 ಕೋಟಿಯ ರೂ.ಗಳ ವಿಶೇಷಪ್ಯಾಕೇಜ್ ಅನ್ನು ಅನುಮೋದಿಸಲಾಗಿದೆ. ಗಲಭೆಯಲ್ಲಿಹಾನಿಗೊಳಗಾದವರಿಗೆಸಹಾಯಮಾಡಲು ಪ್ರತ್ಯೇಕ500 ಕೋಟಿರೂ.ನಿಬಂಧನೆಯೊಂದಿಗೆಮತ್ತು ಮಣಿಪುರದಬುಡಕಟ್ಟುಯುವಕರನ್ನು ಬೆಂಬಲಿಸಲು ಕ್ರಮಗಳು ನಡೆಯುತ್ತಿವೆ ಎಂದು ಹೇಳಿದರು.

## ಶಾಸಕ ಚವಾಣ್‌ಗೆ ಅಶ್ಲೀಲ ವಿಡಿಯೊ: ಆರೋಪಿ ಬಂಧನ



ಬೀದರ. ಸೆ. 13 : ಔರಾದ್ ಕ್ಷೇತ್ರದ ಶಾಸಕ ಪ್ರಭು ಚವಾಣ್ ಅವರ ವಾಟ್ಸ್ ಆಯಪ್ ಸಂಖ್ಯೆಗೆ ಅಶ್ಲೀಲ ವಿಡಿಯೋ ಕಳುಹಿಸಿ ?30 ಸಾವಿರ ಬೇಡಿಕೆ ಇಟ್ಟಿದ್ದ ಆರೋಪಿಯನ್ನು ಪೊಲೀಸರು ಬಂಧಿಸಿದ್ದಾರೆ. ತಾಲ್ಲೂಕಿನ ನಂದಿಬಿಜಲಗಾಂವ್ ತಾಂಡಾದ ನಿವಾಸಿ ವಿಕಾಸ ಪವಾರ್ ಎಂಬಾತನನ್ನು ತೆಲಂಗಾಣದ ಹೈದರಾಬಾದ್‌ನಲ್ಲಿ ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಆರೋಪಿ ವಿಕಾಸ ಪವಾರ್ ಶಾಸಕರ ಹಾಗೂ ಯುವತಿಯೊಬ್ಬಳ ಫೋಟೋ ಜೋಡಿಸಿ ಹಣ ಹಾಕದಿದ್ದರೆ ಈ ವಿಡಿಯೋ ಯೂಟ್ಯೂಬ್‌ನಲ್ಲಿ ಶೇರ್ ಮಾಡುವುದಾಗಿ ಬೆದರಿಕೆ ಹಾಕಿದ್ದ. ಈ ಕುರಿತು ಸೆ. 8ರಂದು ಹೊಕ್ರಾಣಾ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

## ಹಾಸನ ಗಣೇಶ ಮೆರವಣಿಗೆ ದುರಂತ ಸಾವಿನ ಸಂಖ್ಯೆ 10ಕ್ಕೆ ಏರಿಕೆ

ಹಾಸನ: ಸೆ.13:ಹಾಸನದ ಮೊಸಳೆ ಹೊಸಳ್ಳಿಯಲ್ಲಿ ಶುಕ್ರವಾರ ಗಣೇಶೋತ್ಸವ ಮೆರವಣಿಗೆ ವೇಳೆ ಸಂಭವಿಸಿದ ಭೀಕರ ಅಪಘಾತದಲ್ಲಿ ಮೃತಪಟ್ಟವರ ಸಂಖ್ಯೆ ಶನಿವಾರ 10ಕ್ಕೆ ಏರಿಕೆಯಾಗಿದೆ.

ನಿನ್ನೆ ರಾತ್ರಿ ಸಂಭವಿಸಿದ ಟ್ರಕ್ ದುರಂತದಲ್ಲಿ ಗಂಭೀರವಾಗಿ ಗಾಯಗೊಂಡು ಚಿಂತಾಜನಕ ಸ್ಥಿತಿಯಲ್ಲಿದ್ದ ಚಂದನ್ ಎಂಬ ಯುವಕ ಇಂದು ಚಿಕಿತ್ಸೆ ಫಲಕಾರಿಯಾಗದೆ ಸಾವನ್ನಪ್ಪಿದ್ದಾರೆ. ಇದರೊಂದಿಗೆ ಸಾವಿನ ಸಂಖ್ಯೆ 10ಕ್ಕೆ ಏರಿಕೆಯಾಗಿದೆ.

ಅಪಘಾತದಲ್ಲಿ 22ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದು, ಹಾಸನ ಜಿಲ್ಲಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಸಚಿವ ಕೃಷ್ಣ ಬೈರೇಗೌಡ ಅವರು ಹಾಸನ ಆಸ್ಪತ್ರೆಗೆ ಭೇಟಿ ನೀಡಿ, ಗಾಯಾಳುಗಳ ಆರೋಗ್ಯ ವಿಚಾರಿಸಿದರು.

ಕೃಷ್ಣ ಬೌರೇಗೌಡ ಅವರು ಗಾಯಾಳುಗಳ ಆರೋಗ್ಯ ಸ್ಥಿತಿಯ ಬಗ್ಗೆ ವಿಚಾರಿಸಿದರು ಮತ್ತು ಅವರ ಕುಟುಂಬಗಳೊಂದಿಗೆ ಮಾತುಕತೆ ನಡೆಸಿದರು ಎಂದು ಸಚಿವರ ಕಚೇರಿಯ ಪ್ರಕಟಣೆ ತಿಳಿಸಿದೆ.

ಇದಕ್ಕು ಮುನ್ನ ಕೃಷ್ಣ ಬೈರೇಗೌಡ ಅವರು ಅಪಘಾತ ನಡೆದ ಸ್ಥಳಕ್ಕೆ ಭೇಟಿ ನೀಡಿ, ಸ್ಥಳೀಯರು ಹಾಗೂ ಅಧಿಕಾರಿಗಳ ಜತೆ ಮಾತುಕತೆ ನಡೆಸಿದರು. ಈ ವೇಳೆ, ಜನರು ಪರಿಹಾರ ಕಡಿಮೆ ಎಂಬ ವಿಚಾರವಾಗಿ ಆಕ್ರೋಶ ವ್ಯಕ್ತಪಡಿಸಿದರು. ಸರ್ಕಾರದಿಂದ ಘೋಷಿಸಲಾಗಿರುವ ಐದು ಲಕ್ಷ ರೂಪಾಯಿ ಪರಿಹಾರ ಸಾಕಾಗುವುದಿಲ್ಲ ಎಂದು ಜನ ಹೇಳಿದ್ದು, ಹೆಚ್ಚಿನ ಪರಿಹಾರ ನೀಡಬೇಕೆಂದು ಆಗ್ರಹಿಸಿದರು.

ಜನರನ್ನು ಸಮಾಧಾನಪಡಿಸಿದ ಸಚಿವರು, ಹೆಚ್ಚಿನ ಪರಿಹಾರಕ್ಕಾಗಿ ಮುಖ್ಯಮಂತ್ರಿಗಳೊಂದಿಗೆ ಮಾತನಾಡುವುದಾಗಿ ಭರವಸೆ ನೀಡಿದರು.

## ರಾಜ್ಯದಲ್ಲಿ ಮಳೆ ಅಬ್ಬರ; ಸೆ.16 ವರೆಗೆ ವರ್ಷಧಾರೆ

ಬೆಂಗಳೂರು: ಸೆ.13:ರಾಜ್ಯದಲ್ಲಿ ಮಳೆ ಅಬ್ಬರ ಇನ್ನೊಂದಿಷ್ಟು ದಿನ ಮುಂದುವರೆಯಲಿದ್ದು ಮುಂದಿನ ನಾಲ್ಕು ದಿನ ಅಂದರೆ ಸೆಪ್ಟೆಂಬರ್ 16ರವರೆಗೂ ಮಳೆ ಆರ್ಭಟ ಮುಂದುವರೆಯಲಿದೆ ಎಂದು ಹವಾಮಾನ ಇಲಾಖೆ ಮಾಹಿತಿ ನೀಡಿದೆ.

ಸೆಪ್ಟೆಂಬರ್ 16ವರೆಗೂ ರಾಜ್ಯದ ವಿವಿಧ ಭಾಗಗಳಲ್ಲಿ ಮಳೆ ಆರ್ಭಟ ಜೋರಾಗಿರಲಿದ್ದು, ಉತ್ತರ ಹಾಗೂ ದಕ್ಷಿಣ ಕರ್ನಾಟಕ ಭಾಗದ ಹಲವು ಜಿಲ್ಲೆಗಳಲ್ಲಿ ಮುಂದಿನ ನಾಲ್ಕೈದು ದಿನ ಮಳೆ ಮತ್ತಷ್ಟು ಬಿರುಸುಗೊಳ್ಳುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಇನ್ನು ರಾಜಧಾನಿ ಬೆಂಗಳೂರಿನಲ್ಲಿ ಮಳೆ ಅಬ್ಬರ ಮತ್ತೊಂದಿಷ್ಟು ದಿನ ಮುಂದುವರೆಯುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ಮಾಹಿತಿ ನೀಡಿದ್ದು, ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪುರ, ಚಿತ್ರದುರ್ಗ, ಕೋಲಾರ, ಬಳ್ಳಾರಿ, ಮೈಸೂರು, ಮಂಡ್ಯ, ತುಮಕೂರು, ಬೆಳಗಾವಿ, ಬೀದರ್, ಗದಗ, ರಾಯಚೂರು, ಯಾದಗಿರಿ ಹಾಗೂ ವಿಜಯನಗರ ಜಿಲ್ಲೆಗಳಿಗೆ ಯೆಲ್ಲೋ ಅಲರ್ಟ್ ನೀಡಲಾಗಿದೆ.

ಅಂತೆಯೇ ಉತ್ತರ ಒಳನಾಡಿನಲ್ಲಿ ಇಂದಿನಿಂದ ಮಳೆ ಜೋರಾಗಲಿದೆ. ವಿಜಯಪುರ, ಕಲಬುರಗಿ ಹಾಗೂ ಕೊಪ್ಪಳ ಜಿಲ್ಲೆಗಳಿಗೆ ಆರೆಂಜ್ ಅಲರ್ಟ್ ಘೋಷಿಸಲಾಗಿದೆ. ಅಲ್ಲದೆ ದಕ್ಷಿಣ ಒಳನಾಡು, ಉಡುಪಿ, ಉತ್ತರ ಕನ್ನಡ, ಹಾವೇರಿ, ಚಾಮರಾಜನಗರ, ಚಿಕ್ಕಮಗಳೂರು, ಹಾಸನ, ದಾವಣಗೆರೆ, ರಾಮನಗರ ಹಾಗೂ ಶಿವಮೊಗ್ಗ ಜಿಲ್ಲೆಗಳಲ್ಲಿ ಸಾಧಾರಣ ಮಳೆಯಾಗಲಿದೆ ಎಂದು ಇಲಾಖೆ ತಿಳಿಸಿದೆ.

## 11 ಪೊಲೀಸರ ಅಮಾನತು

ಬೆಂಗಳೂರು:ಸೆ.13: ಡ್ರಗ್ ಪೆಡ್ಲರ್‌ಗಳ ಜೊತೆ ಪಾರ್ಟಿ ಮಾಡಿದ ಆರೋಪದ ಮೇಲೆ ಬೆಂಗಳೂರಿನ ಚಾಮರಾಜಪೇಟೆ ಪೊಲೀಸ್ ಠಾಣೆಯ ಇನ್ಸ್ಪೆಕ್ಟರ್ ಸೇರಿದಂತೆ 11 ಪೊಲೀಸರನ್ನು ಅಮಾನತು ಮಾಡಲಾಗಿದೆ.

ಡ್ರಗ್ ಪೆಡ್ಲರ್ಸ್ ಜೊತೆಗೆ ಪಾರ್ಟಿ ಮಾಡಿದ ಎರಡು ಪೊಲೀಸ್ ಠಾಣೆಗಳ ಒಟ್ಟು 11 ಪೊಲೀಸರನ್ನು ಅಮಾನತು ಮಾಡಲಾಗಿದ್ದು, ಚಾಮರಾಜಪೇಟೆಯ ಏಳು ಪೊಲೀಸರು ಹಾಗೂ ಜೆ.ಜೆ.ನಗರದ ನಾಲ್ವರು ಪೊಲೀಸರನ್ನು ಅಮಾನತು ಮಾಡಿ ಆದೇಶ ಹೊರಡಿಸಲಾಗಿದೆ.

ಚಾಮರಾಜಪೇಟೆ ಪೊಲೀಸ್ ಠಾಣೆಯ ಇನ್ಸ್ಪೆಕ್ಟರ್ ಟಿ ಮಂಜಣ್ಣ ಅವರನ್ನು ನಗರ ಪೊಲೀಸ್ ಆಯುಕ್ತ ಸೀಮಂತ್‌ಕುಮಾರ್ ಸಿಂಗ್ ಅವರು ಅಮಾನತುಗೊಳಿಸಿ ಆದೇಶಿಸಿದ್ದರೆ, ಉಳಿದ ಸಿಬ್ಬಂದಿಗಳನ್ನು ಡಿಸಿಪಿ ಗಿರೀಶ್ ಅವರು ಅಮಾನತುಗೊಳಿಸಿದ್ದಾರೆ.

ಚಾಮರಾಜಪೇಟೆ ಠಾಣೆಯ ಹೆಡ್‌ಕಾನ್ಸ್ಟೆಬಲ್ ರಮೇಶ್ ಶಿವರಾಜ್ ಹಾಗೂ ಕಾನ್ಸ್ಟೆಬಲ್‌ಗಳಾದ ಮಧುಸೂದನ್, ಪ್ರಸನ್ನ, ಶಂಕರ್, ಆನಂದ್ ಹಾಗೂ ಜೆ.ಜೆ.ನಗರ ಪೊಲೀಸ್ ಠಾಣೆಯ ಎಎಸ್‌ಐ ಕುಮಾರ್, ಹೆಡ್ ಕಾನ್ಸ್ಟೆಬಲ್ ಆನಂದ್, ಸಿಬ್ಬಂದಿ ಬಸವಗೌಡ ಸೇರಿ 11 ಮಂದಿಯನ್ನು ಅಮಾನತು ಮಾಡಲಾಗಿದೆ.

## ಸಮಾಜದ ಶಾಂತಿಗೆ ಭಂಗ ತಂದ್ರೆ ಎಚ್ಚರ : ಸಿಎಂ

ಮೈಸೂರು: ಸೆ.13:ದಸರಾ ಉದ್ಘಾಟಕರಾಗಿ ಬೂಕರ್ ಪ್ರಶಸ್ತಿ ವಿಜೇತ ಸಾಹಿತಿ ಬಾನು ಮುಷ್ತಾಕ್ ಆಯ್ಕೆಗೆ ಆರಂಭದಿಂದಲೂ ತೀವ್ರ ವಿರೋಧ ವ್ಯಕ್ತಪಡಿಸುತ್ತಾ ಬಂದಿರುವ ಮಾಜಿ ಸಂಸದ ಪ್ರತಾಪ್ ಸಿಂಹ ಸಮಾಜದ ಶಾಂತಿಗೆಭಂಗತರುವ ಕೆಲಸ ಮಾಡಿದ್ರೆ ಪೊಲೀಸರು ಕ್ರಮ ಕೈಗೊಳ್ಳಲಿದ್ದಾರೆ ಎಂದುಮುಖ್ಯಮಂತ್ರಿ ಸಿದ್ದರಾಮಯ್ಯ ಶನಿವಾರ ಎಚ್ಚರಿಕೆ ನೀಡಿದ್ದಾರೆ.



ಮೈಸೂರಿನವಿಮಾನ ನಿಲ್ದಾಣದಲ್ಲಿಂದು ಸುದ್ದಿಗಾರರೊಂದಿಗೆ ಮಾತನಾಡಿದ ಮುಖ್ಯಮಂತ್ರಿ,ದಸರಾ ಉದ್ಘಾಟನೆಗೆಸಾಹಿತಿ ಬಾನು ಮುಷ್ತಾಕ್ ಅವರಿಗೆಅವಕಾಶ ಕೊಡಬಾರದು ಎಂದು ಪ್ರತಾಪ್ ಸಿಂಹ ಅವರು ನ್ಯಾಯಾಲಯಕ್ಕೆ ಅರ್ಜಿ ಹಾಕಿದ್ದಾರೆ. ನ್ಯಾಯಾಲಯದಲ್ಲಿ ವಿಷಯ ಇತ್ಯರ್ಥವಾಗಲಿ ಎಂದರು.

ದಸರಾ ಒಂದುಧರ್ಮಕ್ಕೆಸೇರಿದಕಾರ್ಯಕ್ರಮವಲ್ಲ.ಸಾಂಸ್ಕೃತಿಕವಾಗಿಎಲ್ಲ ಧರ್ಮದಜನರುಇದರಲ್ಲಿಭಾಗವಹಿಸುತ್ತಾರೆ.ದಸರಾನಾಡಹಬ್ಬವಾಗಿದ್ದು, ಒಂದು ಧರ್ಮದವರು ಮಾತ್ರ ಭಾಗವಹಿಸಬೇಕು ಎಂದೇನೂ ಇಲ್ಲ. ಸಾರ್ವತ್ರಿಕಹಬ್ಬದಲ್ಲಿಎಲ್ಲಜಾತಿಮತ್ತು ಧರ್ಮದವರುಭಾಗವಹಿಸಬಹುದು ಎಂದರು. ಬಿಜೆಪಿ ಮಾಜಿ ಸಂಸದ ಪ್ರತಾಪ್ ಸಿಂಹ ಶಾಂತಿಭಂಗ ಮಾಡುವ ಕೆಲಸ ಮಾಡಿದರೆ ಪೊಲೀಸರು ಕ್ರಮ ಕೈಗೊಳ್ಳುತ್ತಾರೆ ಎಂದು ತಿಳಿಸಿದರು.

ನಾನೂ ಕೂಡ ಒಬ್ಬ ಹಿಂದೂ, ನನ್ನ ಹೆಸರಿನಲ್ಲಿ ಎರಡೂ ದೇವರ ಹೆಸರಿದೆ: ಬಿಜೆಪಿ ನಾಯಕ ಸಿ. ಟಿ. ರವಿ, ಬಸನಗೌಡ ಪಾಟೀಲ್ ಯತ್ನಾಳ್ ಅವರ ವಿರುದ್ಧ ಎಫ್‌ಐಆರ್ ದಾಖಲಾಗಿರುವ ಬಗ್ಗೆ ಮಾತನಾಡಿದ ಸಿಎಂ, ಬಿಜೆಪಿಯವರು ಪ್ರಚೋದನಾಕಾರಿಯಾದ ಭಾಷಣ ಮಾಡಿದರೆ ಏನು ಮಾಡಬೇಕು? ಶಾಂತಿ, ನೆಮ್ಮದಿಯನ್ನು ಕಾಪಾಡುವುದು ಅತ್ಯಂತ ಅವಶ್ಯಕ.

## ಮಾ.5 ರಂದು ನೇಪಾಳ ಸಂಸತ್ ಚುನಾವಣೆ

ಕಠ್ಮಂಡು:ಸೆ.13:ಜೆನ್-ಝಿಪ್ರತಿಭಟನೆಯಿಂದನೇಪಾಳದಲ್ಲಿಕೆ.ಪಿ.ಓಲಿ ನೇತೃತ್ವದ ಸರ್ಕಾರ ಪತನವಾಗಿದ್ದು, ಸುಪ್ರೀಂಕೋರ್ಟ್‌ನ ನಿವೃತ್ತನ್ಯಾಯಮೂರ್ತಿಸುಶೀಲಾಕರ್ಕಿ ಅವರುಹಂಗಾಮಿಪ್ರಧಾನಿಯಾಗಿ ಶುಕ್ರವಾರ ಪ್ರಮಾಣವಚನಸ್ವೀಕರಿಸಿದ್ದಾರೆ. ಇದರ ಬೆನ್ನಲ್ಲೇ ಶನಿವಾರ ನೇಪಾಳಸಂಸತ್ತಿಗೆಚುನಾವಣೆಘೋಷಣೆಯಾಗಿದೆಮುಂದಿನವರ್ಷಮಾರ್ಚ್ 5 ರಂದು ಸಾರ್ವತ್ರಿಕಚುನಾವಣೆ ನಡೆಯಲಿದೆ ಎಂದು ನೇಪಾಳ ಅಧ್ಯಕ್ಷ ರಾಮಚಂದ್ರ ಪೌಡೆಲ್ ಅವರಕಚೇರಿ ಘೋಷಿಸಿದೆ.ಹೊಸದಾಗಿ ನೇವಕಗೊಂಡಪ್ರಧಾನಿಯಶಿಫಾರಸಿನಮೇರೆಗೆಪ್ರತಿನಿಧಿಗಳಸಭೆಯನ್ನು ಶುಕ್ರವಾರ ವಿಸರ್ಜಿಸಿದ್ದು, 2026ರ ಮಾರ್ಚ್ 5 ರಂದು ಮುಂದಿನ ಸಂಸತ್ ಚುನಾವಣೆ ನಡೆಯಲಿದೆ ಎಂದು ಅಧ್ಯಕ್ಷ ಪೌಡೆಲ್ ಹೇಳಿದ್ದಾರೆ. ಸಾಮಾಜಿಕಮಾಧ್ಯಮನಿಷೇಧಮತ್ತು ಭ್ರಷ್ಟಾಚಾರದಆರೋಪದವಿರುದ್ಧ ವ್ಯಾಪಕ ಪ್ರತಿಭಟನೆಗಳನಂತರ ಈ ವಾರ ಓಲಿ ಅವರು ಪ್ರಧಾನಿ ಸ್ಥಾನಕ್ಕೆ ಹಠಾತ್‌ರಾಜೀನಾಮೆ ನೀಡಿದ್ದರು. ನಂತರರಾಜಕೀಯ ಅನಿಶ್ಚಿತತೆಯ ದಿನಗಳನ್ನುಕೊನೆಗೊಳಿಸಲುಮಾಜಿಮುಖ್ಯನ್ಯಾಯಮೂರ್ತಿಕರ್ಕಿ(73) ಅವರು ದೇಶದ ಮೊದಲ ಮಹಿಳಾಪ್ರಧಾನಿಯಾಗಿ ಪ್ರಮಾಣವಚನ ಸ್ವೀಕರಿದ್ದರು.ಪ್ರಧಾನಿಪ್ರಮಾಣವಚನಸಮಾರಂಭದ ಎರಡು ದಿನಗಳ ನಂತರ ಕರ್ಕಿಅವರುಭಾನುವಾರ ಸಣ್ಣ ಸಚಿವ ಸಂಪುಟವನ್ನು ರಚಿಸಲಿದ್ದಾರೆ.ಕರ್ಕಿ ಅವರುಗೃಹ, ವಿದೇಶಾಂಗವ್ಯವಹಾರಮತ್ತು ರಕ್ಷಣಾಸೇರಿದಂತೆಸುಮಾರು ಎರಡುಡಜನ್ ಸಚಿವರನ್ನುತಮ್ಮ ಸಂಪುಟಕ್ಕೆ ಸೇರಿಸಿಕೊಳ್ಳಲಿದ್ದಾರೆ.



ಪ್ರಧಾನಿಯವರುಭಾನುವಾರ ಅಧಿಕಾರವಹಿಸಿಕೊಳ್ಳುವಾಗಅಲ್ಪ ಸಂಖ್ಯೆಯಸಚಿವರನ್ನುಸೇರಿಸಿಕೊಂಡು ಸಚಿವಸಂಪುಟರಚಿಸಲಿದ್ದಾರೆ ಎಂದು ಅಧ್ಯಕ್ಷರ ಕಚೇರಿಯ ಮೂಲಗಳು ತಿಳಿಸಿವೆ.

## ಬಿಜೆಪಿಯ ಧರ್ಮರಕ್ಷಣೆಯ ನಾಟಕ 4 ದಿನಕ್ಕೆ ಸೀಮಿತ: ಪ್ರಿಯಾಂಕ್ ಖರ್ಗೆ

ಬೆಂಗಳೂರು:ಸೆ.13: ಬಿಜೆಪಿಯವರ ಧರ್ಮರಕ್ಷಣೆಯ ನಾಟಕವು 4 ದಿನದ ಪ್ರದರ್ಶನಕ್ಕೆ ಮಾತ್ರ ಸೀಮಿತ ಎಂದು ಸಚಿವ ಪ್ರಿಯಾಂಕ್ ಖರ್ಗೆ ವ್ಯಂಗ್ಯವಾಡಿದ್ದಾರೆ.ಎಕ್ಸ್ ನಲ್ಲಿಪೋಸ್ಟ್ ಮಾಡಿರುವ ಅವರು, ಧರ್ಮಸ್ಥಳ ಚಲೋ ಮಾಡಿದ್ದ ಬಿಜೆಪಿಯವರು ಧರ್ಮಸ್ಥಳವನ್ನು ಮರೆತುಮದ್ದೂರು ಚಲೋ ಮಾಡುತ್ತಿದ್ದಾರೆ. ಬಿಜೆಪಿ ನಾಯಕರು ಧರ್ಮಸ್ಥಳ ಪ್ರಕರಣದಲ್ಲಿ ಏಕಾಏಕಿಮೌನಕ್ಕೆಜಾರಿರುವುದು ಏಕೆಎಂದು ಪ್ರಶ್ನಿಸಿದ್ದಾರೆ.ಬಿಜೆಪಿಯವರ ಧರ್ಮರಕ್ಷಣೆಯನಾಟಕವುನಾಲ್ಕುದಿನದಪ್ರದರ್ಶನಕ್ಕೆಮಾತ್ರ ಸೀಮಿತವೇ? ಸೌಜನ್ಯ ಸಂಬಂಧಿ ವಿಠಲ ಗೌಡರವರು ಧರ್ಮಸ್ಥಳದ ಬಂಗ್ಲೆಗುಡ್ಡದಲ್ಲಿ ಅಸ್ಥಿಪಂಜರಗಳ ರಾಶಿಯೇ ಕಂಡಿದೆ ಎಂಬ ಆಘಾತಕಾರಿ ವಿಷಯಗಳನ್ನು ಬಹಿರಂಗಪಡಿಸಿದ್ದಾರೆ. ಆಸ್ಥಳವು ಅಕ್ಷರಶಃ ಯುದ್ಧಕಣದಂತೆ ಭಾಸವಾಗುತ್ತದೆ ಎಂದು ವರದಿಗಳು ಹೇಳುತ್ತವೆ ಎಂದಿದ್ದಾರೆ. ಸೌಜನ್ಯಳ ಮನೆಗೆ ಭೇಟಿನೀಡಿದ್ದ ಬಿಜೆಪಿಯವರು ಆ ಕುಟುಂಬದವರಹೇಳಿಕೆಯಬಗ್ಗೆ ಏನು ಹೇಳುತ್ತಾರೆ? ವಿಠಲಗೌಡರಹೇಳಿಕೆಯ ಬಗ್ಗೆ ಬಿಜೆಪಿಯವರಮೌನವೇಕೆ? ಬಿಜೆಪಿನಾಯಕರುತಾವುಸೌಜನ್ಯ ಕುಟುಂಬದವರಪರವೋ ಅಥವಾ ಅವರು ಆರೋಪಿಸುತ್ತಿರುವವರ ಪರವೋ ಎಂಬುದನ್ನು ಸ್ಪಷ್ಟಪಡಿಸುವ ಅಗತ್ಯವಿದೆ ಎಂದು ಹೇಳಿದ್ದಾರೆ.



## ಚೀನಾ ಮೇಲೆ ಶೇ.50-100 ಸುಂಕ ವಿಧಿಸಲು ಟ್ರಂಪ್ ಕರೆ

ವಾಷಿಂಗ್ಟನ್:ಸೆ.13:ರಷ್ಯಾದಆರ್ಥಿಕಪ್ರಾಬಲ್ಯವನ್ನು ದುರ್ಬಲಗೊಳಿಸಲು ಚೀನಾದ ಮೇಲೆ ಶೇ.50 ರಿಂದ 100 ರಷ್ಟು ಸುಂಕಗಳನ್ನು ವಿಧಿಸುವಂತೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ನ್ಯಾಟೋಗೆ ಕರೆ ನೀಡಿದ್ದಾರೆ. ಶನಿವಾರಟ್ರಂಪ್ ನ್ಯಾಟೋರಾಷ್ಟ್ರಗಳಿಗೆಪತ್ರವೊಂದನ್ನು ಬರೆದಿದ್ದು, ರಷ್ಯಾದ ತೈಲಖರೀದಿಯನ್ನು ನಿಲ್ಲಿಸುವಂತೆ ಮತ್ತು ರಷ್ಯಾದ ಮೇಲೆಪ್ರಮುಖ ನಿರ್ಬಂಧಗಳನ್ನು ವಿಧಿಸುವಂತೆಮನವಿ ಮಾಡಿದ್ದಾರೆ.ಎಲ್ಲಾ ನ್ಯಾಟೋರಾಷ್ಟ್ರಗಳು ಒಪ್ಪಿಕೊಂಡುಅದೇ ರೀತಿ ಮಾಡಲು ಪ್ರಾರಂಭಿಸಿದಾಗಮತ್ತು ಎಲ್ಲಾ ನ್ಯಾಟೋ ರಾಷ್ಟ್ರಗಳು ರಷ್ಯಾದಿಂದ ತೈಲ ಖರೀದಿಸುವುದನ್ನು ನಿಲ್ಲಿಸಿದಾಗ, ನಾನು ರಷ್ಯಾದ ಮೇಲೆ ಪ್ರಮುಖ ನಿರ್ಬಂಧಗಳನ್ನು ವಿಧಿಸಲು ಸಿದ್ಧನಿದ್ದೇನೆ ಎಂದು ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ.



ರಷ್ಯಾ ಮತ್ತು ಉಕ್ರೇನ್ ಜೊತೆಗಿನಯುದ್ಧಮುಗಿದನಂತರಚೀನಾದಮೇಲಿನ ಶೇ.50ರಿಂದ100 ಸುಂಕಗಳನ್ನುಸಂಪೂರ್ಣವಾಗಿಹಿಂತೆಗೆದುಕೊಳ್ಳಬಹುದು. ಆದರೆ, ಈಗವಿಧಿಸಬಹುದಾದಸುಂಕವು ಯುದ್ಧವನ್ನು ಕೊನೆಗೊಳಿಸುವಲ್ಲಿ ಹೆಚ್ಚಿನಸಹಾಯಮಾಡುತ್ತದೆಎಂದು ಟ್ರಂಪ್ ಪತ್ರದಲ್ಲಿ ಉಲ್ಲೇಖಿಸಿದ್ದಾರೆ. ಚೀನಾ ಮತ್ತು ಭಾರತದ ನಂತರ ನ್ಯಾಟೋ ಸದಸ್ಯ ಟರ್ಕಿ, ರಷ್ಯಾದ ತೈಲದ ಮೂರನೇ ಅತಿದೊಡ್ಡ ಖರೀದಿದಾರರಾಗಿದ್ದಾರೆ. ಇಂಧನ ಮತ್ತು ಶುದ್ಧ ಗಾಳಿಯ ಸಂಶೋಧನಾ ಕೇಂದ್ರದ ಪ್ರಕಾರ, ರಷ್ಯಾದ ತೈಲ ಖರೀದಿಯಲ್ಲಿ ತೊಡಗಿರುವ32 ರಾಷ್ಟ್ರಗಳ ಮೈತ್ರಿಕೂಟದ ಇತರಸದಸ್ಯರಲ್ಲಿ ಹಂಗೇರಿಮತ್ತು ಸ್ಲೋವಾಕಿಯಾ ಸೇರಿವೆ.ಉಕ್ರೇನ್‌ನಲ್ಲಿನ ಯುದ್ಧವನ್ನು ಕೊನೆಗೊಳಿಸಲು ಯಾವುದೇ ಪ್ರಗತಿ ಸಾಧಿಸದಿದ್ದರೆ ರಷ್ಯಾ ಮೇಲೆ ನಿರ್ಬಂಧಗಳು ಮತ್ತು ಅದರ ತೈಲವನ್ನು ಖರೀದಿಸುವ ಪ್ರಮುಖ ಖರೀದಿದಾರರಾದ ಚೀನಾ ಮತ್ತು ಭಾರತದಂತಹ ದೇಶಗಳ ಮೇಲೆ ದ್ವಿತೀಯ ನಿರ್ಬಂಧಗಳನ್ನು ವಿಧಿಸುವುದಾಗಿ ಟ್ರಂಪ್ ಈ ಹಿಂದೆ ಬೆದರಿಕೆ ಹಾಕಿದ್ದರು.ಕಳೆದ ತಿಂಗಳು, ಅಮೆರಿಕದ ಅಧ್ಯಕ್ಷರು ರಷ್ಯಾದ ತೈಲವನ್ನು ನಿರಂತರವಾಗಿ ಆಮದು ಮಾಡಿಕೊಳ್ಳುತ್ತಿರುವುದನ್ನು ಉಲ್ಲೇಖಿಸಿ ಭಾರತೀಯ ಸರಕುಗಳ ಮೇಲೆ ಹೆಚ್ಚುವರಿಯಾಗಿ ಶೇ.25 ಸುಂಕವನ್ನು ವಿಧಿಸಿದ್ದರು. ಆದರೆ, ಚೀನಾ ವಿರುದ್ಧ ಅಂತಹ ಕ್ರಮವನ್ನು ತೆಗೆದುಕೊಂಡಿಲ್ಲ.

## ಕುಟುಂಬ ರಾಜಕಾರಣ ದೇಶದಲ್ಲೇ ಕರ್ನಾಟಕಕ್ಕೆ ನಾಲ್ಕನೇ ಸ್ಥಾನ

ನವದೆಹಲಿ:ಸೆ.13:ದೇಶದಲ್ಲಿಕುಟುಂಬರಾಜಕಾರಣಎಷ್ಟುಬೇರೂರಿದೆಎಂಬುದನ್ನ ವರದಿಯೊಂದುಬಹಿರಂಗಪಡಿಸಿದೆ.ದೇಶದಲ್ಲಿಶೇ.21 ಸಂಸದರು,ಶಾಸಕರು ಕುಟುಂಬರಾಜಕಾರಣದಹಿನ್ನೆಲೆಹೊಂದಿದವರುಎನ್ನಲಾಗಿದೆ.ಅಸೋಸಿಯೇಷನ್ ಫಾರ್ ಡೆಮಾಕ್ರೆಟಿಕ್ ರಿಫಾರ್ಮ್ಸ್ ತನ್ನ ವರದಿಯಲ್ಲಿ ಈ ಮಾಹಿತಿಯನ್ನು ಹೊರಹಾಕಿದೆ.ಕುಟುಂಬರಾಜಕಾರಣದಲ್ಲಿಕರ್ನಾಟಕನಾಲ್ಕನೇಸ್ಥಾನದಲ್ಲಿದೆ. ರಾಜ್ಯದಲ್ಲಿ94 ಮಂದಿವಂಶಪಾರಂಪರ್ಯದಿಂದಅಧಿಕಾರಕ್ಕೆಬಂದವರಿದ್ದಾರೆ. ಉತ್ತರಪ್ರದೇಶದಲ್ಲಿ141 ಮಂದಿ,ಮಹಾರಾಷ್ಟ್ರದಲ್ಲಿ129 ಮಂದಿ,ಬಿಹಾರದಲ್ಲಿ 96 ಮಂದಿಇದ್ದಾರೆ. ಕೊನೆಯಸ್ಥಾನದಲ್ಲಿ ಅಸ್ಸಾಂ ಇದ್ದು, ಇಲ್ಲಿ ಕೇವಲ 9ಮಂದಿಇದ್ದಾರೆ.ಪ್ರಸ್ತುತದೇಶಾದ್ಯಂತಸಂಸದರು,ಶಾಸಕರು,ಎಂಎಲಸಿಗಳಲ್ಲಿ ಐದರಲ್ಲಿಒಬ್ಬರುಕುಟುಂಬರಾಜಕಾರಣದಿಂದಬಂದವರಿದ್ದಾರೆಎಂದುವರದಿ ಹೇಳಿದೆ.ದಕ್ಷಿಣ ಭಾರತದಲ್ಲಿ ಕರ್ನಾಟಕ ಮತ್ತು ಆಂಧ್ರಪ್ರದೇಶದಲ್ಲಿ ವಂಶಾಡಳಿತ ಬಲವಾಗಿ ಬೇರೂರಿದೆ ಎಂದು ಈ ವರದಿ ಹೇಳುತ್ತದೆ.

## ಭಾರಿ ಮಳೆಗೆ ತುಂಬಿ ಹರಿದ ಸೇತುವೆ ಪರದಾಡಿದ ವಾಹನ ಸವಾರರು

ಬೀದರ.ಸೆ. 13 : ಹುಲಸೂರ್ ತಾಲ್ಲೂಕಿನಲ್ಲಿ ಶುಕ್ರವಾರ ಮಧ್ಯಾಹ್ನ ಸುರಿದ ಭಾರಿ ಮಳೆಗೆ ಬೇಲೂರ ಗ್ರಾಮದ ಬಳಿ ಇರುವ ಸೇತುವೆ ಮೇಲಿಂದ ನೀರು ಹರಿದ ಪರಿಣಾಮ ಕೆಲ ಕಾಲ ವಾಹನ ಸವಾರರು ಪರದಾಡುವಂತಾಯಿತು. ಇದರಿಂದಾಗಿ ಹುಲಸೂರ – ಬಸವಕಲ್ಯಾಣ ಸಂಪರ್ಕ ಕಡಿತಗೊಂಡು ಸಂಚಾರ ಸ್ಥಗಿತಗೊಂಡಿತು. ಅಳವಾಯಿ, ತುಗಾಂವ (ಎಚ್), ಮಿರಕಲ, ವಾಂಝುರಖೇಡ್ ಸೇರಿದಂತೆ ಇತರೆಡೆ ಸಾಧಾರಣ ಮಳೆ ಸುರಿದರೆ ಗೋರಟಾ, ಬೇಲೂರ, ಮುಚಳಬ ಗ್ರಾಮದಲ್ಲಿ ಅರ್ಧ ತಾಸು ಭಾರಿ ಮಳೆ ಸುರಿದಿದೆ. ತಾಲ್ಲೂಕಿನಲ್ಲಿ ಸ್ವಲ್ಪ ಮಳೆ ಬಂದರೂ ಸಾಕು ಸೇತುವೆಗಳು ಮುಳುಗಡೆಯಾಗುತ್ತಿದ್ದು, ಹಲವೆಡೆ ಸೇತುವೆಗಳ ಗಾತ್ರ ಹೆಚ್ಚಳವಾಗಬೇಕಿದೆ. ಮಳೆಯಿಂದಾಗಿ ತೊಗರಿ ಬೆಳೆಯಲ್ಲಿ ನೀರು ನಿಂತು ಬೆಳೆ ಹಾನಿಯಾದರೆ ಇನ್ನೊಂದೆಡೆ ಸೋಯಾ ಬೆಳೆ ಕಟಾವಿಗೆ ಬಂದಿದ್ದು ಮಳೆಯಿಂದಾಗಿ ಹೆಚ್ಚಿನ ಬೆಳೆಹಾನಿ ಸಂಭವಿಸಲಿದೆ. ಕೂಡಲೇ ಸರ್ಕಾರ ಅತಿವೃಷ್ಟಿ ಘೋಷಣೆ ಮಾಡಿ ಪರಿಹಾರ ನೀಡಬೇಕು' ಎಂದು ರೈತರು ಆಗ್ರಹಿಸಿದ್ದಾರೆ. ಇಲ್ಲಿಯವರೆಗೆ ಬಿದ್ದ ಮಳೆಯಿಂದ ಗ್ರಾಮೀಣ ಭಾಗದಲ್ಲಿ ಯವುದೇ ಜೀವಹಾನಿಯಾಗಿಲ್ಲವೆಂದು ತಹಶೀಲ್ದಾರ್ ಶಿವಾನಂದ ಮೇತ್ರೆ ತಿಳಿಸಿದ್ದಾರೆ.



**ದುಬೈ:ಸೆ.14 ರಂದು ಏಷ್ಯಾ ಕಪ್‌ನಲ್ಲಿ ಭಾರತ-ಪಾಕಿಸ್ಥಾನ ಪಂದ್ಯ ನಡೆಯಲಿದೆ.ಆಪರೇಷನ್ ಸಿಂಧೂರ ನಂತರ ನಡೆಯುತ್ತಿರುವ ಮೊದಲ ಪಂದ್ಯ ಇದಾಗಿದೆ.**

## ವಿವಾದಾತ್ಮಕ ಸಾಹಿತಿಗಳಿಂದ ದೂರವಿರಿ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಸೆ.13– ಯುವ ಸಾತಿಗಳು ವಿವಾದಾತ್ಮಕ ಸಾಹಿತಿಗಳ ಸಹವಾಸವನ್ನು ದೂರೀಕರಿಸಿ ಸಂಸ್ಕಾರವಂತ ಸಾಹಿತಿಗಳ ಸಹವಾಸ ಬೆಳೆಸಿಕೊಳ್ಳಬೇಕು ಎಂದು ಬಸವೇಶ್ವರ ವೀರಶೈವ ವಿದ್ಯಾವರ್ಧಕಸಂಘದಕಾರ್ಯಾಧ್ಯಕ್ಷ ವೀರಣ್ಣ ಚರಂತಿಮಠ ಹೇಳಿದರು. ನಗರದ ಬಸವೇಶ್ವರ ವೀರಶೈವ ವಿದ್ಯಾವರ್ಧಕ ಸಂಘ ಹಾಗೂ ಬೆಂಗಳೂರಿನ ಅಜೀಂ ಪ್ರೇಮಜಿ ವಿಶ್ವವಿದ್ಯಾಲಯದಸಹಯೋಗದಲ್ಲಿ ಶನಿವಾರ ಜರುಗಿದ 'ತನ್ನತಾನರಿದು ತಾನಾದಡೆ ವಚಕಾರ್ತಿಯರ ಲೋಕದೃಷ್ಟಿ ಸಾಹಿತ್ಯ ಸಹವಾಸ' ಸಾಹಿತ್ಯಿಕ ಸರಣಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ಇತ್ತೀಚಿನದಿನಗಳಲ್ಲಿಕೆಲಸಾಹಿತಿಗಳು ಪ್ರತಿ ವಿಷಯದಲ್ಲೂ ವಿವಾದಾತ್ಮಕ ಹೇಳಿಕೆಗಳನ್ನು ನೀಡಿ ಸಮಾಜ ವ್ಯವಸ್ಥೆಯನ್ನು ಕಲುಷಿತಗೊಳಿಸುವ ಮೂಲಕ ತಮ್ಮ ಜನಪ್ರಿಯತೆಯ ವಿಕೃತಿ ಮೆರೆಯುತ್ತಾರೆ ಎಂದ ಚರಂತಿಮಠ, ಇದು ಭವಿಷ್ಯದ ಯುವ ಸಾಹಿತಿಗಳು ಹಾಗೂ ವಿದ್ಯಾರ್ಥಿಗಳಿಗೆ ಮಾರಕವಾಗಲಿದೆ. ಹೀಗಾಗಿ ಯುವ ಸಾಹಿತಿಗಳು ಇಂತಹ ಸಾಹಿತಿಗಳ ಸಹವಾಸಕ್ಕೆ ಹೋಗಬಾರದು ಎಂದರು.

ವಚನಸಾಹಿತ್ಯ, ದಾಸಸಾಹಿತ್ಯ ಮತ್ತು ಜಾನಪದ ಸಾಹಿತ್ಯ ಕನ್ನಡ ಭಾಷೆಯನ್ನು ಶ್ರೀಮಂತಗೊಳಿಸಿ ಪ್ರಪಂಚಕ್ಕೆ ಪರಿಚಯಿಸುವ ಕಾರ್ಯ ಮಾಡಿವೆ. ಪ್ರಪಂಚದ ಸಾಹಿತ್ಯದಲ್ಲಿ ವಚನ ಸಾಹಿತ್ಯಕ್ಕೆ ಅಗ್ರಸ್ಥಾನವಿದ್ದು ಅಂತಹ ಕನ್ನಡ ವಚನಕಾರ್ತಿಯರ ಲೋಕದೃಷ್ಟಿ ಹಿನ್ನೆಲೆ ಇಟ್ಟುಕೊಂಡು ಇಂತಹ ಕಾರ್ಯಕ್ರಮ ಆಯೋಜಿಸಿರುವುದು ಅತ್ಯಂತ ಅರ್ಥಪೂರ್ಣವಾಗಿದೆ ಎಂದು ವೀರಣ್ಣ ಚರಂತಿಮಠ ಹೇಳಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಹಂಪಿ ಕನ್ನಡ ವಿಶ್ವವಿದ್ಯಾಲಯದನಿವೃತ್ತಪ್ರಾಧ್ಯಾಪಕ ಡಾ.ಅಮರೇಶ ನುಗಡೋಣಿ ವಹಿಸಿ ಮಾತನಾಡಿ, ವಚನಕಾರ್ತಿಯರು ನುಡಿದಂತೆ ನಡೆದು, ಕಾಯಕವೇ ಕೈಲಾಸ ಮತ್ತು ಸಮಾನತೆಯ ಚಿಂತನೆಗಳನ್ನು ಶಿವಶರಣರ ಸಮಾನವಾಗಿ ತರ್ಕಿಸುವಷ್ಟು ಎತ್ತರಕ್ಕೆ ಬೆಳೆದಿದ್ದರು ಎಂದರು. ಬೆಂಗಳೂರಿನಅಜೀಂಪ್ರೇಮಜಿಫೌಂಡೇಶನ್ ಮುಖ್ಯಸಂವಹನಾಧಿಕಾರಿ ಸುಧೀಶ ವೆಂಕಟೇಶ ಪ್ರಾಸ್ತಾವಿಕ ಮಾತನಾಡಿ ಫೌಂಡೇಶನ್ ದಿಂದಹಮ್ಮಿಕೊಂಡಿರುವ ಸಮಾಜಮುಖಿಕಾರ್ಯಕ್ರಮಗಳ ಬಗ್ಗೆ ತಿಳಿಸಿದರು. ಬಸವೇಶ್ವರ ಸಂಘದ ಗೌರವ ಕಾರ್ಯದರ್ಶಿ ಮಹೇಶ ಅಥಣಿ,ಕಾಲೇಜು ಆಡಳಿತ ಮಂಡಳಿ ಕಾಯಾಧ್ಯಕ್ಷಗುರುಬಸವ ಸೂಳಿಭಾವಿ ವೇದಿಕೆಯಲ್ಲಿದ್ದರು. ಬಸವೇಶ್ವರ ಕಲಾ ಮಹಾವಿದ್ಯಾಲಯದ ಸಂಗೀತ ವಿಭಾಗದ ವಿದ್ಯಾರ್ಥಿಗಳು ಪ್ರಾರ್ಥನೆ ಹಾಡಿದರು.ಮಹೇಶಕುಮಾರ ಸಿ.ಎಸ್. ನಿರೂಪಿಸಿದರು. ಸಹ ನಿರ್ದೇಶಕ ಎಸ್.ವಿ.ಮಂಜುನಾಥ ವಂದಿಸಿದರು. ವಚನಕಾರ್ತಿಯರನ್ನು ಕುರಿತು ಚಿತ್ರ ಕಲಾವಿದ ಚ.ಭೀ.ಸೋಮಶೆಟ್ಟಿ ಅವರ ರಚಿಸಿರುವ ರೇಖಾ ಚಿತ್ರ ಪ್ರದರ್ಶನ ನೋಡುಗರನ್ನು ಗಮನ ಸೆಳೆಯಿತು.

# ಮಾಜಿ ಶಾಸಕ ವೀರಣ್ಣ ಚರಂತಿಮಠ ಆರೋಪ ನವನಗರದಲ್ಲಿ ಅನಾರೋಗ್ಯಕರ ವಾತಾವರಣ



ಸೆ.17 ರಂದು ಪ್ರಧಾನಿ ನರೇಂದ್ರ ಮೋದಿ ಜನ್ಮ ದಿನಾಚರಣೆ ನಿಮಿತ್ತ ಬಿಜೆಪಿ ವತಿಯಿಂದ ರಕ್ತದಾನ ಶಿಬಿರ, ಸ್ವಚ್ಛತಾ ಅಭಿಯಾನ ಸೇರಿ ವಿವಿಧ ಕಾರ್ಯಕ್ರಮಗಳನ್ನುಹಮ್ಮಿಕೊಳ್ಳಲಾಗಿದೆ. ಸೆ.25 ದೀನದಯಾಳ ಉಪಾಧ್ಯಾಯ ಜನ್ಮದಿನ ಹಾಗೂ ಅಕ್ಟೋಬರ್ 2 ರಂದು ಮಹಾತ್ಮಾಗಾಂಧಿಜಿ ಹಾಗೂ ಲಾಲಬಹದ್ದೂರ ಶಾಸ್ತ್ರೀ ಅವರ ಜನ್ಮದಿನ ಅಚರಣೆ ನಡೆಯಲಿದ್ದು, ವಿವಿಧ ಸೇವಾ ಕಾರ್ಯಕ್ರಮಗಳನ್ನು ನಡೆಸಲಾಗುವುದು ಎಂದು ಚರಂತಿಮಠ ಹೇಳಿದರು.

ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಸೆ.13–ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆಬಂದಾಗಿನಿಂದ ಬಾಗಲಕೋಟೆನವನಗರದ ಅಭಿವೃದ್ಧಿ ನಿಂತನೀರಾಗಿದ್ದು, ಈ ವಿಷಯದಲ್ಲಿ 10 ವರ್ಷಗಳಷ್ಟು ಹಿಂದೆ ಸರಿದಿದೆ ಎಂದು ಮಾಜಿ ಶಾಸಕ ವೀರಣ್ಣ ಚರಂತಿಮಠ ದೂರಿದರು.

ನಗರದಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನವನಗರ ಅವ್ಯವಸ್ಥೆಯ ಆಗರವಾಗಿದ್ದು, ಸ್ವಚ್ಛತೆಯಂತೂ ಎಲ್ಲೂ ಕಾಣಸಿಗುತ್ತಿಲ್ಲ. ಚರಂಡಿ ನೀರು ಮಿಶ್ರಿತ ಕಲುಷಿತ ಕುಡಿಯುವ ನೀರಿನ ವ್ಯವಸ್ಥೆಯಿಂದಾಗಿ ಜನರ ಆರೋಗ್ಯಹಾಳಾಗಿ ಅನಾರೋಗ್ಯಕರ ವಾತಾವರಣ ನಿರ್ಮಾಣವಾಗಿದೆ ಎಂದು ಹೇಳಿದರು.

ಬೀದಿ ದೀಪಗಳ ಸರಿಯಾದ ವ್ಯವಸ್ಥೆಯಿಲ್ಲ,ಸಾರ್ವಜನಿಕಸ್ಥಳಗಳು, ಉದ್ಯಾಣವನಗಳು ಕಸದಿಂದ ತುಂಬಿವೆ. ರಸ್ತೆ ಬದಿಗಳಲ್ಲಿ ಮುಳ್ಳು ಕಂಟಿಗಳು ಬೆಳೆದು ಸಂಚಾರಕ್ಕೆ ಅಡತಡೆಯುಂಟಾಗಿದೆ. ಕಳ್ಳತನ ಪ್ರಕರಣಗಳು, ಪುಂಡಪೋಕರಿಗಳ ಹಾವಳಿ ಹೆಚ್ಚಾಗಿದ್ದು, ಎಲ್ಲೆಂದರಲ್ಲಿ ಅನೈತಿಕಚಟುವಟಿಕೆಗಳು ನಡೆಯುತ್ತಿವೆ ಎಂದ ಚರಂತಿಮಠ, ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆಬಂದಾಗಿನಿಂದ ಬಾಗಲಕೋಟೆ ಪಟ್ಟಣದ ವ್ಯವಸ್ಥೆ ಸಂಪೂರ್ಣ ಹಾಳಾಗಿ ಹೋಗಿದೆ ಎಂದರು. ಸರ್ಕಾರ ಬಂದು ಎರಡು ವರ್ಷ ಕಳೆದರೂ ಬಿಟಿಡಿಎ ಗೆ ಆಡಳಿತ ಮಂಡಳಿ ಇಲ್ಲದಿರುವುದು ದುರದೃಷ್ಟಕರ ಸಂಗತಿ. ಜಿಲ್ಲಾ ಆಸ್ಪತ್ರೆಯ ಕಂಪೌಂಡ ಬಿದ್ದು ಬಹಳ ದಿನಗಳಾದರೂ ದುರಸ್ಥಿ ಮಾಡಿಲ್ಲ. ಸರಿಯಾದ ನಿರ್ವಹಣೆ ಇಲ್ಲದಿರುವುದರಿಂದ ನವನಗರದ ರಸ್ತೆಗಳಂತೂ ಹಾಳಾಗಿ ಅಪಘಾತಗಳ ತಾಣವಾಗುತ್ತಿವೆ ಎಂದು ದೂರಿದ ಅವರು, ಬಾಗಲಕೋಟೆಯಲ್ಲಿ ಈದಮಿಲಾದ ಸಂದರ್ಭದಲ್ಲಿ ದೇಶದ್ರೋಹಿಗಳು,ಹಮಾಸ್ ಉಗ್ರರ ಭಾವಚಿತ್ರವಿರುವ ಕಟೌಟ ಹಾಕಿದರೂ ಆಡಳಿತ ಯಾವುದೇ ಕ್ರಮಕೈಗೊಳ್ಳದೇ ಇರುವುದನ್ನು ಗಮನಿಸಿದರೆ ಸರ್ಕಾರ ದೇಶದ್ರೋಹಿ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡುತ್ತದೆ ಎಂಬುದು ಸಾಬೀತಾಗುತ್ತಿದೆ ಎಂದು ವೀರಣ್ಣ ಚರಂತಿಮಠ ಹೇಳಿದರು.

ನವನಗರದ ಯುನಿಟ್ 2 ರಲ್ಲಿ ಪೋಲಿಸ್ ಠಾಣೆ ಸ್ಥಾಪಿಸಬೇಕು. ನವನಗರದಲ್ಲಿ ಪೋಲಿಸ್ ಗಸ್ತು ಹೆಚ್ಚಿಸಬೇಕು,ಅನಧಿಕೃತವಾಗಿ ಮಸೀದಿ ನಿರ್ಮಾಣಕ್ಕೆಅವಕಾಶಕೊಟ್ಟಿರುವುದನ್ನು ಹಿಂದಕ್ಕೆ ಪಡೆಯಬೇಕು ಎಂದು ಒತ್ತಾಯಿಸಿ ಅವರು, ಈ ಎಲ್ಲ ಸಮಸ್ಯೆಗಳ ಪರಿಹಾರಕ್ಕೆತ್ವರಿತವಾಗಿ ಕ್ರಮ ಕೈಗೊಳ್ಳದೇ ಇದ್ದರೆ ಬಿಟಿಡಿಎ ಹಾಗೂ ಸರ್ಕಾರದ ವಿರುದ್ಧ ಪ್ರತಿಭಟನೆ ನಡೆಸಲಾಗುವುದು ಎಂದು ಎಚ್ಚರಿಸಿದರು. ಬಿಜೆಪಿ ನಗರ ಮಂಡಲ ಅಧ್ಯಕ್ಷ ಬಸವರಾಜ ಹುನಗುಂದ, ಪಕ್ಷದ ವಕ್ತಾರ ಸತ್ಯನಾರಾಯಣ ಹೇಮಾದ್ರಿ ಇದ್ದರು.

# ಬ್ಯಾಂಕಿನ ಪ್ರಗತಿಗೆ ಸರ್ವರ ಸಹಕಾರ ಅಗತ್ಯ :ಕಲ್ಯಾಣೆ



ಮಲ್ಲಮ್ಮ ನುಡಿ ವಾರ್ತೆ

ಭಾಲ್ಕಿ:ಸೆ.13: ಅರ್ಬನ್ ಬ್ಯಾಂಕ್ ಬೆಳೆಯಬೇಕಾದರೆ ಸರ್ವರ ಸಹಕಾರ ಅಗತ್ಯ ಎಂದು ಬ್ಯಾಂಕ್‌ನ ಅಧ್ಯಕ್ಷ ಶಿವಕುಮಾರ ಕಲ್ಯಾಣೆ ಹೇಳಿದರು.

ಪಟ್ಟಣದ ಶಿವಾಜಿ ಚೌಕ್ ಹತ್ತಿರವಿರುವ ಅರ್ಬನ್ ಕೋ ಅಪರೇಟಿವ್ ಬ್ಯಾಂಕ್‌ನಲ್ಲಿ ಶುಕ್ರವಾರ ಹಮ್ಮಿಕೊಂಡ 2024–25ನೇ ಸಾಲಿನ 43ನೇ ವಾರ್ಷಿಕ ವರದಿ ಮಂಡನೆ ಮತ್ತು ಸರ್ವ ಸದಸ್ಯರ ಸಾಮಾನ್ಯ ಸಭೆ ಉದ್ಘಾಟಿಸಿ ಅವರು ಮಾತನಾಡಿದರು.

ಅರ್ಬನ್ ಬ್ಯಾಂಕು ನಿರ್ದೇಶಕರ ,ಶೇವಣಿದಾರರ,ಗ್ರಾಹಕರ,ಸದಸ್ಯರ,ಸಾಲಗಾರರ ಸಹಕಾರ,ಪ್ರೋತ್ಸಾಹದಿಂದ ಪ್ರತಿ ವರ್ಷ ಲಾಭದತ್ತ ದಾಪುಗಾಲು ಹಾಕುತ್ತಿರುವುದು ಸಂತಸದ ಸಂಗತಿಯಾಗಿದೆ ಎಂದರು.

ಬ್ಯಾಂಕ್‌ನ ವ್ಯವಸ್ಥಾಪಕ ಪ್ರಶಾಂತ ಖಂಡ್ರೆ 43ನೇ ವಾರ್ಷಿಕ ವರದಿ ವಾಚನ ಮಾಡಿ,2025ರ ಮಾರ್ಚ 31 ಕ್ಕೆ ಬ್ಯಾಂಕಿನ ನಿವ್ವಳ ಲಾಭ ರೂ.1089319,ಠೇವಣಿ:ರೂ.220811843,ಸಾಲಗಳು:ರೂ.160961886,ಶೇರು ಬಂಡವಾಳ ರೂ.6547250, ಸದಸ್ಯರ ಸಂಖ್ಯೆ 4603 ಇರುತ್ತದೆ ಎಂದು ತಿಳಿಸಿದರು. ಸದಸ್ಯ ಸತ್ಯವಾನ ವೈರಾಗೆ ಅವರು ,ಪ್ರತಿ ವರ್ಷ ತಾಲೂಕಿಗೆ ಪ್ರಥಮ ಸ್ಥಾನ ಪಡೆದ ಎಸ್‌ಎಸ್‌ಎಲ್‌ಸಿ ,ಪಿಯುಸಿ ವಿದ್ಯಾರ್ಥಿಗಳಿಗೆ ಗರಿಷ್ಠ ಮೊತ್ತದೊಂದಿಗೆಗೌರವಿಸಬೇಕು ಎಂದು ಹೇಳಿದಾಗ ಸರ್ವ ಸದಸ್ಯರು ಚಪ್ಪಾಳೆ ತಟ್ಟಿ ಬೆಂಬಲಿಸಿದರು.ಸದಸ್ಯರಾದ ರಾಹುಲ ಸಾವಳೆ,ಪ್ರಭಾ,ಸಂತೋಷ ಬಿಜಿ ಪಾಟೀಲ್,ಕಾಶಿನಾಥ ಭೂರೆ,ಡಿಡಿ ಶಿಂದೆ,ರಮೇಶ ಮಾಲಪಾಣಿ,ನಾಗಶೆಟ್ಟೆಪ್ಪ ಲಂಜವಾಡೆ ಬ್ಯಾಂಕಿನ ಸುಧಾರಣೆಗೆ ಸಲಹೆ,ಸೂಚನೆ ನೀಡಿದರು.

ಸಭೆಯಲ್ಲಿ ಬ್ಯಾಂಕಿನ ಉಪಾಧ್ಯಕ್ಷ ಸಂಜುಕುಮಾರಗುಂಜರಗೆ,ನಿರ್ದೇಶಕರಾದ ಚಂದ್ರಶೇಖರ ವಂಕೆ,ಜೀವನ ಪೆದ್ದೆ ,ವಿಲಾಸ ಬಕ್ಕಾ, ದಿಲೀಪಕುಮಾರ ಸುಂಟೆ , ಅನಿಲಕುಮಾರ ಲೋಖಂಡೆ,ಬಸವರಾಜಬೊರಡೆ,ಸುರೇಮತಿ ಸಿ ಮಡ್ಡೆ,ಮನಿಶಾ ಎಸ್. ವಾಲೆ,ಶೃತಿ ಸಂತೋಷ ಪಾಟೀಲ್,ಬಾಲಾಜಿ ಬಾಮನೆ,ದೇವರಾಜ ಚವ್ಹಾಣ ಸೇರಿದಂತೆ ಪುರಸಭೆ ಉಪಾಧ್ಯಕ್ಷ ವಿಜಯಕುಮಾರ ರಾಜಭವನ, ಪಿಎಲ್‌ಡಿ ಬ್ಯಾಂಕ್ ಉಪಾಧ್ಯಕ್ಷ ಸೋಮನಾಥಪ್ಪ ಅಷ್ಟೂರೆ,ಸಿದ್ರಾಮಪ್ಪ ಲದ್ದೆ,ಸಿಬ್ಬಂದಿಗಳಾದ ಕಿರಣರ್ಗಿಳೆ,ನಿರ್ವತಿ ಯಾದವ,ಸುರೇಶಗೊರ್ಟೆ,ಉಮಾಕಾಂತ ತಗರಖೆಡೆ,ಸುಪ್ರೀಯಾವಲಾಂಡೆ,ಚನ್ನಬಸವ ಕುಂಚಗೆ,ವಿಜಯಕುಮಾರಶಿಂದೆ,ಮಹೇಶ ಅಷ್ಟೂರೆ,ಬಸವಕುಮಾರ ಹಾಲಕುಡೆ ಸೇರಿದಂತೆ ಸರ್ವ ಸದಸ್ಯರು ಉಪಸ್ಥಿತರಿದ್ದರು.

ವಿದ್ಯಾಭಾರತಿಪಬ್ಲಿಕ್‌ಶಾಲೆಯಮಕ್ಕಳು ನಾಡಗೀತೆ ನುಡಿದರು.ಲೆಕ್ಕಾಧಿಕಾರಿ ಕಾವೇರಿ ಕಾಕನಾಳೆ ವಂದಿಸಿದರು.

# ಉಚಿತ ಆರೋಗ್ಯ ತಪಾಸಣೆ ಶಿಬಿರ ಯಶಸ್ವಿನಿ ಯೋಜನೆಯ ಸದುಪಯೋಗ ಪಡೆದುಕೊಳ್ಳಲು ರೈತರಿಗೆ ಮನವಿ



ಮಲ್ಲಮ್ಮ ನುಡಿ ವಾರ್ತೆ

ಚಿಟಗುಪ್ಪ:ಸೆ.13: ಗ್ರಾಮೀಣ ಜನರಿಗೆ ಉಪಯುಕ್ತವಾಗಲಿ ಮತ್ತು ಅವರ ಆರೋಗ್ಯ ಸಮಸ್ಯೆ ಪರಿಹರಿಸಿಕೊಳ್ಳಲೆಂದು ಬೀದರನ ಗುರುನಾನಕ್ ಮತ್ತು ಮೇಗುರೆ ಆಸ್ಪತ್ರೆ, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ಹಾಗೂ ಯಶಸ್ವಿನಿ ಸಹಕಾರ ಸದಸ್ಯರ ಆರೋಗ್ಯ ರಕ್ಷಣಾ ಟ್ರಸ್ಟ್ ಇವರ ಸಂಯುಕ್ತಾಶ್ರಯದಲ್ಲಿ ತಜ್ಞ ವೈದ್ಯರ ಸಹಕಾರದೊಂದಿಗೆ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ತಾಲೂಕಿನ ನಿರ್ಣಾ ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಆವರಣದಲ್ಲಿ ಶನಿವಾರ ಜರುಗಿತ್ತು. ಗುರುನಾನಕ ಆಸ್ಪತ್ರೆಯ ಮುಖ್ಯಕಾರ್ಯನಿರ್ವಾಹಕ ಅಧಿಕಾರಿ ಎಸ್. ವಿ. ಕಾಮೇಶ್ವರ್ ಮಾತನಾಡಿ, ಗ್ರಾಮೀಣ ಭಾಗದಲ್ಲಿ ಜನರು ಉತ್ತಮ ಚಿಕಿತ್ಸೆಗಾಗಿ ದೂರ ಹೋಗಬೇಕು. ಅದರಲ್ಲೂ ವಯಸ್ಕರಿಗೆ ಹಲವಾರು ಸಮಸ್ಯೆಗಳಿರುತ್ತವೆ. ಹಾಗಾಗಿ ಗುರುನಾನಕ ಮತ್ತು ಮೇಗುರೆ ಆಸ್ಪತ್ರೆ ಬೀದರ್ ಹಾಗೂ ಯಶಸ್ವಿನಿ ಸಹಕಾರ ಸದಸ್ಯರ ಆರೋಗ್ಯ ರಕ್ಷಣಾ ಟ್ರಸ್ಟ್ ವತಿಯಿಂದ ಗ್ರಾಮೀಣ ಜನರಿಗಾಗಿ ಉಚಿತ ಶಿಬಿರವನ್ನು ಏರ್ಪಡಿಸಿ, ನಿರ್ಣಾ ಗ್ರಾಮದ ಸುತ್ತಮುತ್ತಲಿನ ಹಳ್ಳಿಗಳ 350ಕ್ಕೂ ಹೆಚ್ಚು ಜನರು ಬಂದು ಚಿಕಿತ್ಸೆ ಪಡೆದಿದ್ದಾರೆ ಎಂದರು. ಸಂಘದ ಸದಸ್ಯರಿಗೆ ಅಭಿನಂದಿಸಿ, ಮುಂದಿನ ದಿನಗಳಲ್ಲಿ ಇನ್ನೂ ಸಮುದಾಯಕ್ಕೆ ಅನುಕೂಲವಾಗುವ ಕಾರ್ಯಕ್ರಮಗಳನ್ನು ಆಯೋಜನೆ ಮಾಡೋಣ ಎಂದು ತಿಳಿಸಿದರು. ಪಿಕೆಪಿಎಸ್ ಅಧ್ಯಕ್ಷ ಜಗನಾಥರೆಡ್ಡಿ ಎಖೇಳ್ಳಿ ಮಾತನಾಡಿ, ಯಶಸ್ವಿನಿ ಟ್ರಸ್ಟ್ ವತಿಯಿಂದ ನಮ್ಮ ನಿರ್ಣಾ ಗ್ರಾಮ ಸೇರಿದಂತೆ ಸುತ್ತ ಮುತ್ತಲಿನ ಗ್ರಾಮಸ್ಥರಿಗೆ ಗುರುನಾನಕ ಮತ್ತು ಮೇಗುರೆಆಸ್ಪತ್ರೆಯಸಂಯುಕ್ತಾಶ್ರಯದಲ್ಲಿ ಏರ್ಪಡಿಸಿದ್ದ ಉಚಿತ ಆರೋಗ್ಯ ತಪಾಸಣೆಯಲ್ಲಿ 300ಕ್ಕೂ ಹೆಚ್ಚು ಜನರು ಆರೋಗ್ಯದ ತಪಾಸಣೆ ಮಾಡಿಸಿಕೊಂಡಿದ್ದಾರೆ. ಇದಕ್ಕೆ ಸಹಕರಿಸಿದ ನಿರ್ಣಾ ಪಿಕೆಪಿಎಸ್ ನಿರ್ದೇಶಕರಿಗೆ,ಸಿಬ್ಬಂದಿ ವರ್ಗದವರಿಗೆ, ಹಾಗೂ ಗ್ರಾಮಸ್ಥರಿಗೆ ಧನ್ಯವಾದಗಳು ತಿಳಿಸುತ್ತೇನೆ ಎಂದರು. ಯಶಸ್ವಿನಿ ಟ್ರಸ್ಟ್ ಜಿಲ್ಲಾ ಸಂಯೋಜಕ ಪ್ರಶಾಂತ್ ಸೋಪಣ್ಣ ಮಾತನಾಡಿ, ಯಶಸ್ವಿನಿ ಯೋಜನೆ ಅಡ್ಡಿಯಲ್ಲಿ ನೋಂದಣಿ ಮಾಡಿದ ಸದಸ್ಯರಿಗೆ 5 ಲಕ್ಷದ ವರೆಗೆ ಉಚಿತ ಶಸ್ತ್ರಚಿಕಿತ್ಸೆ ಮಾಡಲಾಗುವುದು ಎಂದರು. ಮಹಿಳೆಯರ ಸೀಜರಿನ್ ಸೇರಿದಂತೆ ಹಲವಾರು ಕಾಯಿಲೆಗಳ ಶಸ್ತ್ರಚಿಕಿತ್ಸೆಯನ್ನು ನೋಂದಣಿ ಮಾಡಿದ ಸದಸ್ಯರು ಈ ಯೋಜನೆಯ ಲಾಭ ಪಡೆದುಕೊಳ್ಳಬೇಕೆಂದು ತಿಳಿಸಿದರು. ಡಾ. ಸಂದೀಪ್ ಗಾಯಕವಾಡ, ಡಾ. ಸ್ಫೂರ್ತಿ ದೂರಗದ, ಡಾ. ವಿನೋದ ಖೇಳಗೆ, ಡಾ. ವೈಜಿನಾಥ ಮದನಾ, ಡಾ. ಅಭಿಷೇಕ ಶಿವಮೂರ್ತಿ ಇವರುಗಳು ಆರೋಗ್ಯ ತಪಾಸಣೆ ಮಾಡಿದರು. ಈ ಸಂದರ್ಭದಲ್ಲಿ ಪಿಕೆಪಿಎಸ್ ಉಪಾಧ್ಯಕ್ಷ ಮಲ್ಲಪ್ಪ ಕೋರಿ,ನಿರ್ದೇಶಕರಾದ ರಸೂಲಸಾಬ್ ಲಶ್ಕೇರಿ, ಚಂದ್ರಶೇಖರ್ ಪಾಟೀಲ್, ಜಗನಾಥ, ಸೇರಿದಂತೆ ಗುರುನಾನಕ ಮತ್ತು ಮೇಗುರೆ ಆಸ್ಪತ್ರೆಯ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

# ಯಶಸ್ವಿಯಾಗಿ ಜರುಗಿದ ಮುತ್ತಂಗಿ ಪಿಕೆಪಿಎಸ್ ವಾರ್ಷಿಕ ಮಹಾಸಭೆ




ಮಲ್ಲಮ್ಮ ನುಡಿ ವಾರ್ತೆ

ಚಿಟಗುಪ್ಪ:ಸೆ.13:ತಾಲೂಕಿನ ಮುತ್ತಂಗಿ ಗ್ರಾಮದ ಪ್ರಾಥಮಿಕ ಕಷಿ ಪತ್ತಿನ ಸಹಕಾರ ಸಂಘದ 2024–25 ನೇ ಸಾಲಿನ 68ನೇ ವಾರ್ಷಿಕ ಮಹಾ ಸಭೆ ಸಂಘದ ಕಚೇರಿಯಲ್ಲಿ ಶನಿವಾರ ಜರುಗಿತ್ತು. ಸಂಘದ ಅಧ್ಯಕ್ಷ ರಾಚಪ್ಪ ಎಸ್. ಸಾದಾ ಇವರ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು.ಮುಖ್ಯಕಾರ್ಯನಿರ್ವಾಹಕ ರವಿಕುಮಾರ ಎಂ. ಬಿರಾದಾರ್ ಸಭೆಯ ನಡಾವಳಿ ಓದಿದರು. ಸಮಿತಿ ಮಂಡಿಸಿದ ವಾರ್ಷಿಕ ವರದಿ ಪರಿಗಣಿಸಲಾಯಿತು. ಕಾರ್ಯನಿರ್ವಹಣಾನ್ಯೂನತೆಕುರಿತು ಚರ್ಚಿಸಲಾಯಿತು. ರಸಗೊಬ್ಬರ ಸೇರಿದಂತೆ ನಾನಾ ಸಾಮಗ್ರಿಗಳನ್ನು ಮಾರಾಟ ಮಾಡುವ ಮೂಲಕ ಸಂಘವನ್ನು ಅಭಿವೃದ್ಧಿ ಪಥದತ್ತ ಸಾಗಿಸಲು ಸದಸ್ಯರು ಸೂಚಿಸಿದರು. ಸಂಘದ ಅಧ್ಯಕ್ಷ ರಾಚಪ್ಪ ಎಸ್. ಸಾದಾ ಮಾತನಾಡಿ, ಮುತ್ತಂಗಿ ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ರೈತರ ಮತ್ತು ಹಿರಿಯರ ಸಹಕಾರದೊಂದಿಗೆ ಅತ್ಯುತ್ತಮವಾಗಿ ಮುಂದು ನಡೆಸುತ್ತಯಿದ್ದೇವೆ, ರೈತರು ಈ ಹಿಂದೆ ನೀಡಿದ ಸಹಕಾರದಂತೆ ಮುಂದೆವು ನೀಡಬೇಕು ಎಂದರು. ಎಲ್ಲರ ಸಹಕಾರದಿಂದ ಉತ್ತಮ ಆಡಳಿತ ನೀಡುವುದಾಗಿ ತಿಳಿಸಿದರು. 2024–25ನೇ ಸಾಲಿನಲ್ಲಿ 1,46,77,000 ಸಾವಿರ ರೂ. ನಿವ್ವಳ ಲಾಭ ಗಳಿಸಿದೆ ಎಂದರು. ಈ ಸಂದರ್ಭದಲ್ಲಿ ಸಂಘದ ಉಪಾಧ್ಯಕ್ಷೆ ಶಾಂತಾಬಾಯಿ ಚಂದ್ರಶೆಟ್ಟಿ ಚವ್ಹಾಣ, ನಿರ್ದೇಶಕರಾದ ಈರಶದ್ ಅಲಿ ಉಸ್ಮಾನಸಾಬ ಮಾಡಗಿ, ವೀರಪ್ಪಾ ಕಂಟೆಪ್ಪಾ ಹುಡಗಿ, ಶಾಮರಾವ ಭೋಜು ರಾಠೋಡ, ಸನ್ಮುಕಪ್ಪಾ ನರಸಪ್ಪಾ ಬುರಾನಪೂರ, ಸುರೇಶ ರತನಸಿಂಗ ಪಾಟೀಲ, ಶಾಂತಿಬಾಯಿ ಮಾಣಿಕ ರಾಠೋಡ, ಹಣಮಂತ ತಂದೆ ಶಿವಪ್ಪಾ ಪೂಜಾರಿ, ಅಹ್ಮದ್ ಪಟೇಲ್ ಇಸಾಮೋದ್ದಿನ್ ಪಟೇಲ್, ಸಾವಿತ್ರಾ ನಂದು ರಾಠೋಡ, ಪ್ರೇಮಿಳಾ ಶಂಕರ ಪಾಟೀಲ,

ಸಿಬ್ಬಂದಿಗಳಾದ ವೈಜಿನಾಥ ಚಂದ್ರಪ್ಪ, ನೀಲಕಂಠ ವಾಲು, ಅಮರ ಪಂಚಾಳ, ವೀರಭದ್ರಪ್ಪ, ವಿಜಯಕುಮಾರ್, ಪ್ರಮುಖರಾದ ರಾಮರಾವಕುಲಕರ್ಣಿ, ಬಾಬುಮಿಯಾ ಮಾಡಗಿ, ಮಾರುತಿ ಡಾಕುಳಗಿ, ಕಾಶಿನಾಥ್ ಕಾರಬಾರಿ, ರಾಚಪ್ಪ ಮಾಲಿ ಪಾಟೀಲ್, ಪ್ರಹ್ಲಾದರಾವ್ ಕುಲಕರ್ಣಿ, ಶ್ರೀಕಾಂತರೆಡ್ಡಿ ಪುಟ್ಟ, ಮಲ್ಲಿಕಾರ್ಜುನರೆಡ್ಡಿ ಎಖೇಳ್ಳಿ, ಶಿವರಾಜಪ್ಪ ಮಜಗಿ, ಮಹೇಬೂಬ್ ಅಲಿ ಮದರಗಿ, ಪ್ರಕಶಾ ಸಾಲಿಮಠ, ನಾರಾಯಣ ದಾಸ್, ಬಸವರಾಜ ಪೂಜಾರಿ, ಪರಶುರಾಮ ನಾಯಕ, ಜಗಪ್ಪ ಪೂಜಾರಿ, ಶೆಟ್ಟಿ ಲಸಕರ್, ಗುರು ಮೊತ್ತು, ಓಂನಾಥ ಕಾರಬಾರಿ, ಮಧುರೆಡ್ಡಿ ಮದರಗಿ, ಜಗನಾಥ ಬುರನಾಪುರ ಸೇರಿದಂತೆ ರೈತರು ಉಪಸ್ಥಿತರಿದ್ದರು.



ಚಿಟಗುಪ್ಪ:ಮುತ್ತಂಗಿ ಗ್ರಾಮದ ಹಿರಿಯ ರೈತರಾದ ರಾಮರಾವ ಕುಲಕರ್ಣಿ ಅವರು ಮುಖ್ಯ ಕಾರ್ಯನಿರ್ವಾಹಕ ರವಿಕುಮಾರ ಎಂ. ಬಿರಾದಾರ್ ಇವರಿಗೆ ಅತ್ಯುತ್ತಮವಾಗಿ ಕಾರ್ಯನಿರ್ವಹಿಸುತ್ತಿರುವುದಕ್ಕೆ ಇದೇ ಸಂದರ್ಭದಲ್ಲಿ ಸನ್ಮಾನಿಸಿದರು

## ಮಳೆಯಲ್ಲೂ ಕ್ರೀಡಾಪಟುಗಳ ಸಾಮರ್ಥ್ಯ ಪ್ರದರ್ಶನ



ಬೀದರ. ಸೆ. 13 : ಜಿಟಿಜಿಟಿ ಮಳೆಯಲ್ಲೂವಿದ್ಯಾರ್ಥಿ–ವಿದ್ಯಾರ್ಥಿನಿಯರು ವಿವಿಧ ಕ್ರೀಡೆಗಳಲ್ಲಿ ಭಾಗವಹಿಸಿ ತಮ್ಮ ಸಾಮರ್ಥ್ಯ, ಪ್ರತಿಭೆ ಒರೆಗೆ ಹಚ್ಚಿದರು.

ಶಾಲಾ ಶಿಕ್ಷಣ ಇಲಾಖೆ (ಪದವಿಪೂರ್ವ) ಮತ್ತು ಚಂದ್ರಪ್ಪ ಗೌರಶೆಟ್ಟಿ ಪದವಿಪೂರ್ವ ಕಾಲೇಜಿನ ಸಹಯೋಗದಲ್ಲಿ ನಗರ ನೆಹರೂ ಕ್ರೀಡಾಂಗಣದಲ್ಲಿ ಶುಕ್ರವಾರ ಏರ್ಪಡಿಸಿದ್ದ ಬೀದರ್ ತಾಲ್ಲೂಕುಮಟ್ಟದ ಕ್ರೀಡಾಕೂಟದಲ್ಲಿ ವಿದ್ಯಾರ್ಥಿಗಳು ಉತ್ಸಾಹದಿಂದ ಭಾಗವಹಿಸಿ ತಮ್ಮ ಸಾಮರ್ಥ್ಯ ಪ್ರದರ್ಶಿಸಿದರು.

100 ಮೀಟರ್, 200 ಮೀಟರ್, 400 ಮೀಟರ್, 800 ಮೀಟ–ರ್, 1,500 ಮೀಟರ್ ಅಥ್ಲೆಟಿಕ್ಸ್, ಲಾಂಗ್ ಜಂಪ್, ಹೈ ಜಂಪ್, ಟ್ರಿಪಲ್ ಜಂಪ್, ಶಾಟ್‌ಪುಟ್, ಡಿಸ್ಕಸ್ ಥ್ರೋ, ಜಾವೆಲಿನ್ ಥ್ರೋ ಸ್ಪರ್ಧೆಯಲ್ಲಿ ಭಾಗವಹಿಸಿದರು. ಜಿಟಿಜಿಟಿ ಮಳೆ ಲೆಕ್ಕಿಸದೇ ಎಲ್ಲಾ ಸ್ಪರ್ಧೆಗಳಲ್ಲಿ ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.


ಡಿಡಿಪಿಯು ಚಂದ್ರಕಾಂತ ಶಹಾಬಾದಕರ್ ಉದ್ಘಾಟಿಸಿ, ಸೋಲು–ಗೆಲುವಿಗಿಂತ ಕ್ರೀಡೆಯಲ್ಲಿ ಪಾಲ್ಗೊಳ್ಳುವುದು ಬಹಳ ಮುಖ್ಯ ಎಂದರು.

ಚಿದಂಬರ ಶಿಕ್ಷಣ ಸಂಸ್ಥೆಯ ಆಡಳಿತಾಧಿಕಾರಿ ಡಾ. ಹಾವಗಿರಾವ್ ಮೈಲಾರೆ ಮಾತನಾಡಿ, ದೈಹಿಕ ಮತ್ತು ಮಾನಸಿಕ ಆರೋಗ್ಯಕ್ಕಾಗಿ ಕ್ರೀಡೆ ಬಹಳ ಮುಖ್ಯ ಎಂದು ಹೇಳಿದರು.

ಪ್ರಾಚಾರ್ಯ ಚಂದ್ರಪ್ಪ ಭತಮುರ್ಗೆ, ಕ್ರೀಡೆಗಳಲ್ಲಿ ಭಾಗವಹಿಸುವುದರಿಂದ ಆತ್ಮವಿಶ್ವಾಸ ವೃದ್ಧಿಯಾಗುತ್ತದೆ. ಕ್ರಿಯಾಶೀಲರಾಗಲು ಸಹಕಾರಿಯಾಗಿದೆ ಎಂದು ತಿಳಿಸಿದರು.

ಪ್ರಭು ಎಸ್. ಧ್ವಜಾರೋಹಣ ಮಾಡಿದರು. ಓಂಕಾಂತ ಸೂರ್ಯವಂಶಿ, ವಿಜಯಕುಮಾರ ಪಾಟೀಲ, ವಿಜಯಕುಮಾರ ತೋರಣಕರ್, ಬಾಲಾಜಿ ವಾಡೇಕರ್, ಎಲಿಜಬೆತ್ ಸ್ವರೂಪರಾಣಿ, ರಾಜಶೇಖರ ಮಂಗಲಗಿ, ಸಂಜಯ್ ಜೆಸ್ಸಿ, ಧನರಾಜ ಖೇಣಿ, ನಾಗನಾಥ ಬಿರಾದಾರ, ಎಸ್.ಎಮ್. ಐನಾಪೂರ, ಬಸವರಾಜ ಹೆಗ್ಗೆ ಇದ್ದರು. ತಹರೇನ್ ಪ್ರಾರ್ಥನಾ ಗೀತೆ ಹಾಡಿದರು.

## ಡಿಗ್ಗಿ ಅಂಗನವಾಡಿ ಕೇಂದ್ರದಲ್ಲಿ ರಾಷ್ಟ್ರೀಯ ಪೋಷಣ ಅಭಿಯಾನ



ಮಲ್ಲಮ್ಮ ನುಡಿ ವಾರ್ತೆ

ಕಮಲನಗರ:ಸೆ.13:ಡಿಗ್ಗಿ ಅಂಗನವಾಡಿ ಕೇಂದ್ರ–1ದಲ್ಲಿ ರಾಷ್ಟ್ರೀಯ ಪೋಷಣಾ ಅಭಿಯಾನ ಮತ್ತು ಸಸಿ ನಡುವ ಕಾರ್ಯಕ್ರಮಕ್ಕೆ ಗ್ರಾಮ ಪಂಚಾಯತ ಸದಸ್ಯ ಸುಗುನಾವತಿ ಬಿರಾದಾರ ಶುಕ್ರವಾರ ಚಾಲನೆ ನೀಡಿದರು.

ಅಂಗನವಾಡಿ ಶಿಕ್ಷಕಿ ಸವಿತಾ ಯುವರಾಜ ರಾಂಪುರೆ ಅವರು ಮಾತನಾಡಿ, ಪೌಷ್ಟಿಕ ಆಹಾರ ಸೇವನೆ ಮಾಡುವುದರಿಂದ ಗರ್ಭಿಣಿ ಮತ್ತು ಮಗು ಆರೋಗ್ಯವಾಗಿ ಇರುತ್ತದೆ.

ಅಂಗನವಾಡಿ ಕೇಂದ್ರದಲ್ಲಿ ದೊರೆಯುವ ಪೌಷ್ಟಿಕ ಆಹಾರ ಸೇವನೆ ತಪ್ಪದೆ ಮಾಡಬೇಕೆಂದು ಹೇಳಿದರು. ಕಾರ್ಯಕ್ರಮದಲ್ಲಿ ಭಾಗವಹಿಸಿದ ಎಲ್ಲಾ ಗರ್ಭಿಣಿಯರಿಗೆ ಮತ್ತು ಪಾಲಕರಿಗೆ ಸತ್ಕಾರಿಸಿ ಪೌಷ್ಟಿಕ ಆಹಾರ ಕಿಟ್ ನೀಡಲಾಯಿತು.

ನಂತರ ಹಸಿರೆ ಉಸಿರು ಎನ್ನುವಂತೆ, ಪರಿಶುದ್ಧವಾದ ನಮ್ಮ ಜೀವಕ್ಕೆ ಅತ್ಯ ಅಮೂಲ್ಯವಾಗಿದ್ದು, ಗಿಡ ಮರಗಳ ಬೆಳೆಸುವುದು ನಮ್ಮೆಲ್ಲರ ಆದ್ಯ ಕರ್ತವ್ಯ ಎಂದು ಹೇಳಿದರು. ಎಲ್ಲರೂ ಸೇರಿ ಗಿಡ ನೆಟ್ಟಿ ಸಂಭ್ರಮಿಸಿದರು. ಈ ಸಂದರ್ಭದಲ್ಲಿ ಗ್ರಾಮ ಪಂಚಾಯಿತ ಡಿಗಿಯ ಸಿಬ್ಬಂದಿ, ಗರ್ಭಿಣಿಯರು, ಆಶಾ ಕಾರ್ಯಕರ್ತ, ವಿವಿಧ ಅಂಗನವಾಡಿ ಕೇಂದ್ರದ ಶಿಕ್ಷಕಿಯರು, ಡಿಗ್ಗಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಸಿಬ್ಬಂದಿ ವರ್ಗದವರು ಮತ್ತು ಮಕ್ಕಳು ಇದ್ದರು.




ಕಮಲನಗರ: ಶಿಕ್ಷಕರ ದಿನಾಚರಣೆಯ ಕಾರ್ಯಕ್ರಮದ ನಿಮಿತ್ಯ ಶಾಸಕ ಪ್ರಭು ಚವ್ಹಾಣ ಅವರಿಂದ ಔರಾದ(ಬಿ) ಮತ್ತು ಕಮಲನಗರ ತಾಲೂಕಿನ ಎಲ್ಲಾ ಶಿಕ್ಷಕರಿಗೆ ಗೌರವ ಸನ್ಮಾನ ಮಾಡಲಾಯಿತು. ಚಿತ್ರದಲ್ಲಿ ಗುರುಪ್ಪಾ ಟೊಣ್ಣೆ ಶಾಲೆ ಶಿಕ್ಷಕರಿಗೆ ಸನ್ಮಾನ ಮಾಡಿರುವದು ಕಾಣಬಹುದು

# ಬಿ.ವಿ. ಭೂಮರಡ್ಡಿ ಮಹಾವಿದ್ಯಾಲಯದಲ್ಲಿ ಹಿಂದಿ ವಿಭಾಗದಿಂದ ಒಂದು ದಿನದ ರಾಷ್ಟ್ರೀಯ ಮಟ್ಟದ ವಿಚಾರ ಸಂಕಿರಣ – ಸಮಕಾಲೀನ ಸಾಹಿತ್ಯದಲ್ಲಿ ಯುವಕರ ಮಾನಸಿಕತೆ

ಮಲ್ಲಮ್ಮ ನುಡಿ ವಾರ್ತೆ

ಬೀದರ:ನಗರದ ಬಿ.ವಿ.ಭೂಮರಡ್ಡಿ ಪದವಿ ಮಹಾವಿದ್ಯಾಲಯದಲ್ಲಿ ಹಿಂದಿ ವಿಭಾಗದಿಂದ ಒಂದು ದಿನದ ರಾಷ್ಟ್ರೀಯ ಮಟ್ಟದ ವಿಚಾರ ಸಂಕಿರಣ – ಸಮಕಾಲೀನ ಸಾಹಿತ್ಯದಲ್ಲಿ ಯುವಕರ ಮಾನಸಿಕತೆ ಈ ಕಾರ್ಯಕ್ರಮದ ಉದ್ಘಾಟಕರಾಗಿ ಆಗಮಿಸಿದ ಬೀದರ ವಿಶ್ವವಿದ್ಯಾಲಯ ಬೀದರ ಕುಲಪತಿಗಳಾದ ಡಾ. ಬಿ.ಎಸ್. ಬಿರಾದಾರ ಅವರ ಅಮೃತ ಹಸ್ತದಿಂದ ಜ್ಯೋತಿ ಬೆಳಗುವುದರೊಂದಿಗೆ ಉದ್ಘಾಟಿಸಿ ಮಾತನಾಡುತ್ತಾ ಹಿಂದಿ ಭಾಷೆ ಇಡೀ ಭಾರತದ ಸಂವಹನ ಭಾಷೆಯಾಗಿದೆ ಈ ಭಾಷೆಯಿಂದ ಭಾರತದ ಪ್ರತಿಯೊಂದು ರಾಜ್ಯದ ಪ್ರತಿಯೊಬ್ಬ ಪ್ರಜೆಯ ಮನಸ್ಸಿನ ಭಾವನೆಗಳನ್ನು ಅರಿತುಕೊಳ್ಳಲು ಸಹಾಯಕವಾಗುತ್ತದೆ ಅದರಿಂದ ವಿದ್ಯಾರ್ಥಿಗಳು ಹಿಂದಿ ಭಾಷೆಯನ್ನು ಅಧ್ಯಯನ ಮಾಡಿ ಭಾರತದ ಪರಂಪರೆಯನ್ನು ಪಸರಿಸಬೇಕೆಂದು ಮಾರ್ಮಿಕವಾಗಿ ನುಡಿದರು.



ಇನ್ನೋರ್ವ ಮುಖ್ಯ ಅತಿಥಿಗಳಾದ ಕೇಂದ್ರೀಯ ನಿರ್ದೇಶಕರು ಹಿಂದಿ ಸಂಸ್ಥಾನ ಮೈಸೂರು ಕೇಂದ್ರದ ಡಾ. ರಣಜೀತ ಭಾರತಿ ಅವರು ಮಾತನಾಡುತ್ತಾ ಹಿಂದಿ ಸಾಹಿತ್ಯ ಬಹುದೊಡ್ಡ ಕಾಣಿಕೆಯನ್ನು ಭಾರತ ದೇಶಕ್ಕೆ ನೀಡಿದೆ ಈ ಭಾಷೆ ಕಾಶ್ಮೀರದಿಂದ ಕನ್ಯಾಕುಮಾರಿವರೆಗೆ ಭಾರತದ ಜನಮನಸ್ಸಿನ ಭಾವನೆಗಳನ್ನು ಒಂದುಗೂಡಿಸಿ ದೇಶದ ಕೀರ್ತಿಯನ್ನು ಉತ್ತರದಿಂದ ದಕ್ಷಿಣಕ್ಕೆ ಹಾಗೂ ಪೂರ್ವದಿಂದ ಪಶ್ಚಿಮಕ್ಕೆ ಹರಡಲು ಕಾರಣೀಭೂತವಾಗಿದೆ ಎಂದು ನುಡಿದರು.

ಪ್ರಮುಖ ಭಾಷಣಕಾರರಾದ, ಕರ್ನಾಟಕ ವಿಶ್ವವಿದ್ಯಾಲಯದ ಧಾರವಾಡ ಹಿಂದಿ ವಿಭಾಗದ ಮುಖ್ಯಸ್ಥರಾದ ಪ್ರೊ: ಎಸ್.ಕೆ. ಪವಾರ ಅವರು ಮಾತನಾಡುತ್ತಾ ನಮ್ಮ ಹಿಂದಿ ಭಾಷೆ, ಆದಿವಾಸಿ ಜನಾಂಗ, ಬುಡಕಟ್ಟು ಜನಾಂಗ ಹಾಗೂ ಆರಣ್ಯದಲ್ಲಿ ವಾಸ ಮಾಡುವ ಸೋಲಿಗ ಜನಾಂಗದವರನ್ನು ಸಹ ಭಾರತ ದೇಶದ ಭವ್ಯತೆಗೆ ಹಿಡಿದ ಕನ್ನಡಿ ಹಿಂದಿ ಭಾಷೆಯಾಗಿದೆ ಈ ಭಾಷೆಯು ಮಾನವನ ಹೃದಯಲ್ಲಿ ವಾಸವಾಗಿದೆ. ಪ್ರತಿಯೊಬ್ಬ ಭಾರತೀಯ ಪ್ರಜೆ ಈ ಭಾಷೆ ಕಲಿತಾಗ ಸರ್ವಜನರ ಸುಖ ದುಖಗಳನ್ನು ಅರಿತು ಸರ್ವಜನ ಸುಖನೋ ಭವಂತು ಎಂಬಂತೆ ಕಲಿತಾಗ ಇದರ ಪ್ರಾಮುಖ್ಯತೆ ಎತ್ತಿಹಿಡಲು ಸಾಧ್ಯ ಎಂದು ನುಡಿದರು.

ಕಾರ್ಯಕ್ರಮದ ಘನ ಅಧ್ಯಕ್ಷತೆಯನ್ನು ವಹಿಸಿದ ಹೈದ್ರಾಬಾದ ಕರ್ನಾಟಕ ಶಿಕ್ಷಣ ಸಂಸ್ಥೆಯ ಆಡಳಿತ ಮಂಡಳಿ ಸದಸ್ಯರು ಹಾಗೂ ಬಿ.ವಿ.ಬಿ. ಮಹಾವಿದ್ಯಾಲಯ ಮತ್ತು ಶಾಲಾ ಕಾಲೇಜುಗಳ ಸಂಚಾಲಕರಾದ ಡಾ. ರಜನೀಶ ಎಸ್. ವಾಲಿಯವರು ಮಾತನಾಡುತ್ತಾ ಹಿಂದಿ ಭಾಷೆ ಅತ್ಯಂತ ಪುರಾತನ ಭಾಷೆ ಈ ಭಾಷೆಯಿಂದ ಭಾರತದ ಪ್ರಜೆ ಯಾವುದೇ ರಾಜ್ಯದಲ್ಲಿ ಪ್ರವಾಸ ಮಾಡಿ ಅಲ್ಲಿನ ಗತವೈಭವವನ್ನು ತಿಳಿದುಕೊಂಡು ನಮ್ಮ ಭಾರತದ ಭವ್ಯ ಸಂಸ್ಕೃತಿಯನ್ನು ಇಂದಿನ ವಿದ್ಯಾರ್ಥಿಗಳು ಅರಿತು ವಿದೇಶಗಳಲ್ಲಿ ಸಹ ಹಿಂದಿ ಭಾಷೆಯ ಜನಜಾಗೃತಿಯನ್ನು ಮೂಡಿಸಿ ಭಾರತದ ಕೀರ್ತಿ ಪತಾಕೆಯನ್ನು ಹಾರಿಸಬೇಕೆಂದು ವಿದ್ಯಾರ್ಥಿಗಳಿಗೆ ಕಿವಿ ಮಾತು ಹೇಳಿದರು.

ಈ ವಿಚಾರ ಸಂಕಿರಣದಲ್ಲಿ ಭಾರತದ ವಿವಿಧ ವಿಶ್ವವಿದ್ಯಾಲಯ ಹಾಗೂ ಮಹಾವಿದ್ಯಾಲಯಗಳಿಂದ ಸುಮಾರು 148 ಪ್ರೌಢ ಪ್ರಬಂಧಗಳು ಬಂದಿರುತ್ತವೆ.

ಕಾರ್ಯಕ್ರಮದ ಆರಂಭದಲ್ಲಿ ಪ್ರಾಸ್ತಾವಿಕ ನುಡಿಯನ್ನು ಹಿಂದಿ ವಿಭಾಗದ ಮುಖ್ಯಸ್ಥರಾದ ಡಾ. ದೀಪಾ ರಾಗ ನಡೆಸಿಕೊಟ್ಟರು,

ಕಾರ್ಯಕ್ರಮದ ಮೊದಲಿಗೆ ಪ್ರಾರ್ಥನೆ ಗೀತೆಯನ್ನು ಶ್ರೀಮತಿ ರೇಣುಕಾ ಮಳ್ಳಿ ಹಾಡಿದರೆ, ಸ್ವಾಗತವನ್ನು ಮಹಾವಿದ್ಯಾಲಯದ ಪ್ರಾಂಶುಪಾಲರಾದ ಡಾ. ಪಿ.ವಿಠ್ಠಲ ರಡ್ಡಿ ನಡೆಸಿಕೊಟ್ಟರೆ, ಕಾರ್ಯಕ್ರಮದ ಸಂಚಾಲನೆಯನ್ನು ಶ್ರೀ ಮಾರುತಿ ಭೀಮಣ್ಣಾ ಮಾಡಿದರೆ, ವಂದನೆಯನ್ನು ಶ್ರೀ ನೂರ ಪಾಶಾ ನಡೆಸಿಕೊಟ್ಟರು.

ಈ ಕಾರ್ಯಕ್ರಮದಲ್ಲಿ ಭಾರತದ ವಿವಿಧ ರಾಜ್ಯಗಳ ವಿಶ್ವವಿದ್ಯಾಲಯದಿಂದ, ಮಹಾವಿದ್ಯಾಲಯದಿಂದ ಅನೇಕ ಪ್ರತಿನಿಧಿಗಳು ಆಗಮಿಸಿದ್ದರು, ಮಹಾವಿದ್ಯಾಲಯ ವಿದ್ಯಾರ್ಥಿ, ವಿದ್ಯಾರ್ಥಿನಿಯರು, ಎನ್.ಎಸ್.ಎಸ್., ಎನ್.ಸಿ.ಸಿ. ಹಾಗೂ ಪ್ರಾಧ್ಯಾಪಕರು, ಬೋಧಕೇತರ ಸಿಬ್ಬಂದಿಗಳು ಹಾಜರಿದ್ದರು.

# ಮುಖ್ಯಮಂತ್ರಿಗಳೊಂದಿಗೆ ಇಂದು ಜರುಗಿದ ಅತಿವೃಷ್ಠಿ ಹಾನಿ ಕುರಿತ ವಿಡಿಯೋ ಕಾನ್ಫರೆನ್ಸ್ ಸಭೆ

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ: ಸೆ.13: ಕಲಬುರಗಿ ಜಿಲ್ಲೆಯಲ್ಲಿ ಅಗಸ್ಟ್ ತಿಂಗಳಲ್ಲಿ ಸುರಿದ ಭಾರಿ ಮಳೆಯಿಂದಾಗಿ ಕೃಷಿ ಮತ್ತು ತೋಟಗಾರಿಕಾ ಬೆಳೆಗಳು ಸೇರಿ ಸುಮಾರು 105967 ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ಹಾನಿಯಾಗಿದ್ದು, ಜಂಟಿ ಸಮಿತಿ ಮೂಲಕ ಸಮೀಕ್ಷೆ ಮಾಡಿ, ನಿನ್ನೆಯೇ ಅಂತಿಮ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿದೆ. ದತ್ತಾಂಶಗಳನ್ನು ದಾಖಲಿಸಲು ವೆಬ್ ಸೈಟ್ ಓಪನ್ ಮಾಡಿ, ಪರಿಹಾರ ಬಿಡುಗಡೆಗೆ ತಕ್ಷಣ ಕ್ರಮವಹಿಸಬೇಕೆಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವ ಪ್ರಿಯಾಂಕ ಖರ್ಗೆ ಅವರು ಹೇಳಿದರು.

ಇಂದು ಮಾನ್ಯ ಮುಖ್ಯಮಂತ್ರಿಗಳೊಂದಿಗೆ ಕಲಬುರಗಿ ಜಿಲ್ಲಾಡಳಿತದೊಂದಿಗೆ ವಿಡಿಯೋ ಸಂವಾದದಲ್ಲಿ ಭಾಗವಹಿಸಿ, 2025 ರ ಮುಂಗಾರು ಅವಧಿಯಲ್ಲಿ ಜಿಲ್ಲೆಯಲ್ಲಿ ಉಂಟಾದ ಅತಿವೃಷ್ಟಿಯಿಂದ ಆದ ಹಾನಿಗಳ ಹಾಗೂ ತೆ-ಗೆದುಕೊಂಡ ಕ್ರಮಗಳ ಕುರಿತು ಜರುಗಿದ ವಿಡಿಯೋ ಕಾನ್ಫರೆನ್ಸ್‌ನಲ್ಲಿ ಮಾತನಾಡಿದರು.

ರಾಜ್ಯದಲ್ಲಿಯೇ ಮೊದಲನೆಯದಾಗಿ ಕಲಬುರಗಿ ಜಿಲ್ಲಾಡಳಿತವು ಜಿಲ್ಲೆಯ ಎಲ್ಲ ಗ್ರಾಮಗಳಲ್ಲಿ ಕೃಷಿ ಹಾಗೂ ತೋಟಗಾರಿಕಾ ಬೆಳೆಹಾನಿಯನ್ನು ಕಂದಾಯ, ತೋಟಗಾರಿಕೆ, ಕೃಷಿ ಇಲಾಖೆ ಅಧಿಕಾರಿಗಳ ತಂಡದಿಂದ ಜಂಟಿ ಸಮೀಕ್ಷೆಯನ್ನು ಪೂರೈಸಿದೆ. ಅಲ್ಲದೇ ಸಮೀಕ್ಷೆಯ ಅಂತಿಮ ವರದಿಯನ್ನು ಈಗಾಗಲೇ ಸರ್ಕಾರಕ್ಕೆ ಪ್ರಸ್ತಾವನೆಯೊಂದಿಗೆ ಕಲಬುರಗಿ ಜಿಲ್ಲಾಡಳಿತವು ಸಲ್ಲಿಸಿದೆ. ಮಾನ್ಯ ಮುಖ್ಯಮಂತ್ರಿಗಳು ಈ ಕುರಿತು ಪರಿಶೀಲಿಸಿ, ರೈತರಿಗೆ ಅನುಕೂಲವಾಗುವಂತೆ ತಕ್ಷಣ ಪರಿಹಾರ ಬಿಡುಗಡೆ ಮಾಡಲು ಸೂಕ್ತ ಕ್ರಮವಹಿಸುವಂತೆ ಸೂಚಿಸಿದರು.

ಕಲಬುರಗಿ ಜಿಲ್ಲಾಧಿಕಾರಿ ಬಿ. ಫೌಜಿಯಾ ತರನ್ನುಮ್ ಅವರು ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಸಭೆಗಳನ್ನು ನಿರಂತರವಾಗಿ ಆಯೋಜಿಸುವ ಮೂಲಕ ಜಿಲ್ಲೆಯಲ್ಲಿ ಆಗಿರುವ ಮೂಲಭೂತ ಸೌಕರ್ಯಗಳ ಹಾನಿ ಬಗ್ಗೆ ಪರಿಶೀಲಿನೆ ಈಗಾಗಲೇ ಮಾಡಲಾಗಿದೆ ಎಂದರು.

ಪೂರ್ವ ಮುಂಗಾರಿನಲ್ಲಿ ಬಿತ್ತನೆಯಾಗಿದ್ದ ಬೆಳೆಗಳ ಫಸಲು ಕೊಯ್ಲಿಗೆ ಬಂದಾಗ ಮತ್ತು ಮುಂಗಾರಿನಲ್ಲಿ ಬಿತ್ತಿದ್ದ ಬೆಳೆಗಳು ಫಸಲು ಬಿಡುವ ಹಂತದಲ್ಲಿದ್ದಾಗ ಜಿಲ್ಲೆಯಲ್ಲಿ ನಿರಂತರವಾಗಿ ಮತ್ತು ವಾಡಿಕೆಗಿಂತ ಹೆಚ್ಚಿನ ಪ್ರಮಾಣದಲ್ಲಿ ಮಳೆ ಆಗಿದ್ದರಿಂದ ಹೆಚ್ಚಿನ ಪ್ರಮಾಣದಲ್ಲಿ ಬೆಳೆ ಹಾನಿಯಾಗಿದೆ. ತಾವು ಸಹ ಬೆಳೆ ಹಾನಿ ಪ್ರದೇಶಗಳಿಗೆ ಖುದ್ದು ಭೇಟಿ ನೀಡಿ, ಪರಿಶೀಲಿಸಿ ರೈತರೊಂದಿಗೆ ಸಂವಾದ ಮಾಡಿದ್ದು, ರೈತರು ಕಷ್ಟದಲ್ಲಿದ್ದಾರೆ. ಅವರಿಗೆ ನಿಯಮಾನುಸಾರ ಪರಿಹಾರ ನೀಡಿದ್ದೇವೆ.

ಜಿಲ್ಲಾಧಿಕಾರಿ ಅವರು ಮಾತನಾಡಿ, ಜಿಲ್ಲೆಯಲ್ಲಿ ಅತಿವೃಷ್ಟಿಯಿಂದ ಆಗಿರುವ ಬೆಳೆ ಹಾನಿ ಸಮೀಕ್ಷೆಯನ್ನು ಪೂರ್ಣಗೊಳಿಸಿ, ಅಂತಿಮ ವರದಿಯನ್ನು ಈಗಾಗಲೇ ಸರ್ಕಾರಕ್ಕೆ ಸಲ್ಲಿಸಲಾಗಿದೆ. ಬೆಳೆ ಹಾನಿ ಮಾಹಿತಿ ದಾಖಲಿಸಲು ವೆಬ್‌ಸೈಟ್ ಓಪನ್ ಮಾಡಿದರೆ, ದತ್ತಾಂಶ ದಾಖಲಿಸುವದನ್ನು ಆದಷ್ಟು ಬೇಗ ಪೂರ್ಣಗೊಳಿಸಲಾಗುವುದು. ತಕ್ಷಣಕ್ಕೆ ಪರಿಹಾರ ಕ್ರಮಗಳನ್ನು ಕೈಗೊಳ್ಳಲು ಜಿಲ್ಲಾಧಿಕಾರಿಗಳ ಪಿಡಿ ಖಾತೆ ಹಾಗೂ ಜಿಲ್ಲೆಯ ಎಲ್ಲ ತಾಲೂಕಿನ ತಹಶೀಲ್ದಾರರ ಪಿಡಿ ಖಾತೆಯಲ್ಲಿ ಅನುದಾನ ಲಭ್ಯವಿದೆ ಎಂದರು.

ಮಾನವ ಜೀವಹಾನಿ ಏಪ್ರಿಲ್ 1 ರಿಂದ 7 ನೇ ಸೆಪ್ಟೆಂಬರ್ ಸಿಡಲು,04, ಮನೆಕುಸಿತದಿಂದ 02, ಒಟ್ಟು ಪ್ರಕರಣಗಳು 6 ಇದ್ದು ಪರಿಹಾರವನ್ನು ಈಗಾಗಲೇ ಪಾವತಿಸಲಾಗಿದೆ ಎಂದರು.

ಬೆಳೆ ಹಾನಿಗೆ ಸಂಬಂಧಿಸಿದಂತೆ ಜಂಟಿ ಸಮೀಕ್ಷೆ ಬಗ್ಗೆ ದೃಢೀಕರಿಸಿ 10 ದಿನಗಳರೊಳಗೆ ಸಮೀಕ್ಷೆ ವರದಿ ಸಲ್ಲಿಸಬೇಕು, ಮನೆಹಾನಿ, ಪ್ರಾಣಹಾನಿ, ಜಾನುವಾರು ಹಾನಿ ಪ್ರಕರಣಗಳ್ಲಿ ತಕ್ಷಣ ಪರಿಹಾರ ಕಲ್ಪಿಸಲು ಸೂಚಿಸಿ ರೈತರಿಗೆ ಬೀಜ ರಸಗೊಬ್ಬರ, ಕೀಟನಾಶಕಗಳ ಪೂರೈಕೆಯ ಬಗ್ಗೆಯೂ ಅವಶ್ಯಕ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳುವಂತೆ ಸಂಬಂಧಿಸಿದ ಜಿಲ್ಲಾಧಿಕಾರಿಗಳಿಗೆ ಸೂಚಿಸಿದರು.

ಸಭೆಯಲ್ಲಿ ಜಿಲ್ಲಾ ಪಂಚಾಯತ್ ಮುಖ್ಯಕಾರ್ಯನಿರ್ವಾಹಕ ಅಧಿಕಾರಿ ಭಂವರ್ ಸಿಂಗ್ ಮೀನಾ, ಮಹಾನಗರ ಪಾಲಿಕೆ ಆಯುಕ್ತರಾದ ಅವಿನಾಶ ಶಿಂಧೆ, ಅಪರ ಜಿಲ್ಲಾಧಿಕಾರಿ ರಾಯಪ್ಪ ಹುಣಸಗಿ, ಕಲಬುರಗಿ ಸಹಾಯಕ ಆಯುಕ್ತೆ ಸಾಹಿತ್ಯ, ಸೇಡಂ ಸಹಾಯಕ ಆಯುಕ್ತರಾದ ಪ್ರಭುರಡ್ಡಿ, ಕೃಷಿ ಇಲಾಖೆಯ ಜಂಟಿ ನಿರ್ದೇಶಕ ಸಮ್ಮದ್ ಪಟೇಲ್ ಸೇರಿದಂತೆ ಇತರೆ ಅಧಿಕಾರಿಗಳು ಇದ್ದರು.

# ಗಣತೀಯಲ್ಲಿ ಭಾರತೀಯ ಹಿಂದು ಬ್ರಾಹ್ಮಣ ಎಂದು ಬರೆಸಲು ವೆಂಕಟೇಶ ಕುಲಕರ್ಣಿ ಮನವಿ

ಮಲ್ಲಮ್ಮ ನುಡಿ ವಾರ್ತೆ



ಬೀದರ : ಕರ್ನಾಟಕರಾಜ್ಯ ಹಿಂದುಳಿದ ವರ್ಗಗಳ ಆಯೋಗದಿಂದಇದೇ ತಿಂಗಳ 22 ರಿಂದ ನಡೆ-ಯ ಲಿರುವ ಸಾಮಾಜಿಕ-ಶೈಕ್ಷಣಿಕಜಾತಿಗಣತೀಯಲ್ಲಿಜಿಲ್ಲೇಯ ಎಲ್ಲಾ ಬ್ರಾಹ್ಮಣ ಸಮಾಜದವರುಉಪಪಂಗಡ ಬಿಟ್ಟು 'ಭಾರತೀಯ ಹಿಂದೂ ಬ್ರಾಹ್ಮಣ' ಎಂದು ಬರೆಯಿಸಬೇಕುಎಂದು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದಅಧ್ಯಕ್ಷ ಹಾಗೂ ರಾಜ್ಯಉಪಾಧ್ಯಕ್ಷ ವೆಂಕಟೇಶಕುಲಕರ್ಣಿ ಹುಮನಾಬಾದಪತ್ರಿಕಾ ಪ್ರಕಟಣೆ ಮೂಲಕ ಸಮಾಜ ಬಾಂಧವರಲ್ಲಿ ಮನವಿ ಮಾಡಿದ್ದಾರೆ. ಗಣತಿಯಲ್ಲಿಕ್ರಮ ಸಂಖ್ಯೆ 210 ಬ್ರಾಹ್ಮಣಎಂದುಇದ್ದುಎಲ್ಲರು ಈ ಕ್ರಮ ಸಂಖ್ಯೆಯನ್ನುಗಣತಿದಾರರು ಬಂದಾಗಅವರಿಗೆಹೇಳಿ, ಹಿಂದು ಬ್ರಾಹ್ಮಣಕ್ರಮ ಸಂಖ್ಯೆ 210 ಬರೆಯಿಸಬೇಕು ಎಂದು ಮನವಿ ಮಾಡಿದ್ದಾರೆ.

## ಜಾತಿ ಸಮೀಕ್ಷೇಯಲ್ಲಿ ಬ್ರಾಹ್ಮಣ ಎಂಬ ಏಕೀಕೃತ (ಕ್ರಮ ಸಂಖ್ಯೆ 210) ನಮೂದಿಗೆ ಎಕೆಬಿಎಂಎಸ್ ಮನವಿ



ಮಲ್ಲಮ್ಮ ನುಡಿ ವಾರ್ತೆ

ಬೀದರ:ರಾಜ್ಯಸರ್ಕಾರದಹಿಂದುಳಿದ ವರ್ಗಗಳ ಆಯೋಗವು ಸೆ. 22 ರಿಂದರಾಜ್ಯಾದ್ಯಂತ ಕೈಗೊಂಡಿರುವ ಸಾಮಾಜಿಕ, ಶೈಕಣಿಕ ಹಾಗೂ ಆರ್ಥಿಕ ಸ್ಥಿತಿಗಳ ನಿಖರ ದತ್ತಾಂಶಗಳನ್ನು ದಾಖಲಿಸುತ್ತಿರುವುದುಗಣತೀಯ ಮುಖ್ಯಉದ್ದೇಶವಾಗಿದೆ. ಅದ-ರೇ ಬ್ರಾಹ್ಮಣ ಸಮುದಾಯದಲ್ಲಿ ಅನೇಕ ಉಪಜಾತಿಗಳನ್ನು ಅಂದರೆ ಬ್ರಾಹ್ಮಣ, ಹೊಯ್ಸಳ ಕರ್ನಾಟಕ, ಮಾದ್ವಬ್ರಾಹ್ಮಣ, ಸ್ಮಾರ್ತ ಬ್ರಾಹ್ಮಣ, ಬ್ರಾಹ್ಮಣ ಕ್ರಿಶ್ಚಿಯನ್ನ, ಹೀಗೆ ವಿವಿಧ ಉಪಜಾತಿಗಳಾಗಿ ವಿಂಗಡಿಸಿಗೊಂದಲ ಸೃಷ್ಟಿಸಿದೆ. ಆದ್ದರಿಂದ ಈ ಎಲ್ಲಾ ಗೊಂದಲಗಳನ್ನುನಿವಾರಿಸಿ ಕೇವಲ ಬ್ರಾಹ್ಮಣಎಂದುಅದರಕ್ರಮಸಂಖ್ಯೆ210 ಮಾತ್ರಉಳಿಸಿ ಈ ಗೊಂದಲಗಳಿಗೆ ತೆರೆ ಎಳೆಯಬೇಕೆಂದು ಆಗ್ರಹಿಸಿ ಅಖಿಲ ಕರ್ನಾಟಕ ಬ್ರಾಹ್ಮಣಮಹಾ ಸಭಾಜಿಲ್ಲಾಘಟಕದಅಧ್ಯಕ್ಷ ಹಾಗೂ ರಾಜ್ಯಉಪಾಧ್ಯಕ್ಷವೆಂಕಟೇಶಕುಲಕರ್ಣಿ ಹುಮನಾಬಾದಅವರ ನೇತೃತ್ವದಲ್ಲಿ ಶುಕ್ರವಾರದಂದು ಜಿಲ್ಲಾಧಿಕಾರಿಗಳ ಕಛೇರಿಗೆತೆರಳಿ ಡಿಸಿಅವರಮುಖಾಂತರ ಶ್ರೀ ಮಧುಸೂದನಆರ್ ನಾಯಕ ಅಧ್ಯಕ್ಷರುರಾಜ್ಯಹಿಂದುಳಿದವರ್ಗಗಳ ಆಯೋಗ ಬೆಂಗಳೂರ ಅವರಿಗೆ ಮನವಿ ಸಲ್ಲಿಸಲಾಯಿತು. ಈ ರೀತಿಯ ವಿಭಜನೆ ಸಮುದಾಯದ ಮೂಲಭೂತ ಅಂಕಿ ಅಂಶಗಳನ್ನು ಚದುರಿಸಿ, ನಮ್ಮಒಟ್ಟಾರೇಜನಸಂಖ್ಯಾ ಬಲದ ನಿಖರಚಿತ್ರಣ ಮರೆ ಮಾಚುತ್ತದೆ. ಇದರಿಂದಅರ್ಹ ಬ್ರಾಹ್ಮಣರಿಗೆ ಸರ್ಕಾರದ ಸೌಲತ್ತುಗಳನ್ನು ಸರಿಯಾಗಿತಲುಪುವಲ್ಲಿತೊಂದರೆ ಆಗಬಹುದು. ಇಂತಹ ವಿಭಜನೆಒಟ್ಟಾರೆಅಭಿವೃದ್ದಿಗೆ ಪೂರಕವಾಗಿರುವುದಿಲ್ಲ ಎಂದು ಮನವಿ ಪತ್ರದಲಿ ಹೇಳಲಾಗಿದೆ.

ಆದ್ದರಿಂದಬ್ರಾಹ್ಮಣಸಮುದಾಯದಎಲ್ಲಾ ಪಂಗಡಗಳನ್ನು ಬ್ರಾಹ್ಮಣ ಎಂಬ ಒಂದೇಗುರುತೀನಡಿಕ್ರಮ ಸಂಖ್ಯೆ 210 ಮಾತ್ರಇಡಬೇಕುಎಂದು ಮನವಿ ಮಾಡಲಾಯಿತು. ಈ ಸಂಧರ್ಭದಲ್ಲಿ ಬ್ರಾಹ್ಮಣ ಸಮಾಜದ ಹಿರಿಯರಾದ ಭೀಮಸೇನರಾವ ಕನ್ನಿಹಾಳ, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾರಾಜ್ಯಜಂಟಿಕಾರ್ಯದರ್ಶಿ ರಾಜೇಶಕುಲಕರ್ಣಿ, ರಾಜ್ಯಸಂಘಟನಾ ಕಾರ್ಯದರ್ಶಿ, ಸತೀಷಕುಲಕರ್ಣಿ ಕೊಳಾರ , ರಾಜ್ಯಕಾರ್ಯಕಾರಿಣಿ ಸದಸ್ಯ ಸುನೀಲ ಕುಲಕರ್ಣಿ, ಜಿಲ್ಲಾ ಕಾರ್ಯದರ್ಶಿಗಳಾದ ರಾಮರಾವಕುಲಕರ್ಣಿ ಅನೀಲ ಚಿಕಮನೂರ ಉಪಸ್ಥಿತರಿದ್ದರು.

## ಸಹಕಾರ ಸಂಘದ ವಾರ್ಷಿಕ ಮಹಾಸಭೆ ಇಂದು

ಮಲ್ಲಮ್ಮ ನುಡಿ ವಾರ್ತೆ

ಭಾಲ್ಕಿ: ಪಟ್ಟಣದ ಬಾಲಾಜಿ ಮಂದಿರದಲ್ಲಿ ಸೆ.14 ರಂದು ಭಾನುವಾರ ಮುಂಜಾನೆ 10 ಗಂ-ಟೆಗೆ ವೀರಶೈವ ಪ್ರಾಥಮಿಕ ಶಾಲಾ ಶಿಕ್ಷಕರ ವಿವಿದೋದ್ದೇಶ ಸಹಕಾರ ಸಂಘದ ವಾರ್ಷಿಕ ಮಹಾಸಭೆ ನಡೆಯಲಿದೆ ಎಂದು ಬ್ಯಾಂಕಿನ ಅಧ್ಯಕ್ಷ ಮಲ್ಲಿಕಾರ್ಜುನ ಹಲಮಂಡಗೆ ತಿಳಿಸಿದ್ದಾರೆ. ಈ ಕುರಿತು ಪ್ರಕಟಣೆ ನೀಡಿದ ಅವರು, ಸಂಘದ ವಾರ್ಷಿಕ ಮಹಾಸಭೆಯನ್ನು ಕ್ಷೇತ್ರಶಿಕ್ಷಣಾಧಿಕಾರಿ ಸಿ.ಜಿ.ಹಳ್ಳದ್ ಉದ್ಘಾಟಿಸಲಿದ್ದಾರೆ, ಕಾರ್ಯಕ್ರಮದ ಅಧ್ಯಕ್ಷತೆ ಸಂಘದ ಅಧ್ಯಕ್ಷ ಮಲ್ಲಿಕಾರ್ಜುನ ಹಲಮಂಡಗೆ ವಹಿಸಲಿದ್ದು, ಕಾರ್ಯಕ್ರಮದಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷ ರವೀಂದ್ರರೆಡ್ಡಿ, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಚಂದ್ರಶೇಖರ ಬನ್ನಾಳೆ, ಕಾರ್ಯದರ್ಶಿ ರಾಜೆಪ್ಪ ಪಾಟೀಲ, ಉಪಾಧ್ಯಕ್ಷ ಶಿವಕುಮಾರ ಹೂಗಾರ, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ತಾಲೂಕು ಅಧ್ಯಕ್ಷ ಸೂರ್ಯಕಾಂತ ಸುಂಟೆ, ಕಾರ್ಯದರ್ಶಿ ಅಶೋಕ ಕುಂಬಾರ ಉಪಸ್ಥಿತರಿರುವರು. ಬ್ಯಾಂಕಿನ ಸರ್ವಸದಸ್ಯರು ಹೆಚ್ಚಿನ ಸಂಖೆಯಲ್ಲಿ ಭಾಗವಹಿಸಿ ಕಾರ್ಯಕ್ರಮ ಯಶಸ್ವಿಗೊಳಿಸಬೇಕು ಎಂದು ತಿಳಿಸಿದ್ದಾರೆ.

# ಮಕ್ಕಳ ಬದುಕಿನಲ್ಲಿ ಅರಿವಿನ ಬೆಳಕು ಮೂಡಿಸುವವರು ಶಿಕ್ಷಕರು –ಶಿವಕುಮಾರ ಶ್ರೀಗಳು

ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ: ಶಿಕ್ಷಕರು ನೈತಿಕತೆಯನ್ನು ಪ್ರಾಮಾಣಿಕತೆಯನ್ನು ಕಾಯ್ದುಕೊಳ್ಳಬೇಕು ನಮ್ಮ ದೇಶ ಶಿಕ್ಷಕರಿಗೆ ಉನ್ನತ ಸ್ಥಾನ ನೀಡಿದೆ. ಇಂದಿನ ಜಗತ್ತಿನಲ್ಲಿ ಬೇರೆ ಯಾವುದೂ ಶಕ್ತಿಯಲ್ಲ ಜ್ಞಾನವೇ ದೊಡ್ಡ ಶಕ್ತಿ ನಮ್ಮ ದೇಶ ವಿದ್ಯೆಗೆ ಬಹಳ ಪ್ರಾಮುಖ್ಯ ಕೊಟ್ಟಿದೆ ವಿದ್ಯೆ ಎನ್ನುವುದು ದೊಡ್ಡ ಆಸ್ತಿ ಎಂದು ಕಪ್ಪತ್ ಗುಡ್ಡದ ಶಿವಕುಮಾರ ಶ್ರೀಗಳು ಹೇಳಿದರು



ಇತ್ತೀಚಿಗೆ ಭಾಗ್ಯನಗರ ರಸ್ತೆಯ ಪಾನಗಂಟಿ ಕಲ್ಯಾಣ ಮಂಟಪದಲ್ಲಿ ಕೊಪ್ಪಳ ತಾಲೂಕ ಅನುದಾನ ರಹಿತ ಶಾಲಾ ಆಡಳಿತ ಮಂಡಳಿಗಳ ಒಕ್ಕೂಟ (ಕುಸ್ಮಾ) ಇದರ 20ನೇ ವರ್ಷದ ಸಂಭ್ರಮಚರಣೆ ಹಾಗೂ ಶಿಕ್ಷಕರ ದಿನಾಚರಣೆ ಜೊತೆಗೆ ಉತ್ತಮ ಶಿಕ್ಷಕ ಶಿಕ್ಷಕಿ ಪ್ರಶಸ್ತಿ ಪ್ರಧಾನ ಸಮಾರಂಭ ಉದ್ಘಾಟಿಸಿ ಸಾನಿಧ್ಯವನ್ನು ವಹಿಸಿಕೊಂಡು ಮಾತನಾಡುತ್ತಿದ್ದರು.

ಜ್ಞಾನವೇ ದೊಡ್ಡ ಶಕ್ತಿ. ಮಕ್ಕಳ ಬದುಕಿನಲ್ಲಿ ಅರಿವಿನ ಬೆಳಕು ಬಿತ್ತುವವರು ಶಿಕ್ಷಕರು ರಾಜಕಾರಣಿಗಳು ದೇಶವನ್ನು ಕಟ್ಟುತ್ತೇವೆ ಅನ್ನಬಹುದು ಆದರೆ ನಿಜವಾಗಿ ದೇಶವನ್ನು ಕಟ್ಟುವವರು ಗುರುಗಳು. ರಾಜಕಾರಣಿಗಳು ಆಡಳಿತ ಮಾಡಬಹುದು ಅಷ್ಟೇ ಆದರೆ ನಿಜವಾಗಿ ದೇಶ ಕಟ್ಟುವ ಕೆಲಸ ಮಾಡುವವರು ಶಿಕ್ಷಕರು. ಶಿಕ್ಷಕರಿಗೆ ತಮ್ಮ ವೃತ್ತಿಯ ಬಗ್ಗೆ ಗೌರವ ಅಭಿಮಾನ ಇರಲಿ ಮಕ್ಕಳಿಗೆ ವಿದ್ಯೆ ಕಲಿಸುವುದು ಸರಳವಲ್ಲ ಅದು ಒಂದು ದೊಡ್ಡ ತಪಸ್ಸು. ಶಿಕ್ಷಕರಿಗೆ ಭಾಷೆಯ ಮೇಲೆ ಪ್ರಭುತ್ವ ಬರಲು ವ್ಯಾಕರಣ ಕಲಿಯಬೇಕು ಮತ್ತು ಮಕ್ಕಳಿಗೆ ವ್ಯಾಕರಣವನ್ನು ಕಲಿಸಬೇಕು ವಿದ್ಯೆಯಿಂದ ಬಂದ ಸೌಂದರ್ಯ ಅಪೂರ್ವದದ್ದು ಇನ್ನೊಬ್ಬರ ಕಣ್ಣೀರು ಒರೆಸುವ ಸದ್ವಿತೆಯನ್ನು ಕಲಿಸಬೇಕು ಹಿಂದಿನ ದಿನಮಾನಗಳಲ್ಲಿ ಕಣ್ಣೀರು ಒರೆಸುವ ಅಗತ್ಯ ಬಹಳ ಇದೆ. ವಿದ್ಯೆಗೆ ಗುಪ್ತ ಧನ ಎನ್ನುತ್ತಾರೆ. ಮಕ್ಕಳಿಗೆ ಅಕ್ಷರ ಕಲಿಸಿ ಆ ಅಕ್ಷರದ ಬೆಳಕಿನ ಮೂಲಕವಾಗಿ ಅರಿವಿನ ಬೆಳಕನ್ನು ನಾವು ಮಕ್ಕಳಿಗೆ ತಂದು ಕೊಡುವದಾದರೆ ಅದಕ್ಕಿಂತ ಹೆಚ್ಚಿನ ಸಾರ್ಥಕತೆ ಏನು ಇಲ್ಲ ಎಂದು ಹೇಳಿದರು.

ಸರ್ವಪಲ್ಲಿ ರಾಧಾಕೃಷ್ಣನ್ ರವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿದ ಶಾಸಕ ರಾಘವೇಂದ್ರ ಹಿಟ್ನಾಳ್ ಕಲ್ಯಾಣ ಕರ್ನಾಟಕದಲ್ಲಿ ಶಿಕ್ಷಣಕ್ಕಾಗಿ ಹೆಚ್ಚು ಅನುದಾನ ಖರ್ಚು ಮಾಡಲಾಗುತ್ತಿದೆ ಶಿಕ್ಷಣದ ಗುಣಮಟ್ಟವನ್ನು ಹೆಚ್ಚಿಸುವುದಕ್ಕಾಗಿ ಸತತ ಪ್ರಯತ್ನ ಮಾಡುತ್ತಿದ್ದೇವೆ ಆದರೂ ಸಹ ನಮ್ಮ ಜಿಲ್ಲೆಯ ಫಲಿತಾಂಶ ನೋಡಿದರೆ ದು-ಃಖಕರ ಸಂಗತಿ ಆಗಿದೆ. ಶಿಕ್ಷಕರು ದೇಶದ ನಿರ್ಮಾಪಕರು. ಉನ್ನತ ಗುಣಮಟ್ಟದ ಶಿಕ್ಷಣ ನೀಡುವಲ್ಲಿ ನಾವು ಸಾಕಷ್ಟು ಹಿಂದುಳಿದಿದ್ದೇವೆ. ಕುಸ್ಮಾ ಸಂಘಟನೆ ಕ್ರಿಯಾಶೀಲವಾಗಿ ಕೆಲಸ ಮಾಡುತ್ತಿದೆ. ನಿರಂತರವಾಗಿ ನಾವು ಸಂಘಟನೆಯ ಜೊತೆಗಿದ್ದೇವೆ ಕೆಆರ್‌ಡಿಬಿ ಸಭೆಯಲ್ಲೂ ಸಹ ಖಾಸಗಿ ಶಾಲಾ ಶಿಕ್ಷಣ ಸಂಸ್ಥೆಗಳಿಗೆ ಸಹಾಯ ನೀಡುವ ಕುರಿತು ಅನುದಾನ ನೀಡುವ ಕುರಿತು ಚರ್ಚೆ ಮಾಡಿದ್ದೇವೆ ಇದರ ಬಗ್ಗೆ ಸಚಿವರೊಂದಿಗೆ ಹಾಗೂ ಮುಖ್ಯಮಂತ್ರಿಗಳ ಜೊತೆಗೆ ಚರ್ಚೆ ಮಾಡುತ್ತೇನೆ ಖಾಸಗಿ ಅನುದಾನ ರಹಿತ ಶಾಲೆಗಳಿಗೆ ಅನುದಾನ ನೀಡಿದರೆ ಸಾಕಷ್ಟು ಶಕ್ತಿ ಬರುತ್ತದೆ ಇದಕ್ಕಾಗಿ ನಾನು ಸಹ ಒತ್ತಾಯ ಮಾಡುತ್ತೇನೆ ಎಂದು ಹೇಳಿದರು.

ಇವತ್ತು ಸರ್ಕಾರಿ ಶಾಲೆಗಳನ್ನು ಮುಚ್ಚುವಂತ ಪರಿಸ್ಥಿತಿ ಬಂದಿದೆ. ಸರ್ಕಾರಿ ಶಾಲೆಯಲ್ಲಿ ಓದುತ್ತಿರುವ ಹೈಸ್ಕೂಲ್ ಮಕ್ಕಳಿಗೆ ಓದಲು ಬರುತ್ತಿಲ್ಲ ಎನ್ನುವುದು ವಿಪರ್ಯಾಸದ ಸಂಗತಿ. ಸರ್ಕಾರಿ ಶಾಲೆಗಳ ಗುಣಮಟ್ಟ ಕಡಿಮೆಯಾಗುತ್ತಿದೆ. ಪ್ರತಿಯೊಬ್ಬ ತಂದೆ ತಾಯಿ ಮಕ್ಕಳು ಉತ್ತಮವಾದ ವಿದ್ಯೆಯನ್ನು ಪಡೆಯಲಿ ಮಾರ್ಕ್ಸ್ ಗಳಿಸಲಿ ಎಂದು ಬಯಸುತ್ತಾರೆ. ಖಾಸಗಿ ಶಾಲೆಯಲ್ಲಿ ನೀಡುವ ಉತ್ತಮ ಶಿಕ್ಷಣಕ್ಕೆ ಪಾಲಕರು ತಮ್ಮ ಮಕ್ಕಳನ್ನು ಖಾಸಗಿ ಶಾಲೆಗಳಿಗೆ ಕಳಿಸುತ್ತಿದ್ದಾರೆ. ಖಾಸಗಿ ಶಾಲೆಯ ಆಡಳಿತ ಮಂಡಳಿಯವರು ಬಡವರ ಮಕ್ಕಳಿಗೂ ಅವಕಾಶ ನೀಡಲಿ ಎಂದು ಮುಖ್ಯ ಅತಿಥಿಯಾಗಿದ್ದ ವಿಧಾನ ಪರಿಷತ್ ಸದಸ್ಯ ಹೇಮಲತಾ ನಾಯಕ್ ಹೇಳಿದರು

ಈಶ್ವರಿ ಬ್ರಹ್ಮಕುಮಾರಿಯ ಯೋಗಿನಿ ಅಕ್ಕ ಹಾಗೂ ಜಬೀವುಲ್ಲಾ ಜಾವೇದ್ ವಿಶೇಷ ಉಪನ್ಯಾಸ ನೀಡಿದರು. . ಇದೇ ಸಂದರ್ಭದಲ್ಲಿ ಉತ್ತಮ ಶಿಕ್ಷಕ ಹಾಗೂ ಶಿಕ್ಷಕಿ ಪ್ರಶಸ್ತಿಯನ್ನು ಪ್ರಧಾನ ಮಾಡಲಾಯಿತು. ವಿಶೇಷ ಸಾಧನೆಗೈದ ಆಕ್ಸಫರ್ಡ ಶಾಲೆಯ ಸುಮನ್ ಹಾಗೂ ಜ್ಞಾನ ಗಂಗೋತ್ರಿ ಶಾಲೆಯ ಶಾಲೆಯ ಶರಣಪ್ಪ ಮಾಮನಿವರಿಗೆ ಆತ್ಮೀಯವಾಗಿ ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಶ್ರೀನಿವಾಸ್ ಗುಪ್ತ ,ನಗರಸಭೆ ಅಧ್ಯಕ್ಷ ಅಮ್ಜದ್ ಪಟೇಲ್‌ರೇಣುಕಾ ಏಜೆನ್ಸಿಯ ಪ್ರವೀಣ, ಮಾಜಿ ಅಧ್ಯಕ್ಷ ಅಲೀಮುದ್ದಿನ್, ಆಕ್ಸಪರ್ಡ ಸಂಸ್ಥೆಯ ಸುಮನ್, ತಾಲೂಕ ಕಾರ್ಯದರ್ಶಿ ನಾಗರಾಜ್, ಸೇರಿದಂತೆ ಇತರರು ಉಪಸ್ಥಿತರಿದ್ದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು , ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕುಸ್ಮಾ ಗೌರವಾಧ್ಯಕ್ಷ ರಾಘವೇಂದ್ರ ಪಾನಘಂಟಿ ವಹಿಸಿದ್ದರು. ತಾಲೂಕ ಅಧ್ಯಕ್ಷ ಶಾಹಿದ್ ತಹಸಿಲ್ದಾರ್ ಉಪಸ್ತಿತರಿದ್ದರು. ಸುರೇಶ ಕುಂಬಾರ್, ಮುಲ್ಲಾರ್ ಕಾರ್ಯಕ್ರಮ ನಿರೂಪಿಸಿದರು.

# ಜಾತಿ ಸಮೀಕ್ಷೆ ಹೆಸರಲ್ಲಿ ಹಣ ಲೂಟಿ:ಶ್ರೀರಾಮುಲು ವಾಗ್ದಾಳಿ



ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ: ಈ ತಿಂಗಳ 22 ರಿಂದ ರಾಜ್ಯದಲ್ಲಿ ನಡೆಸಲು ಉದ್ದೇಶಿಸಿರುವ ಹಿಂದುಳಿದ ವರ್ಗಗಳ ಶೈಕ್ಷಣಿಕ, ಆರ್ಥಿಕ, ಜಾತಿಯ ಸಮೀಕ್ಷೆ. ಬಿಪಿಎಲ್ ಕಾರ್ಡುಗಳನ್ನು ರದ್ದು ಮಾಡುವ ಮತ್ತು ಗಣತಿ ಹೆಸರಲ್ಲಿ ಹಣ ಲೂಟಿ ಮಾಡುವ ಹುನ್ನಾರವನ್ನು ಮುಖ್ಯ ಮಂತ್ರಿ ಸಿದ್ದರಾಮಯ್ಯ ಹೊಂದಿದ್ದಾರೆಂದು ಮಾಜಿ ಸಚಿವ ಬಿ.ಶ್ರೀರಾಮುಲು ಆರೋಪಿಸಿದ್ದಾರೆ.

ಅವರು ಇಂದು ನಗರದ ತಮ್ಮ ನಿವಾಸದಲ್ಲಿ ಸುದ್ದಿಗೋಷ್ಠಿ ನಡೆಸಿ. ಹಿಂದುಳಿದ ವರ್ಗಗಳ ಶೈಕ್ಷಣಿಕ, ಆರ್ಥಿಕ, ಜಾತಿಯ ಮರು ಗಣತಿಗೆ ಸರ್ಕಾರ ಮುಂದಾಗಿದೆ. ಬರುವ ಡಿಸೆಂಬರ್ ಒಳಗೆ ವರದಿ ನೀಡಲು ಆಯೋಗದ ಮುಖ್ಯಸ್ಥ. ಮಧು ಸೂಧನ ನಾಯಕ್ ಅವರಿಗೆ ವಹಿಸಿದ್ದಾರೆ. ಮಧು ಸೂಧನ್ ಅವರು ಸಿದ್ದರಾಮಯ್ಯ ಅವರಿಗೆ ಬಹು ಆಪ್ತರು ಎಂಬುದನ್ನು ಮರೆಯಬೇಕಿಲ್ಲ ಎಂದು ಹೇಳಿದರು.

ಕಳೆದ ಹತ್ತು ವರ್ಷಗಳ ಹಿಂದೆ 150 ಕೋಟಿ ರೂ ವೆಚ್ಚ ಮಾಡಿ 54 ಪ್ರಶ್ನೆಗಳ ಮೂಲಕ ಕಾಂತರಾಜ ಸಮಿತಿ ಸಮೀಕ್ಷೆ ವರದಿ ಮಾಡಿತ್ತು. ಅದು ಅವೈಜ್ಞಾನಿಕ ಎಂದು ಈಗ 60 ಪ್ರಶ್ನೆಗಳ ಮೂಲಕ ಸೆ. 22 ರಿಂದ 420 ಕೋಟಿ ರೂ ವೆಚ್ಚದಲ್ಲಿ ಸಮೀಕ್ಷೆ ನಡೆಯಲಿದೆ.

ಸಮೀಕ್ಷೆಯಲ್ಲಿ 52 ಹಿಂದು ಜಾತಿಗಳ ಮುಂದೆ ಕ್ರಿಶ್ಚಿಯನ್ ಸೇರಿಸಿದ್ದಾರೆ. ಇದು ಯಾಕೆ ಸಿದ್ದರಾಮಯ್ಯ ಅವರಿಗೆ ಯಾಕೆ ಅರ್ಥವಾಗುತ್ತಿಲ್ಲ. ಇದು ಜಾತಿಗಳ ನಡುವೆ ದ್ವೇಷ ಮೂಡಿಸುವ ಕೆಲಸವೇ ಎಂದು ಪ್ರಶ್ನಿಸಿದರು.

ಇನ್ನು ಐದು ಗ್ಯಾರೆಂಟಿ ಯೋಜನೆಗಳ ಮೂಲಕ ರಾಜ್ಯದಲ್ಲಿ ಬಡತನ ರೇ-ಖೆಗಿಂತ ಕೆಳಗಿರುವ ಕುಟುಂಬಗಳ ಆರ್ಥಿಕ ಪರಿಸ್ಥಿತಿ ಸುಧಾರಿಸಿದೆ ಎಂದು ಸಮೀಕ್ಷೆ ಮಾಡಿ ಬಿಪಿಎಲ್ ಕಾರ್ಡುಗಳನ್ನು ರದ್ದು ಮಾಡುವ ಹುನ್ನಾರ ನಡೆದಿದೆ ಎಂದು ದೂರಿದರು.

ಅತ್ಯಂತ ಕಡಿಮೆ ಅವಧಿಯಲ್ಲಿ ಸಮೀಕ್ಷೆ ಮಾಡಲು ಹೊರಟಿರುವುದು ಸಮೀಕ್ಷೆ ಹೆಸರಲ್ಲಿ ಹಣವನ್ನು ಲೂಟಿ ಮಾಡಲು ಹೊರಟಿದ್ದಾರೆಂದು ಸಹ ಆರೋಪಿಸಿದರು.

ತಮ್ಮ ಸಿಎಂ ಕುರ್ಚಿಗೆ ಸಂಕಷ್ಟ ಬಂದಾಗಲೆಲ್ಲ ಸಿದ್ದರಾಮಯ್ಯ ಅವರು ಇಂತಹ ಸರ್ವೆಗಳ ಮೂಲಕ ಪಕ್ಷದ ಹೈ ಕಮಾಂಡ್ ಮೇಲೆ ಒತ್ತಡ ತರುವ ಪ್ರಯತ್ನ ಮಾಡುತ್ತಾರೆ ಕುರ್ಚಿ ಉಳಿಸಿಕೊಳ್ಳಲು. ಆದರೂ ಅವರು ತಮ್ಮ 17 ನೇ ರಾಜ್ಯ ಬಜೆಟ್ ಮಂಡಿಸುವುದು ಡೌಟ್ ಎಂದರು ಶ್ರೀರಾಮುಲು.

10 ಲಕ್ಷ ರೂ ಕೊಡಿ;

ಹಾಸದಲ್ಲಿ ನಿನ್ನೆ ಸಂಜೆ ನಡೆದ ಅಪಘಾತದಲ್ಲಿ ಸಾವನ್ನಪ್ಪಿರುವ ನಗರದ ಯುವಕ ಪ್ರವೀಣ್ ಕುಟುಂಬಕ್ಕೆ ರಾಜ್ಯ ಸರ್ಕಾರ 5 ಲಕ್ಷ ರೂ, ಪ್ರಧಾನಿ ಮೋದಿ ಅವರು ಎರೆಡು ಲಕ್ಷರೂ ಪರಿಹಾರ ಘೋಷಣೆ ಮಾಡಿದ್ದಾರೆ.

ಮೃತ ಯುವಕ ಕುಟುಂಬವನ್ನು ಪರಿಪಾಲನೆ ಮಾಡುವ ಭವಿಷ್ಯ ಹೊಂದಿದ್ದ ಅದಕ್ಕಾಗಿ ರಾಜ್ಯ ಸರ್ಕಾರ ಹತ್ತು ಲಕ್ಷ ರೂ ಪರಿಹಾರ ನೀಡುವಂತೆ ಒತ್ತಾಯ ಮಾಡಿದರು.

# ಇಂದಿನ ಯುವ ತಲೆಮಾರು ಉತ್ತಮ ಸಾಹಿತ್ಯ, ಸಂಸ್ಕಾರವಂತ ಸಾಹಿತಿಗಳ ಸಹವಾಸ ಅಗತ್ಯ : ಡಾ.ವೀರಣ್ಣ ಚರಂತಿಮಠ

ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ: ವಿವಾದಾತ್ಮಕ ಸಾಹಿತಿಗಳ ಸಹವಾಸವನ್ನು ದೂರಿಕರಿಸಿ, ಸಂಸ್ಕಾರವಂತ ಸಾಹಿತಿಗಳ, ಉತ್ತಮ ಸಾಹಿತ್ಯ ಸಹವಾಸವನ್ನು ಇಂದಿನ ತಲೆಮಾರು ತಮ್ಮ ಆಕರ್ಷಣೆಯನ್ನು ಬೆಳೆಸಿಕೊಳ್ಳಬೇಕು ಎಂದು ಬಿ.ವಿ.ವಿ.ಸಂಘದ ಕಾರ್ಯಾಧ್ಯಕ್ಷರಾದ ಡಾ.ವೀರಣ್ಣ ಚರಂತಿಮಠ ಹೇಳಿದರು.



ನಗರದ ಬಸವೇಶ್ವರ ವೀರಶೈವ ವಿದ್ಯಾವರ್ಧಕ ಸಂಘ ಹಾಗೂ ಬೆಂಗಳೂರಿನ ಅಜೀಂ ಪ್ರೇಮಜಿ ವಿಶ್ವವಿದ್ಯಾಲಯದ ಸಹಯೋಗದಲ್ಲಿ ಬಿ.ವಿ.ವಿ.ಸಂಘ ನೂತನ ಸಭಾಭವನದಲ್ಲಿ ಶನಿವಾರ ಹಮ್ಮಿಕೊಂಡ ತನ್ನ ತಾನರಿದು ತಾನಾದಡೆ ವಚಕಾರ್ತಿಯರ ಲೋಕದೃಷ್ಟಿ ಸಾಹಿತ್ಯ ಸಹವಾಸ ಎಂಬ ಸಾಹಿತ್ಯಕ ಸರಣಿ ಕಾರ್ಯಕ್ರಮವನ್ನು ಸಸಿ ನಿರೂಣಿಸುವ ಮೂಲಕ ಚಾಲನೆ ನೀಡಿ ಮಾತನಾಡಿದ ಅವರು ಇತ್ತಿಚಿಗೆ ಪ್ರತಿ ವಿಷಯದಲ್ಲೂ ವಿವಾದಾತ್ಮಕ ಹೇಳಿಕೆಗಳನ್ನು ಹೇಳಿ ಸಮಾಜವನ್ನು ಕಲುಷಿತಗೊಳಿಸುವ, ಆ ಮೂಲಕ ತಮ್ಮ ವಿಕೃತ ಜನಪ್ರಿಯತೆಯನ್ನು ಹೆಚ್ಚಿಸಿಕೊಳ್ಳುವ ವಿಚಿತ್ರ ಹಂಬಲದಲ್ಲಿ ಸಾಹಿತಿಗಳು ವಾಲುತ್ತಿದ್ದಾರೆ, ಇದು ಭವಿಷ್ಯದ ಯುವ ಸಾಹಿತಿಗಳು ಹಾಗೂ ವಿದ್ಯಾರ್ಥಿಗಳಿಗೆ ಮಾರಕವಾಗಲಿದೆ, ಹಿಗಾಗಿ ಮುಂಬರುವ ತಲೆಮಾರಿನ ಯುವ ಸಾಹಿತಿಗಳು ಸಂಸ್ಕಾರಯುತ ಸಾಹಿತಿಗಳ ಸಹವಾಸಕ್ಕೆ ಒಳಗಾಗಬೇಕಾದ ಅಗತ್ಯತೆ ಇದೆ, ವಚನಸಾಹಿತ್ಯ, ದಾಸಸಾಹಿತ್ಯ ಮತ್ತು ಜಾನಪದ ಸಾಹಿತ್ಯ ಕ್ಷೇತ್ರಗಳು ಕನ್ನಡ ಭಾಷೆಯನ್ನು ಶ್ರೀಮಂತಗೊಳಿಸಿ ಪ್ರಪಂಚಕ್ಕೆ ಪರಿಚಯಿಸುವ ಕಾರ್ಯ ಮಾಡಿದೆ, ಪ್ರಪಂಚದ ಸಾಹಿತ್ಯದಲ್ಲಿ ವಚನಸಾಹಿತ್ಯ ಕ್ಷೇತ್ರಕ್ಕೆ ಅಗ್ರಸ್ಥಾನವಿದ್ದು ಅಂತಹ ಕನ್ನಡ ವಚನಕಾರ್ತಿಯರ ಲೋಕದೃಷ್ಟಿಯನ್ನು ಹಿನ್ನೆಲೆ ಇಟ್ಟು-ಕೊಂಡು ಬಿವಿವಿಸಂಘ ಹಾಗೂ ಅಜೀಂ ಪ್ರೇಮಜಿ ವಿಶ್ವವಿದ್ಯಾಲಯ ಸಹಯೋಗದಲ್ಲಿ ನಡೆಯುತ್ತಿರುವ ಸಾಹಿತ್ಯ ಸಹವಾಸ ಕಾರ್ಯಕ್ರಮ ಅತ್ಯಂತ ಅರ್ಥಪೂರ್ಣವಾದ ಮಹತ್ವವನ್ನು ಪಡೆದಿದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ ಹಂಪಿ ಕನ್ನಡ ವಿಶ್ವವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕರು ಹಾಗೂ ಸಾಹಿತಿಗಳಾದ ಡಾ.ಅಮರೇಶ ನುಗಡೋಣಿ ಅವರು ಮಾತನಾಡಿ ವಚನಕಾರ್ತಿಯರು ನುಡಿದಂತೆ ನಡೆ, ಕಾಯಕವೇ ಕೈಲಾಸ ಮತ್ತು ಸಮಾನತೆಯ ಚಿಂತನೆಗಳನ್ನು ಶಿವಶರಣರ ಸಮಾನವಾಗಿ ತರ್ಕಿಸುವಷ್ಟು ಎತ್ತರಕ್ಕೆ ಏರಿದ್ದರು ಎಂದರು.

ಬೆಂಗಳೂರಿನ ಅಜೀಂ ಪ್ರೇಮಜಿ ಪೌಂಡೇಷನ್ ಮುಖ್ಯ ಸಂವಹನಾಧಿಕಾರಿ ಸುಧೀಶ ವೆಂಕಟೇಶ ಪ್ರಾಸ್ತಾವಿಕ ಮಾತನಾಡಿ ಅಜೀಂ ಪ್ರೇಮಜಿ ಪೌಂಡೇಷನಿಂದ ಹಮ್ಮಿಕೊಂಡಿರುವ ಸಮಾಜಮುಖಿ ಕಾರ್ಯಕ್ರಮಗಳ ಬಗ್ಗೆ ತಿಳಸಿದರು.

ವೇದಿಕೆ ಮೇಲೆ ಸಂಘದ ಗೌರವ ಕಾರ್ಯದರ್ಶಿ ಮಹೇಶ ಅಥಣಿ, ಕಾಲೇಜು ಆಡಳಿತ ಮಂಡಳಿ ಕಾಯಾಧ್ಯಕ್ಷರಾದ ಗುರುಬಸವ ಸೂಳಿಭಾವಿ ಇದ್ದರು. ಕಾರ್ಯಕ್ರಮದಲ್ಲಿ ವೈದ್ಯಕೀಯ ಆಡಳಿತ ಮಂಡಳಿ ಕಾರ್ಯಾಧ್ಯಕ್ಷ ಅಶೋಕ ಸಜ್ಜನ ಬೇವೂರ, ಡಾ.ಬಾಳಾಸಾಹೇಬ ಲೋಕಾಪುರ, ಸಂಘದ ಆಡಳಿತಾಧಿಕಾರಿ ಡಾ.ವಿಜಯಕುಮಾರ ಕಟಗಿಹಳ್ಳಿಮಠ, ಲೇಖಕರಾದ ಡಾ.ಗುರುಪಾದ ಮರೆಗುದ್ದಿ, ಪ್ರೊ.ಎಸ್.ಆರ್. ಮುಗನೂರಮಠ, ಡಾ.ಜಗನ್ನಾಥ ಚವ್ಹಾಣ, ಅಡಿಯಪ್ಪ ಕುರಿ, ಎಸ್.ವಿ.ಮಂಜುನಾಥ ಸೇರಿದಂತೆ ವಿವಿಧ ಮಹಾವಿದ್ಯಾಲಯಗಳ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಬಸವೇಶ್ವರ ಕಲಾ ಮಹಾವಿದ್ಯಾಲಯದ ಸಂಗೀತ ವಿಭಾಗದ ವಿದ್ಯಾರ್ಥಿಗಳಿಂದ ಪ್ರಾರ್ಥನೆ ಸಲ್ಲಿಸಲಾಯಿತು. ಮಹೇಶಕುಮಾರ ಸಿ.ಎಸ್. ಕಾರ್ಯಕ್ರಮ ನಿರೂಪಿಸಿದರು, ಸಹ ನಿರ್ದೇಶಕರಾದ ಎಸ್.ವಿ.ಮಂಜುನಾಥ ವಂದಿಸಿದರು.

# ಅಸೂಯೆಯಿಂದ ಬದುಕು ಹಸನಾಗದು : ಡಾ. ಮಹಾದೇವಸ್ವಾಮೀಜಿ

ಮಲ್ಲಮ್ಮ ನುಡಿವಾರ್ತೆ

ಕೊಪ್ಪಳ :ಸೆ.13: ಅಕ್ಕಪಕ್ಕದವರ ಬೆಳವಣಿಗೆಯನ್ನು ನೋಡಿ, ಅಸೂಯೇಪಟ್ಟುಕೊಳ್ಳುವುದರಿಂದ ಬದುಕು ಹಸನಾಗದು, ಅದರಿಂದ ಅವಸಾನವಾಗುತ್ತದೆಎಂದುಕುಕನೂರು ಅನ್ನದಾನೀಶ್ವರ ಶಾಖಮಠದ ಡಾ. ಮಹಾದೇವ ಮಹಾಸ್ವಾಮಿಗಳು ಹೇಳಿದರು.

ಕೊಪ್ಪಳ ತಾಲೂಕಿನ ಡೊಂಬರಳ್ಳಿ ಗ್ರಾಮದಲ್ಲಿ ಶ್ರೀ ಶಂಕರಲಿಂಗಜ್ಜನ 41 ನೇ ಪುಣ್ಯತಿಥಿಯ ನಿಮಿತ್ಯ ಹಮ್ಮಿಕೊಂಡಿದ್ದಪುರಾಣಮಹಾಮಂಗಲ ಕಾರ್ಯಕ್ರಮದಲ್ಲಿ ಸಾನಿಧ್ಯ ವಹಿಸಿ ಅವರು ಮಾತನಾಡಿದರು.

ಅವರಿವುರ ಸಾಧನೆಯನ್ನು ನೋಡಿ, ನಾವು ಅವರ ಸಾಧನೆಯ ಹಾದಿ ತುಳಿಯಬೇಕು. ಆದರೆ, ನಾವೆಲ್ಲಾ ಕೊರಗುತ್ತಾ ಕುಳಿತುಕೊಳ್ಳುತ್ತೇವೆ. ಇದರಿಂದ ಮಾನಸಿಕ ನೆಮ್ಮದಿ ಹಾಳಾಗುತ್ತದೆ. ಅವರವರ ಬದುಕು ಅವರಿಗೆ, ನಮ್ಮ ಬದುಕು ನಾವು ಎಂದು ನೆಮ್ಮದಿಯ ಜೀವನ ನಡೆಸಬೇಕು ಎಂದರು.

ದೇವರು ನಮಗೆ ಏನು ಕರುಣಿಸಿದ್ದಾನೆ, ಅದನ್ನು ಆನಂದಿಸಬೇಕು. ಅನುಭವಿಸಬೇಕು. ಅದು ಬಿಟ್ಟು ಬೇರೆಯವರ ಬದುಕನ್ನು ನೋಡುತ್ತಾ ಕುಳಿತರೇ ಅದರಿಂದ ಏನು ಪ್ರಯೋಜನವಾಗವುದಿಲ್ಲ ಎಂದರು.

ಪ್ರತಿಯೊಬ್ಬರಿಗೂ ದೇವರು ಸಮಯವನ್ನು ಅಷ್ಟೇ ನೀಡಿದ್ದಾರೆ.



ಹೀಗಾಗಿ, ಸಮಯ ಅಮೂಲ್ಯವಾಗಿದ್ದು, ಅದನ್ನು ವ್ಯರ್ಥ ಮಾಡದೆ ಸದ್ಬಳಕೆ ಮಾಡಿಕೊಳ್ಳಬೇಕು ಎಂದು ಹೇಳಿದರು.

ಮೈನಳ್ಳಿ-ಬಿಕನಳ್ಳಿ ಗ್ರಾಮದ ಉಜ್ಜಯನಿ ಶಾಖಾಮಠದ ಶ್ರೀ ಸಿದ್ದೇಶ್ವರ ಶಿವಚಾರ್ಯ ಮಹಾಸ್ವಾಮೀಜಿಗಳು ಸಾನಿಧ್ಯ ವಹಿಸಿ ಮಾತನಾಡಿ, ಶರಣರ ತತ್ವಗಳನ್ನು ಅರಿತು ನಡೆಯಬೇಕು. ಬದುಕಿನಲ್ಲಿ ಹಿರಿಯರು, ಗುರುಗಳು ಕಲಿಸಿದ ಪಾಠವನ್ನು ಅಳವಡಿಸಿಕೊಂಡು ಮುನ್ನಡೆದರೇ ಬದುಕು ಬಂಗಾರವಾಗುತ್ತದೆ ಎಂದರು.

ಶರಣರ ತತ್ವ ಅರಿಯಲು ಇಂಥ ಪುರಾಣದಂತಹ ಕಾರ್ಯಕ್ರಮಗಳು ಅರ್ಥಪೂರ್ಣವಾಗಿವೆ. ಅದರಲ್ಲೂ ಡೊಂಬರಳ್ಳಿ ಗ್ರಾಮದಲ್ಲಿ ಜಾಗೃತ ಮನಸ್ಸುಗಳು ಇರುವುದರಿಂದ ಸಾಕಷ್ಟು ಪ್ರಗತಿಯನ್ನು ಹೊಂದಲು ಸಾಧ್ಯವಾಗಿದೆ ಎಂದರು.

ಡೊಂಬರಳ್ಳಿ ಗ್ರಾಮದಲ್ಲಿ ಬಂದು ನೆಲಸಿದದ್ದ ಶ್ರೀ ಶಂಕರಲಿಂಗಜ್ಜನ ಅವರ 41 ನೇ ಪುಣ್ಯಸ್ಮರಣೆ ಕಾರ್ಯಕ್ರಮ ನಿಜಕ್ಕೂ ಅರ್ಥಪೂರ್ಣ ಎಂದರು.

ಮೆರವಣಿಗೆ-ಪುರಾಣಮಹಾಮಂಗಲ ನಿಮಿತ್ಯ ಶ್ರೀ ಶಂಕರಲಿಂಗಜ್ಜನ ಭಾವಚಿತ್ರ ಮೆರವಣಿಗೆ ಶನಿವಾರ ವಿಜೃಂಭಣೆಯಿಂದ ನೆರವೇರಿತು. ವಾದ್ಯ,ವೃಂದಗಳಿಂದ ಮೆರವಣಿಗೆಗೆ ಕಳೆ ಹೆಚ್ಚಾಗಿರುವುದು ಕಂಡು ಬಂದಿತು. ಬಿ.ಎಸ್. ಪಾಟೀಲ್ ಅವರು ಕಾರ್ಯಕ್ರಮ ನಿರೂಪಿಸಿದರು. ಗ್ರಾಮದ ಹಿರಿಯರು ಇದ್ದರು.

# ಗುಣಮಟ್ಟದ ಕೆಲಸದೊಂದಿಗೆ ನಿಗದಿತ ಅವಧಿಯಲ್ಲಿ ಮುಗಿಸಿ: ಶಾಸಕ ಪಾಟೀಲ್ ಸೂಚನೆ



ಮಲ್ಲಮ್ಮನುಡಿವಾರ್ತೆಯಾದಗಿರಿ:ಸೆ.13: "ಕಾಮಗಾರಿ ಗುಣಮಟ್ಟದಾಗಿರಬೇಕು ಮತ್ತು ನಿಗದಿತ ಅವಧಿಯೊಳಗೆ ಪೂರ್ಣಗೊಳ್ಳಬೇಕು" ಎಂದು ಶಾಸಕ ಚನ್ನಾರೆಡ್ಡಿ ಪಾಟೀಲ್ ತುನ್ನೂರ್ ಹೇಳಿದರು.

ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮ್ಯಾಕ್ರೋ ಯೋಜನೆ ಅಡಿಯಲ್ಲಿ 3.48 ಕೋಟಿ ರೂ. ವೆಚ್ಚದಲ್ಲಿ ಕೈಗೆತ್ತಿಕೊಂಡಿರುವ ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ಸಿಬ್ಬಂದಿ ವಸತಿ ಗೃಹಗಳ ನಿರ್ಮಾಣ ಕಾಮಗಾರಿಗೆ ಶುಕ್ರವಾರ ಕುರಕುಂದಾದಲ್ಲಿ ಅಡಿಗಲ್ಲು ಇಟ್ಟು ಮಾತನಾಡಿದರು.

ಅವರು ಮುಂದುವರಿದು, "ಆರೋಗ್ಯ ಕೇಂದ್ರ ಮತ್ತು ವಸತಿ ನಿಲಯಗಳ ಬೇಡಿಕೆ ಬಹುಕಾಲದಿಂದ ಇತ್ತು. ಈಗ ಈ ಕಾಮಗಾರಿ ನೆರವೇರಲಿದ್ದು, ಶೀಘ್ರದಲ್ಲೇ ಗ್ರಾಮಕ್ಕೆ ಉತ್ತಮ ಕಟ್ಟಡಗಳು ಲಭ್ಯವಾಗಲಿವೆ. ಜನರ ಆರೋಗ್ಯ ಕಾಪಾಡುವಲ್ಲಿ ಸರ್ಕಾರ ವಿಶೇಷ ಕಾಳಜಿ ವಹಿಸಿದೆ" ಎಂದು ಹೇಳಿದರು.ಲೋಕೋಪಯೋಗಿ ಇಲಾಖೆಯ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರ ವಿ.ಎಸ್. ಸೂಗು-ರೆಡ್ಡಿ ಮಾತನಾಡಿ, "ಶಾಸಕರ ಸತತ ಪ್ರಯತ್ನದ ಫಲವಾಗಿ ಈ ಯೋಜನೆ ಕಾರ್ಯರೂಪಕ್ಕೆ ಬಂದಿದೆ. ನಿಗದಿತ ಅವಧಿಯಲ್ಲಿ ಕಟ್ಟಡಗಳನ್ನು ನಿರ್ಮಾಣ ಮಾಡಲಾಗುವುದು" ಎಂದರು.

ಕಾರ್ಯಕ್ರಮದಲ್ಲಿ ಇಒ ಮಲ್ಲಿಕಾರ್ಜುನ ಸಂಗವಾರ ವಡಗೇರಾ, ತಾಲೂಕು ಆರೋಗ್ಯ ಅಧಿಕಾರಿ ಡಾ. ರಮೇಶ ಗುತ್ತೇದಾರ, ಖಾಜಾ ಮೊನುದ್ದಿನ್ ಮಿರ್ಚಿ, ಸಾಬಣ್ಣ ಗುಂಜನೂರ್, ಬನಪ್ಪ,ಶೂಪುತ್ರಪ್ಪಪದ್ದಿ,ರಾಮಲಿಂಗ ಕುದರೆ, ಶರಣಬಸಪ್ಪ, ದೇವಪ್ಪ ವಟ್ಟ, ಕಾಸಿಂ ಮುತ್ಯಾ ಹಾಗೂ ಕುರುಕುಂದಾ ಗ್ರಾಮ ಪಂಚಾಯತಿ ಅಧ್ಯಕ್ಷೆ ಮುದ್ದಮ್ಮ ಗುಡುಸಾಬ, ಉಪಾಧ್ಯಕ್ಷ ಮಲ್ಲಪ್ಪ ಹಣಮಂತ ಸೇರಿದಂತೆ ಗಣ್ಯರು ಉಪಸ್ಥಿತರಿದ್ದರು.

# ಸ್ವಾತಂತ್ರ್ಯ ದಿನ ಸಂಗೊಳ್ಳಿ ರಾಯಣ್ಣಗೆ ಅಗೌರವ: ಅಧಿಕಾರಿಗಳ ಅಮಾನತು ಮಾಡದಿದ್ದರೆ ಸಿಎಂಗೆ ಕಪ್ಪು ಬಾವುಟ: ಭೀಮು ಪೂಜಾರಿ ಎಚ್ಚರಿಕೆ

ಯಾದಗಿರಿ:ಸೆ.13: ಕಳೆದ ತಿಂಗಳು, ಆಗಸ್ಟ್-15 ಸ್ವಾತಂತ್ರ ದಿನಾಚರಣೆ-ಯಂದು ಕ್ರಾಂತಿವೀರ ಸಂಗೋಳ್ಳಿ ರಾಯಣ್ಣರವರ ಭಾವಚಿತ್ರಕ್ಕೆ ಪೂಜೆ ಮಾಡದೇ ಸರ್ಕಾರದ ನಿಯಮ ಉಲ್ಲಂಘಿಸಿರುವ ನಗರಸಭೆ ಪೌರಾಯುಕ್ತರು ಹಾಗೂ ನಗರದ ಕೋಲಿವಾಡ ಸರ್ಕಾರಿ ಪ್ರೌಢಶಾಲೆಯ ಮುಖ್ಯ ಗುರುಗಳ ವಿರುದ್ಧ ಕ್ರಮ ಕೈಗೊಳ್ಳದೇ ಇರುವುದಕ್ಕೆ ಸಾಮಾಜಿಕ ಹೋರಾಟಗಾರ ಭೀಮು ಪೂಜಾರಿ ಆಕ್ರೋಶ ವ್ಯಕ್ತಪಡಿಸಿ ತಕ್ಷಣ ಕ್ರಮ ಕೈಗೊಂಡು ಅಮಾನತುಗೊಳಿಸದೇ ಹೋದಲ್ಲಿ ದಿ:17-09-2025 ರಂದು ಕಲಬುರಗಿಗೆ ಆಗಮಿಸಲಿರುವ ಮುಖ್ಯಮಂತ್ರಿಗಳಿಗೆ ಕಪ್ಪು ಪಟ್ಟಿ ಪ್ರದರ್ಶನ ಮಾಡಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.





ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಆಗಸ್ಟ್-15 ಸ್ವಾತಂತ್ರ ದಿನಾಚರಣೆಯಂದು ಯಾದಗಿರಿ ಜಿಲ್ಲೆಯ ಸರ್ಕಾರಿ ಕಛೇರಿಯಲ್ಲಿ ಕ್ರಾಂತಿವೀರ ಸಂಗೋಳ್ಳಿ ರಾಯಣ್ಣರವರ ಭಾವಚಿತ್ರಕ್ಕೆ ಪೂಜೆ ಮಾಡಿ, ಗೌರವ ಸಲ್ಲಿಸಲು 2021 ರಲ್ಲಿ ಅಂದಿನ ಬೊಮ್ಮಾಯಿ ಸರ್ಕಾರ ಆದೇಶ ವಿದ್ದು, ಜೊತೆಗೆ ನಮ್ಮ ಮನವಿ ಮೇರೆಗೆ ಜಿಲ್ಲಾಧಿಕಾರಿಗಳು ಕಡ್ಡಾಯವಾಗಿ ಸಂಗೋಳ್ಳಿ ರಾಯಣ್ಣನವರಿಗೆ ಗೌರವಿಸಬೇಕೆಂದು ಆದೇಶ ಹೊರಡಿಸಿದ್ದರು.

ಆದರೆ ಯಾದಗಿರಿ ನಗರಸಭೆ ಪೌರಾಯುಕ್ತರು ಹಾಗೂ ನಗರದ ಕೋಲಿವಾಡ ಪ್ರೌಢಶಾಲೆಯ ಮುಖ್ಯ ಗುರುಗಳುರವರು ಭಾವಚಿತ್ರ ಇಟ್ಟು ಪೂಜೆ ಸಲ್ಲಿಸದೇ ಸರ್ಕಾರ ಹಾಗೂ ಜಿಲ್ಲಾಧಿಕಾರಿಗಳ ಆದೇಶಕ್ಕೆ ಕವಡೆ ಕಿಮ್ಮತ್ತು ನೀಡದೇ ಸ್ವಾತಂತ್ರ್ಯ ಸೇನಾನಿ ರಾಯಣ್ಣನವರಿಗೆ ಅವಮಾನಿಸಿದ ಘಟನೆ ನಡೆಯಿತು.


ಈ ಕುರಿತು ಜಿಲ್ಲಾಧಿಕಾರಿಗಳಿಗೆ ಎಸ್.ಪಿ. ಹಾಗೂ ಸಂಬಂಧಿಸಿ ಎಲ್ಲರಿಗೂ ಮಾಹಿತಿ ಹಾಗೂ ದೂರು ಸಲ್ಲಿಸಿದರೂ ಇದುವರೆಗೆ ತಪ್ಪಿತಸ್ಥರ ವಿರುದ್ಧ ಅಧಿಕಾರಿಗಳು ಯಾವುದೇ ಕ್ರಮ ಇಲ್ಲಿಯವರೆಗೂ ಕೈಗೊಂಡಿಲ್ಲ ಎಂದು ಭೀಮು ಪೂಜಾರಿ ಆಕ್ರೋಶ ವ್ಯಕ್ತಪಡಿಸಿದರು.

ಈ ಹಿನ್ನೆಲೆಯಲ್ಲಿ ಜಿಲ್ಲಾಡಳಿತ ತಕ್ಷಣ ಸದ್ರಿ ಬೇಜವಬ್ದಾರಿ ತೋರಿದ ಉಭಯ ಅಧಿಕಾರಿಗಳ ಮೇಲೆ ಸುಮೋಟೋ ಪ್ರಕರಣ ದಾಖಲಿಸಿ, ಈ ಕೂಡಲೇ ಅಮಾನತ್ತುಗೊಳಿಸಬೇಕು ಎಂದು ಪದೇ ಪದೇ ಎಚ್ಚರಿಸಿದರೂ ಕ್ರಮ ಕೈಗೊಂಡಿಲ್ಲ. ವಿಚಾರಣೆ ಕೂಡಾ ಮಾಡಿಲ್ಲ. ರಾಷ್ಟ್ರ ನಾಯಕರಿಗೆ ಅಪಮಾನ ಆದರೂ ಅಧಿಕಾರಿಗಳು ಕೂಡಾ ಕಣ್ಣು ಮುಚ್ಚಿ ಕುಳಿತಿದ್ದಾರೆ.

ಆದ ಕಾರಣ ಯಾದಗಿರಿ ಜಿಲ್ಲಾಡಳಿತ ಈ ಕೂಡಲೇ ಸದರಿ ಅಧಿಕಾರಿಗಳನ್ನು ಅಮಾನತ್ತು ಮಾಡದೇ ಹೋದಲ್ಲಿ ಮಾನ್ಯ ಮುಖ್ಯಮಂತ್ರಿಗಳು ದಿ:17-09-2025 ರಂದು ಕಲಬುರಗಿಗೆ ಆಗಮಿಸುತ್ತಿದ್ದು, ಇಲ್ಲಿ ನಾವು ಕಪ್ಪು ಪಟ್ಟಿ ಪ್ರದರ್ಶನ ಮಾಡಲಾಗುವುದೆಂದು ಮಾಧ್ಯಮಗಳ ಮೂಲಕ ಎಚ್ಚರಿಕೆ ನೀಡುವುದಾಗಿ ಅವರು ಪ್ರಕಟಿಸಿದರು.

ಸುದ್ದಿಗೋಷ್ಠಿಯಲ್ಲಿ ಸಾಮಾಜಿಕ ಹೋರಾಟಗಾರ ಹಣಮಂತ್ರಾಯಗೌಡ ಮಾ॥ ಪಾ॥ ತೇಕರಾಳ, ಭೀಮು ಪೂಜಾರಿ ವಾಡಿ, ಅಯ್ಯಪ್ಪ ಗುರುಸುಣಗಿ, ಅಶೋಕ ತಂಗಡಗಿ, ಶರಣು ಅರ್ಜುಣಗಿ, ಸೋಮು ಪೂಜಾರಿ ಸೇರಿದಂತೆ ಇನ್ನಿತರರು ಇದ್ದರು.

# ಪಂಜಾಬ್ ಪ್ರವಾಹ ಸಂತ್ರಸ್ತರಿಗೆ ಜಮೀಯತ್ ಉಲಮಾ-ಎ-ಹಿಂದ್ ಲಿಂಗಸುಗೂರು ಶಾಖೆಯ ದೇಣಿಗೆ ಸಂಗ್ರಹ



ಲಿಂಗಸುಗೂರು:ಸೆ.13: ಪಂಜಾಬ್ ರಾಜ್ಯದಲ್ಲಿ ಇತ್ತೀಚೆಗೆ ಭೀಕರ ಪ್ರವಾಹದಿಂದ ಅನೇಕ ಕುಟುಂಬಗಳು ಜೀವನ ಸಂಕಟದಲ್ಲಿ ತಳಮಳಗೊಳ್ಳುತ್ತಿರುವ ದುಃಖಕರ ಪರಿಸ್ಥಿತಿ ಎದುರಾಗಿದೆ. ಮನೆಯು, ಬೆಳೆ, ಆಹಾರ - ಜೀವನದ ಆಧಾರ ಎಲ್ಲವೂ ಪ್ರವಾಹದಲ್ಲಿ ಹರಿದು ಹೋಗಿರುವುದು ಸಮಾಜದ ಜನರು ಹೇಗೆ ಮರೆತಿರಬಹುದೆಂಬ ವಿಚಾರದಲ್ಲಿ ತೀವ್ರವಾದ ನೋವಿನ ಅಲೆ ಹರಡುತ್ತಿದೆ. ಈ ದುಃಖದ ಸಮಯದಲ್ಲಿ ಸಹಾನುಭೂತಿ, ಸಹಕಾರ ಹಾಗೂ ಮಾನವೀಯತೆ ಎನ್ನುವ ಅಮೂಲ್ಯ ತತ್ವವನ್ನು ಪ್ರತಿಪಾದಿಸುವುದಕ್ಕಾಗಿ ಜಮೀಯತ್ ಉಲಮಾ-ಎ-ಹಿಂದ್ ಲಿಂಗಸುಗೂರು ಶಾಖೆ ದೇಣಿಗೆ ಸಂಗ್ರಹಣಾ ಕಾರ್ಯವನ್ನು ಪ್ರಾರಂಭಿಸಿತು.

ಸಾಮಾಜಿಕ ಜವಾಬ್ದಾರಿಯ ಬೆನ್ನತ್ತಿ ನಡೆದ ಈ ಕಾರ್ಯದಲ್ಲಿ ಜಮೀಯತ ಉಲಮಾ ಎ ಹಿಂದ ಲಿಂಗಸೂಗೂರು ಮುಖಂಡರು, ಯುವಕರು ದೇಣಿಗೆ ಸಂಗ್ರಹಣೆಯಲ್ಲಿ ಪಾಲ್ಗೊಂಡಿದ್ದರು ಈ ಸಂದರ್ಭದಲ್ಲಿ ಪ್ರಧಾನಕಾರ್ಯದರ್ಶಿ ಅಭಿದ್ ಅಲಿ ಜೆಇ,ಮಹಮ್ಮದ್ ಗೌಸ್,ಮೌಲಾಸಾಬ ಪ್ರಥಮ ದರ್ಜೆ ಗುತ್ತಿಗೆದಾರರು,ವಸಿಂ ಪಾಷಾ ಇಮ್ರಾನ್ ಇಂತೆಯಾಜ್ ಮೊಹಮ್ಮದ್ ಜಾವಿದ್ ಸೇರಿದಂತೆ ಉಪಸ್ಥಿತರಿದ್ದರು

# ಬೀದಿ ನಾಯಿಗಳ ಗೋದಾಮು ನಿರ್ಮಾಣ ಕಾಮಗಾರಿ ವಿರೋಧಿಸಿಉದನೂರ ಗ್ರಾಮಸ್ಥರಿಂದ ಪ್ರತಿಭಟನೆ

ಕಲಬುರಗಿ: ಸೆ.13:ಉದನೂರ ಗ್ರಾಮದಲ್ಲಿ ಬೀದಿ ನಾಯಿಗಳ ಗೋದಾಮು ನಿರ್ಮಾಣ ಕಾಮಗಾರಿ ವಿರೋಧಿಸಿ ನಡೆಸಿದ ಪ್ರತಿಭಟನಾ ನಿರತ ಸ್ಥಳಕ್ಕೆ ಭೇಟಿ ನೀಡಿದ ಶಾಸಕರಾದ ಅಲ್ಲಮ ಪ್ರಭು ಪಾಟೀಲ್ ಹಾಗೂ ಪಾಲಿಕೆ ಆಯುಕ್ತರಿಗೆ ಗ್ರಾಮಸ್ಥರಿಂದ ಎಚ್ಚರಿಕೆ ನೀಡಲಾಯಿತು.

ಗ್ರಾಮಸ್ಥರ ಬೃಹತ್ ಪ್ರತಿಭಟನೆ ಹಾಗೂ ಎಚ್ಚರಿಕೆಯಿಂದ ಎಚ್ಚೆತ್ತು-ಕೊಂಡ ಶಾಸಕ ಅಲ್ಲಮ ಪ್ರಭು ಪಾಟೀಲ್ ಅವರು ಈ ಸ್ಥಳದಲ್ಲಿ ಯಾವದೇ ಕಾರಣಕ್ಕೂ ನಾಯಿಗಳ ಗೋದಾಮು ನಿರ್ಮಾಣ ಕಾಮಗಾರಿ ಮಾಡುವದಿಲ್ಲ ಎಂದು ಭರವಸೆ ನೀಡಿದ್ದ ಪ್ರಯುಕ್ತ ಗ್ರಾಮಸ್ಥರು ಪ್ರತಿಭಟನೆ ಕೈ ಬಿಡಲಾಯಿತು.



ಸುಮಾರು 18 ವರ್ಷ ದಿಂದ ಕಲಬುರ್ಗಿ ಮಹಾನಗರ ಪಾಲಿಕೆಯವರು ಕಲಬುರ್ಗಿ ನಗರದ ಕಸ ವಿಲೇವಾರಿಯನ್ನು ಉದನೂರ ಗ್ರಾಮದಲ್ಲಿ ತಂದು ಬೇಕಾಬಿಟ್ಟಿ ಹಾಕುತ್ತಿರುವುದರಿಂದ ಗ್ರಾಮಸ್ಥರಿಗೆ ಡೆಂಗ್ಯೂ,ಮಲೇರಿಯಾ,ಲಕ್ವಾಗಳಂತಹ ಮಾರಕ ರೋಗಗಳು ಹರಡುತ್ತಿದ್ದು ನಗರದ ಎಲ್ಲಾ ನಾಯಿಗಳು ತಂದು ಬಿಡುತ್ತಿದ್ದಾರೆ ಇದರಿಂದ ಬೀದಿ ನಾಯಿಗಳು ಕ್ರೂರವಾಗಿ ಕುರಿಗಳು, ಸಾರ್ವಜನಿಕರ ಮೇಲೆ ದಾಳಿ ಮಾಡುತ್ತಿದ್ದು ದನಕರುಗಳು ಸತ್ತು ಹೋಗಿವೆ ಎಂದು ಗ್ರಾಮಸ್ಥರು ಆಕ್ರೋಶ ಹೊರ ಹಾಕಿದ್ದಾರೆ. ಗ್ರಾಮಸ್ಥರು ಈ ಎಲ್ಲಾ ತೊಂದರೆಗಳ ವಿರೋಧಿಸಿ ಕೂಡಲೇ ಇದನ್ನು ಸರಿಪಡಿಸುವಂತೆ ಆಗ್ರಹಿದ ಗ್ರಾಮಸ್ಥರು ಶಾಸಕರಿಗೆ ಹಾಗೂ ಪಾಲಿಕೆ ಆಯುಕ್ತರಿಗೆ ಎಚ್ಚರಿಕೆ ನೀಡಿದರು.

ಈ ಸಂದರ್ಭದಲ್ಲಿ ಗ್ರಾಮಸ್ಥರಾದ ಶಿವಪುತ್ರ ಮಾಲಿಪಾಟೀಲ್, ಶಾಂತಕುಮಾರ್

ಬಿರಾದಾರ, ರವಿ ಪಾಟೀಲ್, ವಿಶ್ವನಾಥ್ ಪಾಟೀಲ್,ಹನಮಂತ್ರಾಯ ಕಪನೂರ,

ಹಜರತ್ ಸಾಬ್, ಶುಭಾಷ್ ಚಂದ್ರ ಮುಲಗೆ, ವಿಠಲ ಚವಾಣ್, ಬಸವರಾಜ್,ಸತೀಶ್,ಮಲ್ಲಿಕಾರ್ಜುನ್, ಶಿವಪುತ್ರಪ್ಪ ಪಾಟೀಲ್. ಭೀಮಣ್ಣ ಶೇರಿಕರ, ರೇವಣಸಿದ್ದ ದುದನಿ, ಪ್ರಸನ್ನ,ಶುಭಂ ಶೇರಿಕರ್,ಮಾಂತೇಶ್ ಪಾಟೀಲ್, ಶರಣು.ಟಿ, ಗುಂಡು ಗಾವ್,ಶರಣು,ಪೂಜಾರಿ,ಗುಂಡು ದೇವಣ್ಣಗಾವ್,ಜೈಭಿಮು ಕೊರಳ್ಳಿ, ರಾಣಪ್ಪ ಕೊರಳ್ಳಿ ಸೇರಿದಂತೆ ಗ್ರಾಮಸ್ಥರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

# ಶಿಕ್ಷಕರ ದಿನಾಚರಣೆ ಹಾಗೂ ನಿವೃತ್ತ ಶಿಕ್ಷಕರಿಗೆ ಸನ್ಮಾನ



ಕಲಬುರಗಿ:ಸೆ.13: ಶಾಲಾ ಶಿಕ್ಷಣ ಇಲಾಖೆ ಕ್ಷೇತ್ರ ಶಿಕ್ಷಣಾಧಿಕಾರಿಗಳು ಮತ್ತು ಕ್ಷೇತ್ರ ಸಮನ್ವಯ ಅಧಿಕಾರಿಗಳ ಕಾರ್ಯಾಲಯ ಕಲಬುರಗಿ ದಕ್ಷಿಣ ವಲಯ ಹಾಗೂ ಪ್ರಾಥಮಿಕ ಪ್ರೌಢ ಶಾಲಾ ಶಿಕ್ಷಕರ ಸಂಘಟನೆಗಳು ಇವರ ಸಹಯೋಜನೆಯಲ್ಲಿ ಕಲಬುರ್ಗಿ ದಕ್ಷಿಣ ತಾಲೂಕಿನ 2025-26ನೇ ಸಾಲಿನ ತಾಲೂಕಾ ಮಟ್ಟದ ಶಿಕ್ಷಕರ ದಿನಾಚರಣೆ ಹಾಗೂ ನಿವೃತ್ತ ಶಿಕ್ಷಕರಿಗೆ ಸನ್ಮಾನ ಸಮಾರಂಭವು ನಗರದ ಸಿದ್ದಶ್ರೀ ಡಿವೈನ್ ಪ್ಯಾಲೇಸ್, ಕೋಟನೂರ್ ಡಿಯಲ್ಲಿ ಜರುಗಿತು.

ಕಾರ್ಯಕ್ರಮವನ್ನು ದಕ್ಷಿಣ ಮತ ಕ್ಷೇತ್ರದ ಶಾಸಕರಾದ ಅಲ್ಲಂಪ್ರಭು ಪಾಟೀಲ್ ಅವರು ಉದ್ಘಾಟಿಸಿ ಮಾತನಾಡಿ ಈ ದೇಶದಲ್ಲಿ ಗುರುವಿಗೆ ಅತ್ಯಂತ ಉನ್ನತ ಸ್ಥಾನವಿದ್ದು ಶ್ರೇಷ್ಠ ವ್ಯಕ್ತಿಗಳನ್ನು ರೂಪಿಸುವರು ಗುರುಗಳೇ ಆ ನಿಟ್ಟಿನಲ್ಲಿ ಡಾಕ್ಟರ ಬಾಬಾ ಸಾಹೇಬ್ ಅಂಬೇಡ್ಕರ್ ಅವರಂಥ ಶ್ರೇಷ್ಠ ಸಂವಿಧಾನ ಶಿಲ್ಪಿಗಳನ್ನು ರೂಪಿಸುವಂತಹ ಕಾರ್ಯ ಮಾಡಿದ ಗುರುಗಳನ್ನು ನೆನಪಿಸಿಕೊಂಡರು ಗುರುಗಳ ಪಾತ್ರ ಸಮಾಜದಲ್ಲಿ ಅತ್ಯಂತ ಗೌರವದ ಸ್ಥಾನವಾಗಿದ್ದು ಆ ನಿಟ್ಟಿನಲ್ಲಿ ಕಾಯಕ ಮಾಡುತ್ತಾ ಮಕ್ಕಳ ಏಳಿಗೆಯನ್ನು ಬಯಸುವ ಎಲ್ಲ ಶಿಕ್ಷಕರಿಗೆ ಶುಭ ಕೋರಿದರು ನಿವೃತ್ತ ಶಿಕ್ಷಕರಿಗೆ ಶುಭಾಶಯಗಳನ್ನು ತಿಳಿಸಿದರು ನಿವೃತ್ತಿಯ ನಂತರ ತಮ್ಮ ಕಾರ್ಯ ಶಿಕ್ಷಣಕ್ಕೆ ಇರಲಿ ಎಂದು ಹೇಳಿದರು.

ದಕ್ಷಿಣ ತಾಲೂಕಿನಿಂದ ಜಿಲ್ಲಾ ಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿ ಪಡೆದ ಶಿಕ್ಷಕರನ್ನು , ಹಾಗೂ ನಿವೃತ್ತ ಎಲ್ಲ ಶಿಕ್ಷಕರನ್ನು ಗೌರವಿಸುವ ಉತ್ತಮ ಕಾರ್ಯ ಮಾಡುತ್ತಿರುವ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀ ವಿಜಯಕುಮಾರ ಜಮಖಂಡಿ ಹಾಗೂ ಸಮನ್ವಯ ಅಧಿಕಾರಿಗಳಾದ ಶ್ರೀ ಪ್ರಕಾಶ್ ರಾಥೋಡ್ ಮತ್ತು ಇಲಾಖೆ ಎಲ್ಲಾ ಅಧಿಕಾರಿ ಸಿಬ್ಬಂದಿಗಳಿಗೆ ಧನ್ಯವಾದಗಳು ತಿಳಿಸಿದರು.

ನಿವೃತ್ತ ಶಿಕ್ಷಕರಿಗೆ ಮತ್ತು ಅತ್ಯುತ್ತಮ ಶಿಕ್ಷಕ ಪ್ರಶಸ್ತಿ ವಿಜೇತರಿಗೆ ಸನ್ಮಾನಿಸಿದರು.

ಕಾರ್ಯಕ್ರಮದಲ್ಲಿ ಕಾರ್ಯನಿರ್ವಾಹಕ ಅಧಿಕಾರಿಗಳಾದ ಎಂಡಿ ಸೈಯದ್ ಪಟೇಲ, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಜಿಲ್ಲಾ ಅಧ್ಯಕ್ಷ ಮಲ್ಲಯ್ಯ ಗುತ್ತೇದಾರ, ಕರ್ನಾಟಕ ಸರಕಾರಿ ನೌಕರರ ಸಂಘದ ಜಿಲ್ಲಾ ಅಧ್ಯಕ್ಷ ಬಸವರಾಜ ಬಳೂಂಡಗಿ, ಪ್ರೌಢಶಾಲಾ ಮುಖ್ಯೋಪಾಧ್ಯಾಯರ ಸಂಘದ ಜಿಲ್ಲಾ ಅಧ್ಯಕ್ಷ ಮರೆಪ್ಪ ಬಸವಪಟ್ಟಣ, ಪ್ರೌಢ ಶಾಲಾ ಸಹ ಶಿಕ್ಷಕ ಸಂಘದ ಜಿಲ್ಲಾಧ್ಯಕ್ಷ ಮಹೇಶ ಹೂಗಾರ, ಕಲಬುರ್ಗಿ ದಕ್ಷಿಣ ತಾಲೂಕಿನ ಪ್ರಾಥಮಿಕ ಶಾಲಾ ಶಿಕ್ಷಕ ಸಂಘದ ಅಧ್ಯಕ್ಷ ಈಶ್ವರಗೌಡ ಪಾಟೀಲ, ಪ್ರೌಢ ಶಾಲೆಯ ಮುರುಳಿದರ, ಪದವೀಧರ, ಜಿಲ್ಲಾಧ್ಯಕ್ಷ ಸೈಯದ್ ಎಸ್ ಜಿ, ತಾಲೂಕ ಅಧ್ಯಕ್ಷ ಅಂಬರೀಶ್, ಜಿಲ್ಲಾ ಅನುದಾನಿತ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಭಾನುಕುಮಾರ ಗಿರೆಗೋಳ, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ನಿರ್ದೇಶಕರಾದ ಮಹೇಶ ಬಸರಕೋಡ, ಸಂಗಣ್ಣ ಜಾಬಾ, ಸಂತೋಷ್ ಗಂಗು , ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಪ್ರಧಾನಕಾರ್ಯದರ್ಶಿ ನವನಾಥ ಶಿಂಧೆ ಅವರು ಹಾಗೂ ವಿವಿಧ ಶಿಕ್ಷಕ ಸಂಘಟನೆಗಳ ಪ್ರತಿನಿಧಿಗಳು ಹಾಜರಿದ್ದರು. ಇಲಾಖೆಯ ಶೈಕ್ಷಣಿಕ ಅಭಿವೃದ್ಧಿ ಮತ್ತು ಗುಣಮಟ್ಟ ಶಿಕ್ಷಣ ನೀಡುವ ಕುರಿತು ಪ್ರಾಸ್ತಾವಿಕವಾಗಿ ಕ್ಷೇತ್ರ ಶಿಕ್ಷಣಾಧಿಕಾರಿ ವಿಜಯಕುಮಾರ ಜಮಖಂಡಿ ರವರು ಮಾತನಾಡಿದರು. ಶರಣು ಸಾಳೇರ ಇಸಿಓ ಸ್ವಾಗತಿಸಿದರು. ಬಿಆರ್‌ಪಿ ದಯಾನಂದ ಹಿರೇಮಠ ನಿರೂಪಿಸಿದರು. ಎಲ್ಲಾ ಇಸಿಓ, ಬಿಆರಪಿ, ಸಿಆರ್‌ಪಿ ಕಾರ್ಯಾಲಯದ ಸಿಬ್ಬಂದಿ ವರ್ಗದವರು, ತಾಲೂಕಿನ ಎಲ್ಲಾ ಶಿಕ್ಷಕ/ಶಿಕ್ಷಕಿಯರು ಭಾಗವಹಿಸಿದ್ದರು.

# ಮಾತೃಭಾಷೆಯಲ್ಲಿ ಶಿಕ್ಷಣ ಅಗತ್ಯ: ಪ್ರೊ. ದಯಾನಂದ ಅಗಸರ

ಕಲಬುರಗಿ:ಸೆ.13: ಪ್ರತಿಯೊಬ್ಬರು ಮಕ್ಕಳಿಗೆ ಮಾತೃಭಾಷೆಯಲ್ಲಿ ಶಿಕ್ಷಣ ನೀಡುವುದು ಇಂದಿನ ತುರ್ತು ಅವಶ್ಯವಾಗಿದೆ ಎಂದು ಗುಲ್ಬರ್ಗ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಪ್ರೋ ದಯಾನಂದ ಅಗಸರ ಹೆಳಿದರು.



ನಗರದ ಕನ್ನಡ ಬವನದಲ್ಲಿ ಶಾಂತಪ್ಪಾ ಪಾಟೀಲ ನರಿಬೋಳ ಪ್ರತಿಷ್ಠಾನದಿಂದ ದಿ.ಶಾಂತಪ್ಪ ಪಾಟೀಲ ಅವರ 12ನೆ ಪೂಣ್ಯಸ್ಮರಣೆ ಹಾಗು ಶಾಂತಶ್ರೀ ಪ್ರಶಸ್ತಿ ಸಮಾರಂಭ ಉಧ್ಘಾಟಿಸಿ ಮಾತನಾಡಿದ ಅವರು ಕನ್ನಡ ಬಾಷೆ ಮಾನ ಬೆಳೆಸಿಕೋಳ್ಳಬೆಕು ಪೋಷಕರು ಮಕ್ಕಳಿಗೆ ಮಾತೃಭಾಷೆಯಲ್ಲಿ ಶಿಕ್ಷಣ ಕೋಡಿಸಬೆಕು ಕನ್ನಡ ನಾಡು ಕಟ್ಟುವಲ್ಲಿ ದಿ.ಶಾಂತಪ್ಪ ಪಾಟೀಲ ನರಿಬೋಳ ಕೋಡುಗೆ ನಿಡಿದ್ದಾರೆ ಸಮಾಜ ಮುಖಿ ಕೇಲಸ ಮಾಡಲು ಎಲ್ಲರು ಕೈ ಜೋಡಿಸಬೆಕೆಂದು ಕರೆ ನೀಡಿದರು ಪರೋಪಕಾರಿ ಗುಣಗೋಂದಿರುವ ವ್ಯಕ್ತಿ ಮಾತ್ರ ಸಧಾ ಜನರ ಮನಸಿನಲ್ಲಿ ಉಳಿಯಲು ಸಾದ್ಯ ತ್ಯಾಗ ನೈತಿಕತೆ ಅನುಕಂಪ ಮನುಷ್ಯನ ಸ್ಥಾನ ಬದಲಾಯಿಸುವ ಮೆಟ್ಟಿಲುಗಳಾಗಿವೆ ಬದುಕಿನಲ್ಲಿ ಆಸ್ತಿಗಿಂತ ನೀತಿ ಮುಖ್ಯಸುಖ ಶಾಂತಿ ಇಲ್ಲದಿದ್ದರೆ ಕೋಟಿ ಹಣವಿದ್ದರೂ ಪ್ರಯೋಜನವಿಲ್ಲಾ ಎಂದು ತಿಳಿಸಿದರು.

ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾದ್ಯಕ್ಷ ವಿಜಯಕುಮಾರ ತೆಗಲತಿಪ್ಪಿ ಮಾತನಾಡಿ ದಿ.ಶಾಂತಪ್ಪಾ ಪಾಟೀಲ ನರಿಬೋಳ ಅವರು ತಮ್ಮ ಮನೆಯಲ್ಲಿ ನಾಡಿನ ಪ್ರಶಿದ್ದ ಲೇಖ-ಕರ ಸಾವಿರಾರು ಪುಸ್ತಕಗಳನ್ನು ಸಂಗ್ರಹಿಸಿ ಜ್ಞಾನ ದಾಸೋಹದಲ್ಲಿ ತೋಡಗಿಸಿಕೋಂಡಿದ್ದರು ಈ ಮೂಲಕ ಕನ್ನಡಾಬಿಮಾನಿಗಳಿಗೆ ಮಾದರಿಯಾಗಿದ್ದರು ನಾವೆಲ್ಲರು ಅವರು ಹಾಕಿಕೋಟ್ಟ ಮಾರ್ಗದಲ್ಲಿ ಸಾಗಿ ಕನ್ನಡವನ್ನು ಬೆಳಗುವ ಕೆಲಸ ಮಾಡಬೆಕು ಎಂದು ಹೆಳಿದರು.

ಸಮಾರಂಭದಲ್ಲಿ ವಿವಿದ ಕ್ಷೇತ್ರದ ಸಾದಕರಾದ ಬಸವಕಲ್ಯಾಣ ಮಾಜಿ ಶಾಸಕ ಮಲ್ಲಿಕಾರ್ಜುನ ಖುಬಾ, ವೈದ್ಯ ಡಾ.ಆನಂದ ಕಟಗೇರಿ ಅವರುಗಳಿಗೆ ಶಾಂತಶ್ರೀ ಪ್ರಶಸ್ತಿ ಪ್ರದಾನ ಮಾಡಲಾಯಿತು. ಕಿತ್ತುರು ರಾಣಿ ಚನ್ನಮ್ಮ ಪ್ರಶಸ್ತಿ ವಿಜೇತೆ ಶ್ರೀ ಮತಿ ಜಯಂತಿಗೌಡ ಅವರನ್ನು ವಿಶೆಷವಾಗಿ ಸನ್ಮಾನಿಸಿ ಗೌರವಿಸಲಾಯಿತು. ಪಾಳಾದ ಗುರುಮೂರ್ತಿ ಶಿವಾಚಾರ್ಯರು ಗಂಗಾದರ ಸ್ವಾಮಿ ಹಿರೆಮಠ ನಂದೂರ ಸಾನಿದ್ಯ ವಹಿಸಿದ್ದರು. ಕೆಕೆಸಿಸಿಐ ಅದ್ಯಕ್ಷ ಶರಣಬಸಪ್ಪ ಪಪ್ಪಾ, ರೇವಣಸಿದ್ದಪ್ಪಾ ಸಂಕಾಲಿ, ಮಲ್ಲಿಕಾರ್ಜುನ ಕುಸ್ತಿ, ಆನಂದ ದಂಡೋತಿ, ಅಣ್ಣಾರಾಯಗೌಡ ಪಾಟೀಲನರಿಬೋಳ,ಗೌರಮ್ಮಗೌಡತಿ ಪಾಟೀಲನರಿಬೋಳ,ಗುಂಡಮ್ಮಗೌಡತಿ ಪಾಟೀಲ ನರಿಬೋಳ, ಶರಣಗೌಡ ಪೋಲಿಸ್ ಪಾಟೀಲ ನರಿಬೋಳ, ಸಂತೋಷ ಪೋಲಿಸ್ ಪಾಟೀಲ ನರಿಬೋಳ, ಶಿವಲಿಂಗ ಹಳಿಮನಿ, ಸಂದಿಪ್ ಬರಣಿ, ಲಕ್ಷ್ಮೀಕಾಂತ ಸ್ವಾದಿ, ಮಲ್ಲಿಕಾರ್ಜುನ ಕುಳಗೇರಿ, ಮಾಲಾ ದಣ್ಣುರ, ಸುಮಾ ಕವಲ್ದಾರ, ಸೆಮಿನಾ ಬೆಗಂ, ಶ್ರೀದೇವಿ ಪಾಟೀಲ, ಮಹೆಷ ಕೆಂಬಾವಿ ಇತರರಿದ್ದರು. ಪ್ರತಿಷ್ಠನದ ಸಂಸ್ಥಾಪಕ ಎಂ ಎಸ್ ಪಾಟೀಲ ನರಿಬೋಳ ಸ್ವಾಗತಿಸಿ ಪ್ರಾಸ್ಥಾವಿಕ ಮಾತನಾಡಿದರು. ಬಾಬುರಾವ ಕೋಬಾಳ ಪ್ರಾರ್ಥಿಸಿದರು ರವಿಂದ್ರ ಬಂಟನಳ್ಳಿ ನಿರುಪಿಸಿದರು.

# ಮುಖ್ಯಗುರುಗಳು ಸೇವೆಯಿಂದ ಅಮಾನತು



ಕಲಬುರಗಿ:ಸೆ.13: ಆಲ್ ಇಂಡಿಯಾ ಬಹುಜನ ಸಮಾಜ ಪಾರ್ಟಿ ಕಲಬುರಗಿ ಜಿಲ್ಲಾ ಸಮಿತಿಯಿಂದ ದಿನಾಂಕ 06-09-2025 ರಂದು ಅಫಜಲಪುರ ತಾಲೂಕಿನ ಸೊನ್ನ (ಹಳೆ) ಗ್ರಾಮದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಹಾಗೂ ಬಡದಾಳ ತಾಂಡಾದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ಮುಖ್ಯಗುರುಗಳ ವಿರುದ್ಧ ಸಂಬಂಧಪಟ್ಟ ನಿಯಮ ಉಲ್ಲಂಘನೆ ಕುರಿತು ಶಿಕ್ಷಣ ಇಲಾಖೆಗೆ ಲಿಖಿತ ದೂರು ಸಲ್ಲಿಸಲಾಗಿತ್ತು.

ದೂರು ಸಲ್ಲಿಸಿದ ವಿಷಯ ಎನೆಂದರೆ ದಿನಾಂಕ 15-08-2025 ರಂದು ನಡೆದ 79ನೇ ಸ್ವಾತಂತ್ರ್ಯ ದಿನಾಚರಣೆಯ ಧ್ವಜಾರೋಹಣ ಕಾರ್ಯಕ್ರಮದಲ್ಲಿ ಸರ್ಕಾರಿ ಆದೇಶಗಳ ಪ್ರಕಾರ ಸಂವಿಧಾನ ಶಿಲ್ಪಿ, ಭಾರತ ರತ್ನ ಡಾ. ಬಿ.ಆರ್. ಅಂಬೇಡ್ಕರ್ ಅವರ ಭಾವಚಿತ್ರ ಪ್ರದರ್ಶನ ಮಾಡದೆ ಕರ್ನಾಟಕ ನಾಗರಿಕ ಸೇವಾ ನಡತೆ ನಿಯಮಾವಳಿ, 1966 ರ ನಿಯಮ 3(1)(2) (3) ಉಲ್ಲಂಘನೆಯು ನಡೆದಿತ್ತು.

ಈ ಕುರಿತು ಪಕ್ಷದ ವತಿಯಿಂದ ಪತ್ರಿಕಾಗೋಷ್ಠಿ ಮೂಲಕ ಕೂಡಲೇ ಕ್ರಮ ಕೈಗೊಳ್ಳದಿದ್ದಲ್ಲಿ ಡಿಡಿಪಿಐ ಕಚೇರಿಗೆ ಮುತ್ತಿಗೆ ಹಾಕುವುದಾಗಿ ಎಚ್ಚರಿಕೆ ನೀಡಲಾಯಿತು. ನಮ್ಮ ಎಚ್ಚರಿಕೆಯನ್ನು ಗಂಭೀರವಾಗಿ ಪರಿಗಣಿಸಿದ ಡಿಡಿಪಿಐ ಕಲಬುರಗಿ ಅವರು ಕ್ಷೇತ್ರ ಶಿಕ್ಷಣಾಧಿಕಾರಿ, ಅಫಜಲಪುರ ಅವರಿಗೆ ಸ್ಪಷ್ಟ ನಿರ್ದೇಶನ ನೀಡಿ, ಸಂಬಂಧಪಟ್ಟ ಇಬ್ಬರು ಮುಖ್ಯಗುರುಗಳಾದ ಶ್ರೀಶೈಲ್ ಮ್ಯಾಳೇಶಿ ಪ್ರ.ಮು.ಗು., ಸರ್ಕಾರಿ ಕಿರಿಯ ಪ್ರಾಥಮಿಕ

ಶಾಲೆ, ಸೊನ್ನ (ಹಳೆ), ಶ್ರೀಶೈಲ್ ಮೇತ್ರಿ

ಪ್ರ.ಮು.ಗು., ಸರ್ಕಾರಿ ಕಿರಿಯ

ಪ್ರಾಥಮಿಕ ಶಾಲೆ, ಬಡದಾಳ ತಾಂಡಾ ಇವರನ್ನು ದಿನಾಂಕ 11-09-2025 ರಿಂದ ಸೇವೆಯಿಂದ ಅಮಾನತುಗೊಳಿಸುವ ಆದೇಶ ಹೊರಡಿಸಲಾಗಿದೆ.

ಜಿಲ್ಲಾಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಸಭೆ

# ಗ್ಯಾರಂಟಿ ಯೋಜನೆಗಳು ಸಮರ್ಪಕ ಅನುಷ್ಠಾನವಾಗಲಿ: ಪಾಮಯ್ಯ ಮುರಾರಿ

ಮಲ್ಲಮ್ಮ ನುಡಿ ವಾರ್ತೆ



ರಾಯಚೂರು ಸೆಪ್ಟೆಂಬರ್ 13– ಜಿಲ್ಲಾಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷರಾದ ಪಾಮಯ್ಯಮುರಾರಿ ಅವರ ಅಧ್ಯಕ್ಷತೆಯಲ್ಲಿ, ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದಿಂದ ವಿವಿಧ ಗ್ಯಾರಂಟಿ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆಯು ಸೆಪ್ಟೆಂಬರ್ 08ರಂದು ನಗರದ ಜಿಲ್ಲಾ ಪಂಚಾಯಿತಿಯ ಜಲ ನಿರ್ಮಲ ಸಭಾಂಗಣದಲ್ಲಿ ಇತ್ತೀಚೆಗೆ ನಡೆಯಿತು.

ಗೃಹಲಕ್ಷ್ಮಿ, ಅನ್ನಭಾಗ್ಯ, ಶಕ್ತಿ, ಗೃಹಜ್ಯೋತಿ ಹಾಗೂ ಯುವನಿಧಿ ಗ್ಯಾರಂಟಿ ಯೋಜನೆಗಳು ಸಮರ್ಪಕ ಅನುಷ್ಠಾನದ ಬಗ್ಗೆ ಪ್ರಾಧಿಕಾರದ ಅಧ್ಯಕ್ಷರು ಮತ್ತು ಎಲ್ಲ ಸದಸ್ಯರು ಸಮಗ್ರ ಪರಿಶೀಲಿಸಿದರು.

ಸಾರಿಗೆ ವ್ಯವಸ್ಥೆಯ ಬಗ್ಗೆ ಪರಿಶೀಲಿಸಿದ ಸದಸ್ಯರು, ಶಾಲಾ–ಕಾಲೇಜು ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರ ಬೇಡಿಕೆಗನುಸಾರ ಮಾರ್ಗಗಳ ಹೊಂದಾಣಿಕೆ ಮಾಡುವಂತೆ ಸೂಚಿಸಿದರು.

ಸಭೆಯಲ್ಲಿ, ಗೃಹಜ್ಯೋತಿ ಯೋಜನೆ ಪ್ರಗತಿ ಕುರಿತು ಚರ್ಚಿಸಲಾಯಿತು. ಜನತೆಗೆ ಈ ಯೋಜನೆಯ ಮಾಹಿತಿ ಕೊರತೆಯಿದ್ದು, ಜಾಗೃತಿ ಕಾರ್ಯಕ್ರಮ ನಡೆಸಲು ಅಧಿಕಾರಿಗಳಿಗೆ ಸೂಚಿಸಲಾಯಿತು.

ಗೃಹಲಕ್ಷ್ಮಿಯ ಎಲ್ಲ ಅರ್ಹ ಫಲಾನುಭವಿಗಳಿಗೆ ಕಾಲಕಾಲಕ್ಕೆ 2 ಸಾವಿರ ರೂ. ಜಮೆ ಮಾಡಬೇಕು. ತಾಂತ್ರಿಕ ತೊಂದರೆ ಕಂಡುಬಂದಲ್ಲಿ ಕೂಡಲೇ ಮೇಲಧಿಕಾರಿಗಳ ಗಮನಕ್ಕೆ ತಂದು ಹಂತಹಂತವಾಗಿ ಸರಿಪಡಿಸಲು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಲಾಯಿತು.

ಯುವನಿಧಿ ಯೋಜನೆಗೆ ವಿದ್ಯಾರ್ಥಿಗಳ ನೋಂದಣಿಗಾಗಿ ಕಾಲೇಜು ಮತ್ತು ವಿಶ್ವವಿದ್ಯಾಲಯಗಳಲ್ಲಿ ಅಭಿಯಾನ ಕೈಗೊಂಡು ನೋಂದಣಿ ಮಾಡಲಾಗುತ್ತಿದೆ ಎಂದು ಜಿಲ್ಲಾ ಉದ್ಯೋಗಾಧಿಕಾರಿ ನವೀನ್ ಕುಮಾರ ಅವರು ಸಭೆಗೆ ಮಾಹಿತಿ ನೀಡಿದರು.

ಸರ್ಕಾರ ಜಾರಿ ತಂದಿರುವ ಗ್ಯಾರಂಟಿ ಯೋಜನೆಗಳ ಸಮರ್ಪಕ ಅನುಷ್ಠಾನದಲ್ಲಿ ಸಮಿತಿಯ ಎಲ್ಲಾ ಸದಸ್ಯರ ಪಾತ್ರವು ಸಹ ಇದ್ದು ಯೋಜನೆಗಳ ಬಗ್ಗೆ ಸಾರ್ವಜನಿಕರಿಗೆ ಜಾಗೃತಿ ಮೂಡಿಸಬೇಕು. ಈ ಯೋಜನೆಗಳ ಅನುಷ್ಠಾನದಿಂದ ಸಾರ್ವಜನಿಕರಿಗೆ ಅನುಕೂಲವಾದ ಯಶೋಗಾಥೆಗಳ ಬಗ್ಗೆ ತಿಳಿಸಬೇಕು ಎಂದು ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷರಾದ ಪಾಮಯ್ಯ ಮುರಾರಿ ಅವರು ಸಲಹೆ ಮಾಡಿದರು.

ಗ್ಯಾರಂಟಿ ಶಿಬಿರ ನಡೆಸಲು ಸೂಚನೆ: ರಾಜ್ಯದ ಜನರನ್ನು ಸಾಮಾಜಿಕವಾಗಿ ಸದೃಢಗೊಳಿಸಲು ಮತ್ತು ಆರ್ಥಿಕವಾಗಿ ಸಬಲೀಕರಣಗೊಳಿಸುವ ಸದುದ್ದೇಶದಿಂದ ರಾಜ್ಯ ಸರ್ಕಾರ ಜಾರಿ ತಂದಿರುವ ಗ್ಯಾರಂಟಿ ಯೋಜನೆಗಳನ್ನು ಮತ್ತಷ್ಟು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಸಂಬಂಧ ಜಾರಿ ಮಾಡಿದ ಗ್ಯಾರಂಟಿ ಯೋಜನೆಗಳ ಬಗ್ಗೆ ಜನರಿಗೆ ತಿಳಿವಳಿಕೆ ಮೂಡಿಸಲು ಜಿಲ್ಲೆಯ ವಿವಿಧ ತಾಲೂಕುಗಳಲ್ಲಿ ಗ್ಯಾರಂಟಿ ಯೋಜನಗಳ ಶಿಬಿರ ಕಾರ್ಯಕ್ರಮ ಏರ್ಪಡಿಸಿ ಫಲಾನುಭವಿಗಳೊಂದಿಗೆ ಮುಕ್ತ ಸಂವಾದ ನಡೆಸಬೇಕು. ಯೋಜನೆಗಳ ಪ್ರಯೋಜನೆ ಪಡೆಯುವಲ್ಲಿ ಏನಾದರು ತೊಂದರೆಗಳಿದ್ದಲ್ಲಿ ತಕ್ಷಣ ಸ್ಪಂದಿಸುವ ಕುರಿತು ಚರ್ಚೆ ನಡೆಸಲು ಕ್ರಮವಹಿಸಬೇಕು ಎಂದು ಪಾಮಯ್ಯ ಮುರಾರಿ ಅವರು ಸಲಹೆ ಮಾಡಿದರು.

ಯೋಜನೆಗಳ ಪ್ರಗತಿ: 2025ರ ಫೆಬ್ರವರಿ ಮಾಹೆಯಿಂದ ಜಿಲ್ಲೆಯ ಪಡಿತರ ಚೀಟಿ–ದಾರರಿಗೆ ಹಣದ ಬದಲು ಹೆಚ್ಚುವರಿಯಾಗಿ 5 ಕೆಜಿ ಅಕ್ಕಿಯನ್ನು ವಿತರಣೆ ಮಾಡಲಾಗುತ್ತಿದೆ. ಗೃಹಲಕ್ಷ್ಮೀ ಯೋಜನೆಯಡಿ 2025ರ ಜೂನ್ ತಿಂಗಳವರೆಗೆ 4,46,138 ಫಲಾನುಭವಿಗಳು ನೋಂದಾಯಿಸಿಕೊಂಡಿದ್ದಾರೆ.

ಗೃಹಜ್ಯೋತಿ ಯೋಜನೆಯಡಿ ಜಿಲ್ಲೆಯಲ್ಲಿ 3,42,276 ಫಲಾನುಭವಿಗಳಿಗೆ 335.11 ಕೋಟಿ ರೂ. ವೆಚ್ಚ ಭರಿಸಲಾಗಿದೆ. ಶಕ್ತಿ ಯೋಜನೆಯಡಿ ಇದುವರೆಗೆ 379.00 ಕೋಟಿ ರೂ. ವೆಚ್ಚ ಭರಿಸಲಾಗಿದೆ. ಯುವನಿಧಿ ಯೋಜನೆಯಡಿ ಜಿಲ್ಲೆಯಾದ್ಯಂತ ಒಟ್ಟು 1,20,455 ಪದವಿ ಹಾಗೂ 1083 ಡಿಪ್ಲೋಮಾ ಪೂರ್ಣಗೊಳಿಸಿದ ನೋಂದಾಯಿತ ಫಲಾನುಭವಿಗಳು ಯೋಜನೆಯ ಲಾಭ ಪಡೆಯುತ್ತಿದ್ದಾರೆ ಎಂದು ಆಯಾ ಇಲಾಖೆಗಳ ಅಧಿಕಾರಿಗಳು ಸಭೆಗೆ ಮಾಹಿತಿ ನೀಡಿದರು.

ಇದೇ ಸಂದರ್ಭದಲ್ಲಿ ಪ್ರಾಧಿಕಾರದ ಜಿಲ್ಲಾಮಟ್ಟದ ಉಪಾಧ್ಯಕ್ಷರಾದ ನಾಗೇಂದ್ರ, ಗಫೂರ್ ಸಾಬ್, ಹನುಮಂತ ಜಾಲಿಬೇಂಚಿ, ಶೇಖರ್ ಗೌಡ ತುರುವಿಹಾಳ, ಸದಸ್ಯರಾದ ಎಚ್.ಪಿ ಬಸವರಾಜ ಬಿ, ಕೆ.ಅಮರೇಶ, ಪವನ ಪಾಟೀಲ್, ಲಕ್ಷ್ಮಣ ಜ್ಯೋತಿ, ಮಹೆಬೂಬ್ ಸಾಬ್, ವೆಂಕಟರಾವ್, ಜಾಫರ್ ಅಲಿ, ವೆಂಕಟೇಶ್, ಎಚ್.ಬಸವರಾಜ ಗೋನವಾರ, ಶೇಖರಪ್ಪ ಯಾದವ್, ನಜೀರ ಪಂಜಾಬಿ, ಜಿಲ್ಲಾ ಪಂಚಾಯತ್ ಯೋಜನಾ ನಿರ್ದೇಶಕರಾದ ಡಾ.ಟಿ.ರೋಣಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕರಾದ ನವೀನ್ ಕುಮಾರ್, ಜಿಲ್ಲಾ ಅಗ್ರಗಣ್ಯ ಬ್ಯಾಂಕ್ ಮುಖ್ಯಸ್ಥರಾದ ಪಾಂಡಪ್ಪ ಲಂಬಾಣಿ, ಜೆಸ್ಕಾಂ ಇಲಾಖೆಯ ಚಂದ್ರಶೇಖರ ದೇಸಾಯಿ, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯ ಪ್ರಭಾರಿ ಉಪ ನಿರ್ದೇಶಕರಾದ ನಜೀರ್ ಅಹಮದ್, ಜಿಲ್ಲಾ ಉದ್ಯೋಗಾಧಿಕಾರಿಗಳಾದ ನವೀನಕುಮಾರ್ ಸಂಗೇಪಾಗ್, ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ವಿಭಾಗೀಯ ನಿಯಂತ್ರಣಾಧಿಕಾರಿಗಳಾದ ಚಂದ್ರಶೇಖರ ಎಂ.ಎಸ್ ಸೇರಿದಂತೆ ತಾಲೂಕು ಪಂಚಾಯತ್ ಇಒಗಳು, ವಿವಿಧ ಇಲಾಖೆಯ ಅಧಿಕಾರಿ ಹಾಗೂ ಸಿಬ್ಬಂದಿ ಇದ್ದರು.

## ರಾಯಚೂರು ಮಹಾನಗರ ಪಾಲಿಕೆಯಿಂದ ಕಲ್ಯಾಣ ಕಾರ್ಯಕ್ರಮಗಳಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನ

ಮಲ್ಲಮ್ಮ ನುಡಿ ವಾರ್ತೆ

ರಾಯಚೂರು ಸೆಪ್ಟೆಂಬರ್ 13– ಇಲ್ಲಿನ ರಾಯಚೂರು ಮಹಾನಗರ ಪಾಲಿಕೆಯಿಂದ 2019–20, 2022–23ನೇ ಹಾಗೂ 2023–24, 2024–25ನೇ ಸಾಲಿನ ಎಸ್.ಎಫ್.ಸಿ ನಿಧಿ & ನಗರಸಭೆ ನಿಧಿಯ ಶೇ.29ರ ಪರಿಷ್ಕೃತ ಕ್ರಿಯಾ ಯೋಜನೆಯಡಿ ಎಸ್.ಸಿ.ಎಸ್.ಪಿ ಹಾಗೂ ಟಿ.ಎಸ್.ಪಿ ಕಲ್ಯಾಣ ಕಾರ್ಯಕ್ರಮಗಳಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. 2019–20, 2023–24ನೇ ಸಾಲಿನ ಶೇ.29 ರ ಎಸ್.ಎಫ್.ಸಿ ಮುಕ್ತ ನಿಧಿ ಪರಿಷ್ಕೃತ ಕ್ರಿಯಾ ಯೋಜನೆಯಡಿ ಎಸ್.ಸಿ.ಎಸ್.ಪಿ ರಡಿ ಶೇ.40 ವೈಯಕ್ತಿಕ ಸೌಲಭ್ಯಗಳಿಗಾಗಿ ಕಾರ್ಯಕ್ರಮದಡಿ ವೈಯಕ್ತಿಕ ಹರಿಯುವ ನೀರು ಶೌಚಾಲಯ ಹೊಂದಿರದ ಪರಿಶಿಷ್ಟ ಜಾತಿ ಕುಟುಂಬಗಳಿಗೆ ಸೇರಿದ ಪ್ರತಿ ಕುಟುಂಬಕ್ಕೆ ಸ್ವಂತ ಸೆಪ್ಟಿಕ್ ಟ್ಯಾಂಕ್ ಶೌಚಾಲಯ ನಿರ್ಮಾಣಕ್ಕೆ ಗರಿಷ್ಟ 15,000 ರೂ.ಗಳಿಗೆ ಮಿತಿಗೊಳಿಸಲಾಗಿದೆ.

ಮತ್ತು ಯುಜಿಡಿ ಸಂಪರ್ಕ ಹೊಂದುವ ಶೌಚಾಲಯ ನಿರ್ಮಾಣಕ್ಕೆ ಗರಿಷ್ಟ 10,000 ರೂ.ಗಳಿಗೆ ನಿಗದಿಪಡಿಸಲಾಗಿದೆ.

ದಾಖಲಾತಿಗಳು: ಸೌಲಭ್ಯಕ್ಕಾಗಿ ನಿಗಧಿತ ನಮೂನೆಯಲ್ಲಿ ಅರ್ಜಿ, ದೃಢೀಕೃತ ಜಾತಿ ಮತ್ತು ಅದಾಯ ಪ್ರಮಾಣ ಪತ್ರ, ದೃಢೀಕೃತ ವಾಸಸ್ಥಳಕ್ಕೆ ಗುರುತಿನ ಚೀಟಿ/ರೇಷನ್ ಕಾರ್ಡ, ಪಾಸ್ ಪೋಟೋ ಅಳತೆಯ ಭಾವ ಚಿತ್ರ–2, ಬ್ಯಾಂಕ್ ಪಾಸ್ ಪುಸ್ತಕ್ ಹಾಗು ಐ.ಎಫ್.ಎಸ್.ಸಿ ಕೋಡ್‌ನೊಂದಿಗೆ ಬ್ಯಾಂಕ್ ವಿವರ, ವೈಯಕ್ತಿಕ ಶೌಚಾಲಯ ನಿರ್ಮಾಣಕ್ಕೆ ಜಾಗದ ಛಾಯಾಚಿತ್ರ ಹಾಗೂ ಮೋಬೈಲ್ ನಂಬರ್‌ನೊಂದಿಗೆ ಸೆಪ್ಟೆಂಬರ್ 22ರೊಳಗಾಗಿ ಅರ್ಜಿ ಸಲ್ಲಿಸಬಹುದಾಗಿದೆ. ಅವಧಿ ಮೀರಿ ಬಂದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. ಸರಿಯಾದ ದಾಖಲಾತಿಗಳು ಸಲ್ಲಿಸದೇ ಇದ್ದ ಪಕ್ಷದಲ್ಲಿ ತಮಗೆ ಯಾವುದೇ ಹಿಂಬರಹ ಕಳುಹಿಸದೇ ನೇರವಾಗಿ ವಿಭಾಗದ ಸಿಬ್ಬಂದಿಯವರು ತಿರಸ್ಕೃತ ಮಾಡಲಾಗುವುದು ಎಂದು ರಾಯಚೂರು ಮಹಾನಗರ ಪಾಲಿಕೆಯ ಆಯುಕ್ತರಾದ ಜುಬಿನ್ ಮೊಹಾಪಾತ್ರ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ವೀರಶೈವ ಲಿಂಗಾಯತ ಏಕತಾ ಸಮಾವೇಶಕ್ಕೆ ಪಂಚಪೀಠಾಧೀಶ್ವರರು– ಶ್ರೀ ರಂಭಾಪುರಿ ಜಗದ್ಗುರುಗಳು

ಮಲ್ಲಮ್ಮ ನುಡಿ ವಾರ್ತೆ



ಹಾವೇರಿ–ಸಪ್ಟಂಬರ್–13– ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಆಶ್ರಯದಲ್ಲಿ ಹುಬ್ಬಳ್ಳಿಯಲ್ಲಿ ಸಪ್ಟಂಬರ್ 19ರಂದು ಜರುಗಲಿರುವ ವೀರಶೈವ ಲಿಂಗಾಯತ ಏಕತಾ ಸಮಾವೇಶದಲ್ಲಿ ಶ್ರೀ ರಂಭಾಪುರಿ ಶ್ರೀ ಉಜ್ಜಯಿನಿ ಶ್ರೀ ಶ್ರೀಶೈಲ ಮತ್ತು ಶ್ರೀ ಕಾಶಿ ಜಗದ್ಗುರುಗಳು ಪಾಲ್ಗೊಳ್ಳುವರೆಂದು ಬಾಳೆಹೊನ್ನೂರು ಶ್ರೀ ರಂಭಾಪುರಿ ಡಾ. ವೀರಸೋಮೇಶ್ವರ ಜಗದ್ಗುರುಗಳು ಪ್ರಕಟಪಡಿಸಿದರು.

ಅವರು ಶುಕ್ರವಾರ ನಗರದ ಶ್ರೀ ವೀರಮಾಹೇಶ್ವರ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿಯ 27ನೇ ವಾರ್ಷಿಕೋತ್ಸವ–ಪ್ರತಿಭಾ ಪುರಸ್ಕಾರ ಸಮಾರಂಭದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡುತ್ತಿದ್ದರು.

ವೀರಶೈವ ಧರ್ಮ ಬಹು ಪ್ರಾಚೀನವಾಗಿದ್ದು ಸಕಲ ಜೀವಾತ್ಮರಿಗೆ ಒಳಿತನ್ನೆ ಬಯಸುತ್ತಾ ಬಂದಿದೆ. ಲಿಂ. ಹಾನಗಲ್ಲ ಕುಮಾರಸ್ವಾಮಿಗಳು ಸ್ಥಾಪಿಸಿದ ಅಖಿಲ ಭಾರತ ವೀರಶೈವ ಮಹಾಸಭೆಯ ಮೊದಲ ಅಧಿವೇಶನದಲ್ಲಿ ನಿರ್ಣಯಿಸಿದ ನಿರ್ಣಯಗಳಂತೆ ನಡೆದು–ಕೊಂಡು ಬರುತ್ತಿದೆ. ಮಹಾಸಭೆ ವಿರುದ್ಧವಾಗಿ ಕೆಲವರು ನಡೆದುಕೊಳ್ಳುತ್ತಿರುವುದು ಒಳ್ಳೆಯದಲ್ಲ. ಜಾತಿ ಜನಗಣತಿ ಹಿನ್ನೆಲೆಯಲ್ಲಿ ವೀರಶೈವ ಲಿಂಗಾಯತ ಬೇರೆ ಬೇರೆ ಎಂದು ಕೆಲವರು ಹೇಳುತ್ತಿರುವುದು ನೋವಿನ ಸಂಗತಿ. ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಸಮುದಾಯದ ಮಠಾಧೀಶರ ಮತ್ತು ಗಣ್ಯರ ಜೊತೆ ಸಮಾಲೋಚಿಸಿ ವೀರಶೈವ ಲಿಂಗಾಯತ ಇವೆರಡೂ ಒಂದೇ ಎಂದು ಸ್ಪಷ್ಟವಾಗಿ ಹೇಳಿದೆ. ಆದರೂ ಕೆಲವರು ಒಡಕಿನತ್ತ ಹೊರಟಿರುವುದನ್ನು ಕಂಡು ಹುಬ್ಬಳ್ಳಿ ಮಹಾ ನಗರದಲ್ಲಿ ಸಪ್ಟಂಬರ್ 19ರಂದು ನೆಹರು ಮೈದಾನದಲ್ಲಿ ಬೃಹತ್ ವೀರಶೈವ ಲಿಂಗಾಯತ ಏಕತಾ ಸಮಾವೇಶ ಸಂಯೋಜಿಸಿದ್ದಾರೆ. ಈ ಸಮಾರಂಭದಲ್ಲಿ ಪಂಚಪೀಠದ ಜಗದ್ಗುರುಗಳು ವಿರಕ್ತ ಮಠಾಧೀಶರು ಹಾಗೂ ಶರಣ ಪರಂಪರೆಯ ಗಣ್ಯರು ಪಾಲ್ಗೊಳ್ಳಲಿದ್ದಾರೆ. ನಾಡಿನೆಲ್ಲೆಡೆಯಿಂದ ಈ ಬೃಹತ್ ಸಮಾವೇಶಕ್ಕೆ ವೀರಶೈವ ಲಿಂಗಾಯತ ಸಮಾಜ ಬಾಂಧವರು ಪಾಲ್ಗೊಳ್ಳಬೇಕೆಂದು ಶ್ರೀ ರಂಭಾಪುರಿ ಜಗದ್ಗುರುಗಳು ಕರೆ ಕೊಟ್ಟರು. ಶ್ರೀ ವೀರಮಾಹೇಶ್ವರ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿಯು ತನ್ನ ಸೊಸೈಟಿಯ ಕಾರ್ಯಗಳೊಂದಿಗೆ ಪ್ರತಿಭಾ ಪುರಸ್ಕಾರಗಳಂಥ ಸಾಮಾಜಿಕ ಕಾರ್ಯವನ್ನು ಮಾಡುತ್ತಿರುವುದು ಸಂತೋಷದ ಸಂಗತಿ ಎಂದರು.

ಸಮಾರಂಭದಲ್ಲಿ ಹಾವೇರಿ ಗೌರಿಮಠದ ಶಿವಯೋಗಿ ಶಿವಾಚಾರ್ಯ ಸ್ವಾಮಿಗಳು ಮತ್ತು ಬಣ್ಣದಮಠದ ಅಭಿನವ ಚೆನ್ನಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮಿಗಳು ಹಾಗೂ ಸೊಸೈಟಿ ಅಧ್ಯಕ್ಷ ಎಸ್.ಎನ್. ಹಿರೇಮಠ ಉಪಸ್ಥಿತರಿದ್ದರು.

# ವಿದ್ಯಾರ್ಥಿಗಳು ಹೆಚ್ಚೆಚ್ಚು ಸಂಶೋಧನೆ ಮಾಡಬೇಕು

ಮೈಸೂರು:ಸೆ.13:–ವಿಶ್ವವಿದ್ಯಾನಿಲಯಗಳ ಸಸ್ಯಶಾಸ್ತ್ರ ಅಧ್ಯಯನ ವಿಭಾಗಗಳಲ್ಲಿ ಕಲಿಕೆ, ಕೌಶಲತೆ ಜತೆಗೆ ಹೆಚ್ಚು–ಹೆಚ್ಚು ಸಂಶೋಧನೆಗಳನ್ನು ನಡೆಸಲು ವಿದ್ಯಾರ್ಥಿಗಳು ಮುಂದಾಗಬೇಕು ಎಂದು ಕರ್ನಾಟಕ ಉನ್ನತ ಶಿಕ್ಷಣ ಮಂಡಳಿ ಉಪಾಧ್ಯಕ್ಷ ಎಸ್. ಆರ್.ನಿರಂಜನ್ ಅಭಿಪ್ರಾಯಪಟ್ಟರು.

ಮೈಸೂರು ವಿವಿಯ ಮಾನಸಗಂಗೋತ್ರಿ ಕ್ಯಾಂಪಸ್ಸಿನಲ್ಲಿ ಇರುವ ವಿಜ್ಞಾನ ಭವನದಲ್ಲಿ ಸಸ್ಯಶಾಸ್ತ್ರ ಅಧ್ಯಯನ ವಿಭಾಗದವತಿಯಿಂದ ಆಯೋಜಿಸಿದ್ದ ಸಸ್ಯಶಾಸ್ತ್ರದಲ್ಲಿ ಹೊಸ ಆಯಾಮಗಳು ಮತ್ತು ಸೈಟೋಲಜಿ ಮತ್ತು ಜೆನೆಟಿಕ್ಸ್ ಕುರಿತ ರಾಷ್ಟ್ರೀಯ ಸಮ್ಮೇಳನದಲ್ಲಿ ಅತಿಥಿಯಾಗಿ ಭಾಗವಹಿಸಿ ಮಾತನಾಡಿದ ಅವರು, ಪ್ರಸ್ತುತ ವಿದ್ಯಾಭ್ಯಾಸ ಮಾಡುತ್ತಿರುವ ಯುವ ಸಮೂಹದ ಶ್ರೇಯೋಭಿವೃದ್ಧಿಗಾಗಿ ಕರ್ನಾಟಕ ರಾಜ್ಯ ಸರ್ಕಾರ ಬದ್ಧವಾಗಿದ್ದು, ರಾಜ್ಯ ಶಿಕ್ಷಣ ನೀತಿಯಲ್ಲಿ ಕೌಶಲಧಾರಿತ ಶೈಕ್ಷಣಿಕ ಕಾರ್ಯಕ್ರಮಗಳಿಗೆ ಹೆಚ್ಚಿನ ಅವಕಾಶ ಮಾಡಿಕೊಡಲಾಗಿದೆ. ಅಲ್ಲದೇ ರಾಜ್ಯ ಶಿಕ್ಷಣ ನೀತಿಯಲ್ಲಿ ತಂತ್ರಜ್ಞಾನದ ಸದ್ಬಳಕೆಯ ಜತೆಗೆ ಕೌಶಲಾಧಾರಿತ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡಲಾಗಿದೆ. ಹೀಗಾಗಿ ಪದವಿ ವಿದ್ಯಾರ್ಥಿಗಳು ಮೂರು ವಿಷಯಗಳ ಜತೆಗೆ ಮತ್ತೊಂದು ವಿಷಯವನ್ನು ಆಯ್ಕೆ ಮಾಡಿಕೊಂಡು ಅಧ್ಯಯನ ಮಾಡಲು ಅವಕಾಶ ಕಲ್ಪಿಸಲಾಗಿದೆ ಎಂದರು. ಸ್ವಾತಂತ್ರ್ಯ ನಂತರ ದೇಶದ ಸವಾಲುಗಳಾಗಿದ್ದ ಬಡತನ, ನಿರುದ್ಯೋಗ ಹಾಗೂ ಆಹಾರ ಕೊರತೆ ನೀಗಿಸಲು ಸಸ್ಯಶಾಸ್ತ್ರ ಅಧ್ಯಯನ ವಿಭಾಗಗಳು ಮಹತ್ವದ ಕೊಡುಗೆ ನೀಡಿವೆ. ಹಸಿರು ಕ್ರಾಂತಿಯ ಮೂಲಕ ಆಹಾರದ ಕೊರತೆಯನ್ನು ಬಗೆಹರಿಸಲಾಗಿದೆ. ಹಾಗೆಯೇ ಶಿಕ್ಷಣ ವ್ಯವಸ್ಥೆಯೂ ಹಂತ ಹಂತವಾಗಿ ಬೆಳೆದಿದ್ದು, ದೇಶದಲ್ಲಿಂದು ಸಾವಿರಾರು ಕಾಲೇಜುಗಳು, ವಿಶ್ವವಿದ್ಯಾನಿಲಯಗಳು ಸಸ್ಯಶಾಸ್ತ್ರ ವಿಷಯದಲ್ಲಿ ಮಹತ್ತರ ಸೇವೆ ನೀಡುತ್ತಿವೆ ಎಂದು ಶ್ಲಾಘನೆ ವ್ಯಕ್ತಪಡಿಸಿದರು.

# ಗಂಡನಿಗಾಗಿ ಅಲ್ಲದಿದ್ದರೂ ಮಕ್ಕಳಿಗಾಗಿ ಮನೆಯಲ್ಲಿರಿ

ಇತ್ತೀಚೆಗೆ ಸಮಾಜದಲ್ಲಿ ಆಂಟಿಯರ ಲವ್ ಸ್ಟೋರಿ ಕೇಳಿದರೆ ಒಂದು ಕ್ಷಣ ಎಲ್ಲರೂ ದಂಗಾಗುತ್ತಾರೆ ""ಗಂಡ ಹೆಂಡತಿಯ ಜಗಳ ಉಂಡು ಮಲಗುವ ತನಕ"" ಎಂಬ ಗಾದೆ ದೂರವಾಗಿ ಗಂಡ ಎಷ್ಟೇ ಪ್ರೀತಿಯಿಂದ ನೋಡಿ ಅತ್ತೆ–ಮಾವ ಮಗಳಂತೆ ನೋಡಿಕೊಂಡರು ಮಕ್ಕಳಿಗೆ ತಾಯಿ ಪ್ರೀತಿ ಕೊಡಬೇಕಾದ ಆಂಟಿಯರು ಪರಪುರುಷನ ವ್ಯಾಮೋಹಕ ಶರಣಾಗಿ ಮದುವೆಯಾದ ಪುರುಷನಿರಲಿ ಮದುವೆಯಾಗದ ಹರೆಯದ ಯುವಕನಿರಲಿ ಒಮ್ಮೆ ಆತನ ಮೇಲೆ ಮನಸ್ಸು ಮಾಡಿದರೆ ಏನೇ ಆದರೂ ಚಿಂತೆ ಇಲ್ಲ ಆತನನ್ನು ನನ್ನ ಪ್ರೀತಿಯ ಬಲೆಗೆ ಹಾಕಿಕೊಳ್ಳಬೇಕು ಎಂದು ನಿರ್ಧರಿಸಿ ಬಲೆ ಬೀಸುತ್ತಾರೆ. ಇತ್ತ ಯುವತಿಯರಗಿಂತ ಆಂ–ಟಿಯರು ಹೆಚ್ಚು ಮೋಜು–ಮಸ್ತಿ ಮಾಡುವುದರಿಂದ ವಿಭಿನ್ನ ಶೈಲಿಯ ಉಡುಪು ಉಡುವದರಿಂದ ಯುವತಿಯರಿಗಿಂತ ಅಂಟಿಯ–ರೇ ಹೆಚ್ಚು ಯುವಕರಿಗೆ ಇಷ್ಟ ಆಗುವರು ಎಂದು ಸಮೀಕ್ಷೆಗಳು ತಿಳಿಸುತ್ತವೆ. ಹಾಗಾಗಿ ಆಂಟಿಯರು ಮದುವೆಯಾದ ಅಂಕಲ್ ಇರಲಿ ಹದಿ ಹರೆಯದ ಯುವಕನಿರಲಿ ಒಟ್ಟಿನಲ್ಲಿ ಆತನನ್ನು ನನ್ನ ಬುಟ್ಟಿಗೆ ಹಾಕಿಕೊಳ್ಳಬೇಕು ಎನ್ನುವ ದೃಢ ಗಟ್ಟಿ ನಿರ್ಧಾರದಿಂದ ಇಂತಹ ಪ್ರಕರಣಗಳು ಹೆಚ್ಚಾಗುತ್ತಿದ್ದು ಇವುಗಳನ್ನು ತಡೆಗಟ್ಟಲು ಹಿರಿಯರು ಸಂಬಂಧಿಕರು ಎಷ್ಟೇ ಪ್ರಯತ್ನ ಮಾಡಿದರು ಅಕ್ರಮ ಸಂಬಂಧಗಳಿರುವರು ಯಾರು ಮಾತಿಗೆ ಬೆಲೆ ಕೊಡದೆ ತಮ್ಮ ಕೆಲಸ ಮುಂದುವರಿಸುತ್ತಾ ಸಾಗುತ್ತಾರೆ.

ಹಾಗಾಗಿ ಪ್ರೀತಿಗೆ ಕಣ್ಣಿಲ್ಲ, ಪ್ರೀತಿ ಕುರುಡು, ಪ್ರೀತಿಗೆ ಯಾವ ಸಮಯದಲ್ಲಿ ಯಾರು ಬೇಕಾದರೂ ಬಲೆ ಬೀಳುತ್ತಾರೊ ಎನ್ನುವುದು ನಾ ಕಾಣೆ. ಪ್ರೀತಿ ಪ್ರೇಮ ಪ್ರಣಯ ಅಂದರೆ 16 ತುಂಬಿದ ಹದಿ ಹರೆಯದ ಯುವಕ–ಯುವತಿಯರು ವಯಸ್ಸಿಗೆ ಬಂದರೆ ತಂದೆ ತಾಯಿಗಳ ಮನೆಯಲ್ಲಿ ಬೆಂಕಿ ಕೊಳ್ಳಿ ಇಟ್ಟುಕೊಂಡಂತೆ ಎಂದು ತಂದೆ–ತಾಯಿಗಳು ಭಯಭೀತರಾಗುತ್ತಿದ್ದರು. ಸುರಕ್ಷಿತವಾಗಿ ಮಕ್ಕಳ ಮದುವೆ ಯಾವಾಗ ಮಾಡುತ್ತೇವೆ ಆವಾಗಿನಿಂದ ನಾವು ಸಮಾಜದಲ್ಲಿ ಗೌರವಿತವಾಗಿ ನೆಮ್ಮದಿಯಿಂದ ಬಾಳುತ್ತೇವೆ ಎಂದು ದೇವರಿಗೆ ಹರಕೆ ಹೊತ್ತು ಮಕ್ಕಳ ಮದುವೆಗಳನ್ನು ಮಾಡುತ್ತಿದ್ದರು. ವಯಸ್ಸಿಗೆ ಬಂದ ಮಕ್ಕಳನ್ನು ತಮ್ಮ ನಿಯಂತ್ರಣದಲ್ಲಿಯೇ ಇಟ್ಟುಕೊಂಡು ಮದುವೆಯಾಗುವವರೆಗೂ ಅವರ ಮೇಲೆ ನಿಗಾ ಇಡುತ್ತಾ ಮದುವೆ ಮಾಡಿದ ನಂತರ ನಿಟ್ಟುಸಿರು ಬಿಡುತ್ತಿದ್ದರು ಆದರೆ ಇತ್ತೀಚಿನ ವಾತಾವರಣ ಇದಕ್ಕೆ ವ್ಯತರಿಕ್ತವಾಗಿದ್ದು ಮದುವೆಯಾದ ನಂತರವೂ ಆಂಟಿಯರ ಪರಪುರುಷರ ಯುವಕರ ಜೊತೆ ಪ್ರೀತಿ ಪ್ರೇಮ ಪ್ರಣಯದ ಬಲೆಗೆ ಬಿದ್ದು ತನ್ನ ಸಂಸಾರ ಲೆಕ್ಕಿಸದೆ ಗಂಡ ಮಕ್ಕಳನ್ನು ಬಿಟ್ಟು ಪರ ಪುರುಷನ ಜೊತೆ ಓಡಿ ಹೋಗುತ್ತಾರೆ.

ಮದುವೆಯಾದ ಹೊಸದರಲ್ಲಿ ಗಂಡನ ಜೊತೆ ಎರಡು ಮೂರು ತಿಂಗಳ ಚೆನ್ನಾಗಿಯೇ ಇದ್ದು ನಂತರ ಯಾವುದೋ ತಮ್ಮ ಹಳೆಯ ಲವರ್ ಜೊತೆ ಆಗಲಿ ಅಥವಾ ಸುಂದರವಾದ ಯುವಕ ಅಥವಾ ಪರಪುರುಷರನ್ನು ತಮ್ಮ ಬಲೆಗೆ ಹಾಕಿಕೊಂಡು ಅತ್ತೆ–ಮಾವ ಗಂಡ ಮಕ್ಕಳನ್ನು ಬಿಟ್ಟು ಪರಪುರುಷನ ಜೊತೆ ಅಕ್ರಮ ಸಂಬಂಧ ಹೊಂದಿ ಪ್ರೀತಿಯ ಬಲೆಗೆ ಬಿದ್ದ ಆಂಟಿಯರು ಸಂಸಾರದ ಮಾನ ಮರ್ಯಾದೆ ಹರಾಜು ಹಾಕಿ ಯಾರು ಎಷ್ಟೇ ಬುದ್ಧಿವಾದ ಹೇಳಿದರು ನಾನು ಪ್ರೀತಿಸಿದ ಹುಡುಗನನ್ನು ನಾ ಬಿಟ್ಟಿರಲಾರೆ ಬಿಟ್ಟು ಕೊಡಲಾರೆ ಎಂದು ತನ್ನ ಮೂಂಡತನ ಹಠ ಬಿಡದೆ ಪರಪುರುಷನನ್ನೇ ನನ್ನ ಪತಿಯೆಂದು ವಾದಿಸುವ ಆಂ–ಟಿಯರು ಸಂಖ್ಯೆ ಹೆಚ್ಚಾಗುತ್ತಿದ್ದು ಆಕೆಯನ್ನು ನಂಬಿದ ಗಂಡ ಮತ್ತು ಮಕ್ಕಳು ಚಳ್ಳೆಹಣ್ಣು ತಿನ್ನುವಂತಾಗಿದೆ.

ಇವತ್ತಿನ ಪರಿಸ್ಥಿತಿ ಈಗಾಗಲು ಕಾರಣವೇನು ? ಎಂದು ಹುಡುಕುತ್ತಾ ಹೋದರೆ ಇದಕ್ಕೆ ನೂರಾರು ಕಾರಣಗಳನ್ನು ಆಂಟಿ–ಯರು ತಿಳಿಸುತ್ತಾರೆ. ಇಲ್ಲಿ ಗಂಡನ ಮನೆಯವರದು ತಪ್ಪು ಅಥವಾ ಅಂಟಿಯರ ತಪ್ಪೊ ಎಂದು ಮನನ ಮಾಡಿಕೊಳ್ಳುವುದು ಯಕ್ಷಪ್ರಶ್ನೆಯಾಗಿ ಉಳಿಯುತ್ತದೆ ಹೊರತು ಅದು ಹಂತಿಮ ತಾರ್ಕಿಕ ಹಂತಕ್ಕೆ ಬರುವುದಿಲ್ಲ. ಏನೇ ಆದರೂ ಹೆಣ್ಣು ಒಂದು ಬಾರಿ ಮದುವೆಯಾದ ನಂತರ ಅದೇ ಮನೆ ದೇವಸ್ಥಾನ ತನ್ನ ಪತಿಯೇ ದೇವರೆಂದು ನಂಬಿ ನಡೆಯಬೇಕು ಮದುವೆಗಿಂತ ಮುಂಚೆ ಏನಾದರೂ ಅಕ್ರಮ ಸಂಬಂಧಗಳಿದ್ದರೆ ಸಮಾಜದಲ್ಲಿ ಗೌರವಯುತವಾಗಿ ಬದುಕಬೇಕೆಂದರೆ ಹಳೆಯ ಚಾಳಿಗಳನ್ನು ಬಿಟ್ಟು ಗಂಡನ ಮನೆಗೆ ಹೊಂದಿಕೊಂಡು ಹೋಗುವ ಹೆಣ್ಣನ್ನೇ ಸೌಭಾಗ್ಯಲಕ್ಷ್ಮಿ ಎನ್ನುವರು.

ಇತ್ತೀಚೆಗೆ ಇಂಥಹ ಪ್ರಕರಣಗಳು ಹೆಚ್ಚಾಗಲು ಕಾರಣ ಮದುವೆಯಾದ ಬಹುದಿನಗಳ ನಂತರ ಗಂಡನು ಹೆಂಡತಿಯನ್ನು ನಿರ್ಲಕ್ಷ ನಿಷ್ಕಾಳಜಿ ಮಾಡುವುದು ಹೆಂಡತಿ ಬೇಕೆ–ಒದ ಸುಖಗಳನ್ನು ನೀಡದಿದ್ದಾಗ ಕೆಲಸದ ಒತ್ತಡದ ಮಧ್ಯ ಪುರುಷನು ಹೆಂಡತಿಗೆ ಸಮಯ ಕೊಡದೇ ಇದ್ದಾಗ ಗಂಡನ ಮೇಲೆ ತಾತ್ಸಾರ ಭಾವನೆಯಿಂದ ನೋಡುವುದು ಇದಕ್ಕೆ ಮುಖ್ಯ ಕಾರಣ ಎಂದು ಹೇಳಲಾಗುತ್ತಿದೆಯಾದರೂ ಇವತ್ತಿನ ಪುರುಷ ಮಹಿಳೆಯರು ಹೊಂದಾಣಿಕೆ ಮಾಡಿಕೊಂಡು ಜೀವನ ನಡೆಸಬೇಕೆನ್ನುವ ಪರಿಜ್ಞಾನ ಕೈ ಬಿಟ್ಟು ನಮ್ಮದೇ ಒಣ ಪ್ರತಿಷ್ಠೆಗೆ ಹಟ ಸಾಧಿಸುವ ಗಂಡ ಹೆಂಡತಿ ಮಧ್ಯೆ ಇಂಥಹ ಪ್ರಕರಣಗಳು ಹೆಚ್ಚಾಗುತ್ತಿದ್ದು ತಪ್ಪು ಯಾರಿಂದವಾದರೂ ಅವುಗಳನ್ನು ತಿದ್ದಿಕೊಂಡು ನಡೆದರೆ ಮಾತ್ರ ಇವತ್ತಿನ ಸಮಾಜದಲ್ಲಿ ಸುಖ ಸಂಸಾರ ನಡೆಸಬಹುದು ಆದರೆ ಇದಕ್ಕೆ ವ್ಯತರಿಕ್ತ ವೆಂಬಂತೆ ಇವತ್ತು ಮದುವೆಯಾದ



ಗಂಡ ಹೆಂಡತಿಯರ ಮಧ್ಯೆ ಏನೇ ವಿರಸ ಬಂದರು ಅವುಗಳನ್ನು ನಿಭಾಯಿಸಿಕೊಂಡು ಹೋಗುವ ಸ್ವಭಾವ ಇಬ್ಬರೂ ಬೆಳೆಸಿಕೊಳ್ಳಬೇಕು ಹೆಚ್ಚಾಗಿ ಸಮಸ್ಯೆಗಳು ಬರುವದೆ ಇಬ್ಬರನ್ನು ಒರತಾಗಿಯೂ ಹೆಂಡತಿ ಪರಪುರುಷನ ಜೊತೆ ಗಂಡ ಪರಸ್ತ್ರಿಯ ಜೊತೆ ಅಕ್ರಮ ಸಂಬಂಧವಾಗಲಿ ಫೋನಿನಲ್ಲಿ ಮಾತನಾಡುವುದಾಗಲಿ ವಾಟ್ಸಪ್, ಇನ್ಸಾಗ್ರಾಮ್ ನಲ್ಲಿ ಮೆಸೇಜ್ ಮಾಡುವುದಾಗಲಿ ಅಥವಾ ಅವರನ್ನು ನೋಡಿ ನಗುವುದಾಗಲಿ ಅನಾವಶ್ಯಕ ಚೇಷ್ಟಗಳನ್ನು ಮಾಡಿದಾಗ ಗಂಡ ಹೆಂಡತಿಯ ಮಧ್ಯೆ ವೈಮನಸುಗಳು ಬರುತ್ತವೆ.

ಇಂಥ ಸಂಬಂಧಗಳು ಏನೇ ಇದ್ದರೂ ಮದುವೆಯಾದ ನಂತರ ಮಾಡುವುದು ಅಪರಾಧವೆಂದು ಗೊತ್ತಿದ್ದರೂ ಈ ಅಪರಾಧವನ್ನು ಮಾಡಲು ಮುಖ್ಯ ಕಾರಣವೇನು ಎಂಬುದನ್ನು ಅರಿತುಕೊಳ್ಳದೆ ಮುನ್ನಡೆತ್ತಿರುವುದು ಇವತ್ತಿನ ಸಮಾಜ ಇಂಥಹ ಘಟನೆ ಗಳಿಗೆ ಸಾಕ್ಷಿಯಾಗುತ್ತಿದೆ.

ಗಂಡನಾದವನು ಹೆಂಡತಿಗೆ ಸಮಯ ಕೊಡದಿದ್ದರೆ ಹೆಂಡತಿ ಗಂಡನನ್ನು ಚೆನ್ನಾಗಿ ನೋಡಿಕೊಳ್ಳುವುದಿಲ್ಲ ಎನ್ನುವ ಕಾರಣಕ್ಕಾಗಿ ಮನಸ್ತಾಪಗಳು ಬರುವುದು ಸರ್ವೇಸಾಮಾನ್ಯ ಆದರೆ ಇವೆಲ್ಲವುಗಳನ್ನು ಅರಿತುಕೊಂಡು ತಿಳುವಳಿಕೆಯಿಂದ ಬದುಕು ಸಾಗಿದಾಗ ಮಾತ್ರ ಸಂಸಾರ ಎಂಬ ಗುಟ್ಟು ರಟ್ಟಾಗದೆ ಸಮಾಜದಲ್ಲಿ ನೆಮ್ಮದಿಯಿಂದ ಬದುಕಬಹುದು.

ಆದರೆ ಇತ್ತೀಚಿನ ಲವ್ ಪ್ರಕರಣಗಳನ್ನು ನೋಡ್ತಾ ಇದ್ದರೆ ಎಂಥವರ ಮನಸ್ಸು ಒಂದು ಕ್ಷಣ ಚೂರ್ ಅನ್ನದೇ ಇರಲಾರದು ಮದುವೆಯಾಗಿ ಮಕ್ಕಳಾಗಿ ಮಕ್ಕಳು ಮದುವೆ ವಯಸ್ಸಿಗೆ ಬಂದ ನಂತರವೂ ಸ್ತ್ರೀ ಪರಪುರುಷನೊಂದಿಗೆ ಅಕ್ರಮ ಸಂಬಂಧ ಹೊಂದಿ ಆತನ ಜೊತೆಯೇ ಜೀವನ ನಡೆಸುತ್ತೇನೆ ಮೊಂಡತನದ ನಿರ್ಧಾರಗಳು ಮಗಳಿಗೆ ಫಿಕ್ಸ್ ಆದ ಅಳಿಯನ ಜೊತೆ ಅತ್ತೆ ಪರಾರಿಯಾದ ಘಟನೆಯಂತೂ ಇಡೀ ಸಮಾಜವೇ ತಲೆ ತಗ್ಗಿಸುವಂತಹಾಯಿತು.

ದೇಹದ ಸುಖಕ್ಕಾಗಿ ಪುರುಷ ಅಥವಾ ಸ್ತ್ರೀಯರು ಪರರ ಸಹವಾಸ ಮಾಡಿ ದೇಹದ ಸುಖ ಅನುಭವಿಸುತ್ತಾರೆ ಹೊರತು ಅವರ ಮಧ್ಯೆ ಇರುವ ಸಂಬಂಧಗಳು ಶಾಶ್ವತವಾಗಿ ಇರಲಾರವು ಎನ್ನುವದು ಅರ್ಥ ಮಾಡಿಕೊಳ್ಳದೆ ಇಂಥಹ ನಿರ್ಧಾರಗಳಿಗೆ ಮುನ್ನುಗ್ಗುತ್ತಿರುವುದು ತುಂಬಾ ಅಸಹ್ಯಕರ ಎನಿಸಿದರು ಅವರಿಗೆ ಮಾತ್ರ ತಾವು ಅನುಭವಿಸುವ ಸುಖದ ಮುಂದೆ ಇದು ಯಾವುದು ತೋಚದೇ ಇಲ್ಲ ಬೇಕಾಗಿರುವ ಅವಶ್ಯಕತೆಗಳನ್ನು ಈಡೇರಿಸಿಕೊಳ್ಳುವುದೇ ಮುಖ್ಯವಾಗಿರುವುದರಿಂದ ಮಾನ ಮರ್ಯಾದೆಗೋಜಿಗೆ ಹೋಗದೆ ತಮ್ಮ ಮುಖ್ಯ ಆಸೆ ಈಡೇರಿಸಿಕೊಳ್ಳುವತ್ತ ಮಾತ್ರ ಮುಖ ಮಾಡುತ್ತಾರೆ ಹೊರತು ಇನ್ನೊಬ್ಬರ ಬಗ್ಗೆ ಇಲ್ಲ ಸಲ್ಲದ ಆರೋಪಗಳ ಬಗ್ಗೆ ಅವರು ತಲೆ ಕೆಡಿಸಿಕೊಳ್ಳದಿರುವುದೇ ಇವತ್ತು ಸಮಾಜದಲ್ಲಿ ಪ್ರಕರಣಗಳು ಸಂಖ್ಯೆ ಹೆಚ್ಚಾಗುತ್ತಿವೆಯಾದರೂ ಅವುಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಯಾರೂ ಪ್ರಯತ್ನ ಮಾಡಿದರು ಅವು ವಿಫಲಗೊಳ್ಳುತ್ತಿವೆ ಏಕೆಂದರೆ ಅವರಿಬ್ಬರಿಗೂ ಒಪ್ಪಿಗೆ ಇದ್ದಾಗ ಇನ್ನೊಬ್ಬರು ಏನು ಹೇಳಲಿಕ್ಕೆ ಅವಕಾಶ ಇಲ್ಲದಿರುವುದು ಅವರವರ ಕುಟುಂಬಗಳನ್ನು ತಲೆತಗ್ಗಿಸುವಂತೆ ಮಾಡುತ್ತಿದೆ ಮತ್ತು ಅವರ ಕುಟುಂಬದ ಮಾನ ಮರ್ಯಾದೆ ಹರಾಜು ಹಾಕುತ್ತವೆಯಾದರೂ ಅವರು ಮಾತ್ರ ಯಾವುದಕ್ಕೂ ತಲೆಕೆಡಿಸದೆ ಮನೆಯಲ್ಲಿರುವರ ಮೇಲೆ ಅಪನಂಬಿಕೆ ವ್ಯಕ್ತಪಡಿಸುತ್ತಾ ತಾನು ನಂಬಿದ ಪುರುಷನ ಜೊತೆಯೇ ನನ್ನ ಜೀವನ ಎಂದು ಹೇಳಿಕೊಂಡು ತಿರುಗಾಡುವ ನಾಚಿಕೆಗೇಡಿನ ಇಂಥ ಸ್ತ್ರೀಯರಿಗೆ ಭಾರತದಲ್ಲಿ ಯಾವ ಸ್ಥಾನ ನೀಡಬೇಕೆಂದು ತೋರದಂತಾಗಿದೆ.

ಪರಪುರುಷನ ಜೊತೆ ಅಕ್ರಮ ಸಂಬಂಧ ನಿರಂತರವಾಗಿ ಮುಂದುವರಿಸಲು ನನ್ನ ಗಂಡ ಅತ್ತೆ ಮಾವ ಮಕ್ಕಳು ನನಗೆ ಅಡ್ಡಿ ಆಗುತ್ತಾರೆ ಎಂದು ಆಲೋಚಿಸಿ ಪರಪುರುಷನ ಜೊತೆ ಸೇರಿಕೊಂಡು ಕೊಲೆ ಮರ್ಡರ್ ಮಾಡಿಸಿದಂತಹ ಸಾಕಷ್ಟು ಉದಾಹರಣೆಗಳು ಸಮಾಜದಲ್ಲಿ ಕಾಣಸಿಗುತ್ತಿವೆ. ತನ್ನ ಕಾಮ ಚೇಷ್ಟೆಗೆ ಇವರ್ಯಾರು ಅಡ್ಡಿ ಬರಬಾರದೆಂಬ ಕೆಟ್ಟ ದುರಾಲೋಚನೆ ಮಾಡಿ ಪೊಲೀಸರ ಬಲೆಗೆ ಬಿದ್ದು ಅದೆಷ್ಟೋ ಪರ ಪುರುಷ ಪರ ಸ್ತ್ರೀ ಯರು ಇವತ್ತು ಕಂಬಿ ಹಿಂದೆ ಸರಿದಿದ್ದಾರೆ. ಇಷ್ಟಾದರೂ ಇದರಲ್ಲಿ ಯಶಸ್ವಿಯಾದವರು ಸಾಕಷ್ಟು ಜನ ಇದ್ದಾರೆ ಎಂದು ಸಮಾಜ ಮಾತನಾಡುತ್ತಿದೆ.


ಭಾರತ ದೇಶದಲ್ಲಿ ಸ್ತ್ರೀಗೆ ನೀಡುವ ಗೌರವ ಮತ್ತಾವುದಕ್ಕೂ ನೀಡುವುದಿಲ್ಲ ಸ್ತ್ರೀಯನ್ನು ಭಾರತಮಾತೆಗೆ ಕರ್ನಾಟಕದ ಮಾತೆಗೆ ದೇಶದ ಪವಿತ್ರ ನದಿಗಳಿಗೆ ಹೋಲಿಸಲಾಗುತ್ತದೆ ಆದರೆ ಇವರು ಮಾಡುವ ಪರರ ಸಂಗ ಗಮನಿಸಿದರೆ ಎಂತವರಿಗೂ ಅಸಹ್ಯ ತರಿಸುತ್ತದೆ.

ಇತ್ತ ಗಂಡನಾದವನು ಹೆಂಡತಿಯನ್ನು ಸರಿಯಾಗಿ ಅರ್ಥ ಮಾಡಿಕೊಂಡು ತನ್ನ ಹೆಂಡತಿಗೆ ಬೇಕಾಗಿರುವ ಬೇಕು ಬೇಡಗಳನ್ನು ವಿಚಾರಿಸಿ ಯಾವುದರಿಂದ ತನ್ನ ಹೆಂಡತಿ ಸಂಪೂರ್ಣ ಸಂತೃಪ್ತಿ ಹೊಂದುತ್ತಾಳೆ ಎಂದು ಅರ್ಥೈಸಿಕೊಂಡು ಅವಳ ಆಸೆ ಈಡೇರಿಸುವಂತ ಗಂಡನಿರಬೇಕು ಹೆಂಡತಿಯನ್ನು ಗಂಡನು ಸರಿಯಾಗಿ ನೋಡಿಕೊಳ್ಳದಿದ್ದಾಗ ಆಸ್ತಿ ಪರಪುರುಷನಿಗೆ ಆಕರ್ಷಿತಳಾಗುತ್ತಾಳೆ. ಪರಪುರುಷನ ಆಕೆಯ ಮೇಲೆ ತೋರಿಸುವ ಪ್ರೀತಿ ಮಮಕಾರ ಕಾಳಜಿ ಹಾಗೂ ಹೋಗುಗಳ ವಿಚಾರಣೆ ಆಕೆಗೆ ಬೇಕಾದ ಬೇಕು ಬೇಡಗಳನ್ನು ಒದಗಿಸುವುದು ಮಾಡಿದರಷ್ಟೇ ಸಾಕು ಗಂಡನನ್ನು ಸಂಪೂರ್ಣ ಮರೆತು ಪರಪುರುಷನಿಗೆ ಮಾರು ಹೋಗಿ ಬಿಡುತ್ತಾಳೆ ಆವಾಗ ಗಂಡನ ಪರಿಸ್ಥಿತಿ ಹೇಗಾಗುತ್ತದೆ ಎಂದರೆ ""ಅವಕಾಶ ಇದ್ದಾಗ ಆಸೆಗಳನ್ನು ಈಡೇರಿಸದೆ ಅವಕಾಶ ತಪ್ಪಿದ ನಂತರ ಆಸೆ ಈಡೇರಿಸಿಕೊಳ್ಳಲು ಹೆಣಗಾಡಿದಂತೆ""ಸಮಯ ಮುಗಿದ ನಂತರ ಪ್ರಯತ್ನ ಮಾಡಿದರೆ ಏನು ಪ್ರಯೋಜನ ಎಂದಂತಾಗುವುದು.

ಹಾಗಾಗಿ ಗಂಡ ಹೆಂಡತಿಯ ಮನಸ್ಸನ್ನು ಹೆಂಡತಿ ಗಂಡನ ಮನಸ್ಸನ್ನು ಒಬ್ಬರಗೊಬ್ಬರು ಚೆನ್ನಾಗಿ ಪರಸ್ಪರವಾಗಿ ಅರ್ಥ ಮಾಡಿಕೊಂಡು ನಡೆಯದಿದ್ದರೆ ಇಂಥಹ ಅವಾಂತರಗಳಿಗೆ ಗಂಡಂದಿರೇ ಆಹ್ವಾನ ಕೊಟ್ಟಂತಾಗುತ್ತದೆ.

ಇತ್ತೀಚಿನ ದಿನದಲ್ಲಂತೂ ಉತ್ತರ ಕರ್ನಾಟಕದ ಜಾನಪದ ಶೈಲಿಯ ಲವ್ ಫೀಲಿಂಗ್ ಸಾಂಗು ಕೇಳಿ ಮದುವೆ ಆಗದವರು ಮದುವೆ ಆದವರು ಪ್ರೀತಿಯ ಗುಂಗು ಹಿಡಿಸಿಕೊಂಡು ತಮ್ಮ ಸುಖ ಸಂಸಾರಕ್ಕೆ ಒಳ್ಳೆ ಇಟ್ಟುಕೊಳ್ಳುತ್ತಿದ್ದಾರೆ ಲವ್ ಫೀಲಿಂಗ್ ಸಾಂಗ್ ಕೇಳಿ ಸ್ತ್ರೀ ಅಥವಾ ಪುರುಷ ಪರ ಸ್ತ್ರೀ ಪರ ಪುರುಷನ ಮೇಲೆ ವ್ಯಾಮೋಹಕ್ಕೆ ಆಕರ್ಷಿತರಾಗಿ ಕುಟುಂಬ ತೊ–ರೆದು ಓಡಿ ಹೋಗುವರ ಸಂಖ್ಯೆ ಹೆಚ್ಚಾಗುತ್ತಿದ್ದು ಮಕ್ಕಳ ಪರಿಸ್ಥಿತಿ ಅದೋಗತಿಗೆ ಹೋಗುತ್ತಿದೆ.

ನೀವು ಗಂಡನ ಮನೆ ಬಿಟ್ಟು ಹೋಗುವ ಮುನ್ನ ಒಂದು ಕ್ಷಣವಾದರೂ 9 ತಿಂಗಳ ನಿಮ್ಮ ಹೊಟ್ಟೆಯಲ್ಲಿ ಹೆತ್ತು ಒತ್ತು ಬೆಳೆಸಿದ ಮಗುವಿನ ಬಗ್ಗೆಯಾದರು ಆಲೋಚಿಸಿ ನಿಮಗೆ ಗಂಡ ಅತ್ತೆ ಮಾವ ಮೋಸ ಮಾಡಿರಬಹುದು ಆದರೆ ಸಣ್ಣ ಮಕ್ಕಳು ನಿಮಗೆ ಯಾವ ರೀತಿ ಮೋಸ ಮಾಡಲು ಸಾಧ್ಯವಿಲ್ಲ ತಾಯಿಯ ಪ್ರೀತಿಯಿಂದ ವಂಚಿತರಾದ ಮಕ್ಕಳು ಸಮಾಜದಲ್ಲಿ ಅನಾಥವಾಗಿ ಬಿಡುತ್ತವೆ ಎನ್ನುವ ಆಲೋಚನೆ ಮಾಡಿಯಾದರೂ ಪರಪುರುಷನ ಜೊತೆ ಹೋಗುವ ನಿರ್ಧಾರ ಕೈಬಿಟ್ಟು ಗಂಡನ ಜೊತೆ ನೀವು ಸಂಸಾರ ಮಾಡಿ ಮಾಡದಿರಿ ಆದರೆ ಮಕ್ಕಳ ಭವಿಷ್ಯಗೋಸ್ಕರ ಇಂತಹ ನಿರ್ಧಾರಗಳನ್ನು ಕೈ ಬಿಟ್ಟು ಮಕ್ಕಳ ಮುಖವನ್ನು ನೋಡಿಯಾದರೂ ಇಂತಹ ನಿರ್ಧಾರಗಳಿಂದ ದೂರ ಉಳಿಯುವುದು ಒಳಿತು ಎಂದೆನಿಸುತ್ತದೆ.



ಜಗದೀಶ.ಎಸ್.ಗಿರಡ್ಡಿ.
ಲೇಖಕರು ಗೊರಬಾಳ.
ಮೊ. 9902470856.

# ನಾಳೆ ಕ್ರೀಡೆ, ಸಾಂಸ್ಕೃತಿಕ ಚಟುವಟಿಕೆಗಳ ಉದ್ಘಾಟನೆ

ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಸೆ.13– ಜಿಲ್ಲೆಯ ಹುನಗುಂದ ತಾಲೂಕಿನ ಪಟ್ಟಣದ ಹುಚ್ಚೇಶ್ವರ ವಿದ್ಯಾವರ್ಧಕ ಸಂಘದ ಗ್ರಾಮೀಣ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯದಲ್ಲಿ ಸೆ.15 ರಂದು ಕ್ರೀಡೆ, ಸಾಂಸ್ಕೃತಿಕ ಹಾಗೂ ಎನ್‌ಎಸ್‌ಎಸ್ ಚಟುವಟಿಕೆಗಳ ಉದ್ಘಾಟನೆ ಮತ್ತು ಬಿಎ, ಬಿಕಾಂ ಮೊದಲ ಸೆಮಿಸ್ಟರ್ ವಿದ್ಯಾರ್ಥಿಗಳ ಸ್ವಾಗತ ಸಮಾರಂಭ ಜರುಗಲಿದೆ. ಸೋಮವಾರ ಬೆಳಿಗ್ಗೆ 10 ಘಂಟೆಗೆ ಕಾಲೇಜು ಸಭಾಭವನದಲ್ಲಿ ನಡೆಯುವ ಸಮಾರಂಭದ ದಿವ್ಯ ಸಾನಿಧ್ಯವನ್ನು ಹುಚ್ಚೇಶ್ವರ ವಿದ್ಯಾವರ್ಧಕ ಸಂಘದ ಅಧ್ಯಕ್ಷರಾದ ಹುಚ್ಚೇಶ್ವರ ಮಹಾಸ್ವಾಮಿಗಳು ವಹಿಸುವರು. ಗುಳೇದಗುಡ್ಡದ ಅಮರೇಶ್ವರ ಮಠದ ನೀಲಕಂಠ ಶಿವಾಚಾರ್ಯ ಮಹಾಸ್ವಾಮಿಗಳು ಕಾರ್ಯಕ್ರಮ ಉದ್ಘಾಟಿಸುವರು.

ಹುಚ್ಚೇಶ್ವರ ವಿದ್ಯಾವರ್ಧಕ ಸಂಘದ ಸಹಕಾರ್ಯದರ್ಶಿ ವಿದ್ಯಾಧರ ಮಳ್ಳಿ ಅಧ್ಯಕ್ಷತೆ ವಹಿಸುವರು. ಹುನಗುಂದದ ಪ್ರೊ.ಎಸ್.ಬಿ.ಚಳಗೇರಿ ಮುಖ್ಯ ಅತಿಥಿಗಳಾಗಿ ಆಗಮಿಸುವರು. ಕಮತಗಿ ಪಟ್ಟಣ ಪಂಚಾಯತ ಅಧ್ಯಕ್ಷ ಬಸವರಾಜ ಕುಂಬಳಾವತಿ, ಉಪಾಧ್ಯಕ್ಷೆ ಶ್ರೀಮತಿ ನೇತ್ರಾವತಿ ನಿಂಬಲಗುಂದಿ ಅವರನ್ನು ಸನ್ಮಾನಿಸಲಾಗುವುದು ಎಂದು ಗ್ರಾಮೀಣ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯದ ಪ್ರಾಚಾರ್ಯ ಪಿ.ಎಂ. ಗುರುವಿನಮಠ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಹಿಂದೂ ಮರಾಠಾ ಎಂದು ಬರೆಯಿಸಲು ಮನವಿ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ:ಸೆ.22 ರಿಂದ ನಡೆಯುವ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ ಸಂದರ್ಭದಲ್ಲಿ ಮರಾಠಾ ಸಮಾಜದವರು ಹಿಂದೂ ಮರಾಠಾ ಎಂದು ಬರೆಯಿಸಬೇಕೆಂದು ಕರ್ನಾಟಕ ಕ್ಷತ್ರಿಯ ಮರಾಠಾ ಪರಿಷತ್ ರಾಜ್ಯ ಉಪಾಧ್ಯಕ್ಷ ಡಾ.ಶೇಖರ ಮಾನೆ ಮನವಿ ಮಾಡಿದ್ದಾರೆ.

ನಗರದಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು,ಬೆಂಗಳೂರಿನಲ್ಲಿ ಸಮಾಜದ ಪ್ರಮುಖರಾದ ಸಚಿವ ಸಂತೋಷ ಲಾಡ, ಪಿ.ಜಿ.ಆರ್ ಸಿಂದಿಯಾ, ಮಂಜುನಾಥ, ಶ್ರೀನಿವಾಸ ಮಾನೆ ಸೇರಿ ಮುಖಂಡರ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದರು.

ರಾಜ್ಯ ಸಮಿತಿ ತೆಗೆದುಕೊಂಡ ನಿರ್ಧಾರದಂತೆ ಎಲ್ಲ ಮರಾಠಾ ಸಮಾಜದವರು ಧರ್ಮದ ಕಾಲಂನಲ್ಲಿ ಹಿಂದೂ, ಜಾತಿ ಕಾಲಂನಲ್ಲಿ ಮರಾಠಾ ಎಂದು ಹಾಗೂ ಉಪಜಾತಿ ಕಾಲಂನಲ್ಲಿ ಕುನಬಿ ಎಂದು ಬರೆಯಿಸಬೇಕು ಎಂದು ಡಾ.ಮಾನೆ ಹೇಳಿದರು.

ಕರ್ನಾಟಕ ಕ್ಷತ್ರೀಯ ಮರಾಠಾ ಪರಿಷತ್ ಜಿಲ್ಲಾ ಅಧ್ಯಕ್ಷ ಶ್ರೀಕಾಂತ ಪಾಟೀಲ, ಪ್ರಧಾನ ಕಾರ್ಯದರ್ಶಿ ಸುಧೀರ ಜಾಧವ, ಖಜಾಂಚಿ ಮಾರುತಿ ಮಾನೆ, ಮಹಿಳಾ ಘಟಕದ ಜಿಲ್ಲಾ ಅಧ್ಯಕ್ಷೆ ಉಮಾ ಮಾನೆ, ಉಪಾಧ್ಯಕ್ಷೆ ಕಲ್ಪನಾ ಸಾವಂತ ಇದ್ದರು.

# ಒಳ ಮೀಸಲಾತಿ ಸಮೀಕ್ಷೆ ಅವೈಜ್ಞಾನಿಕ, ಕಾನೂನು ಬಾಹಿರ : ಸುರೇಶ್ ಬಳೂಟಗಿ ಆರೋಪ!



ಮಲ್ಲಮ್ಮ ನುಡಿವಾರ್ತೆ

ಕೊಪ್ಪಳ : ರಾಜ್ಯ ಸರ್ಕಾರವು ಒಳಮೀಸಲಾತಿ ವರ್ಗೀಕರಣವನ್ನು ನೈಜತೆಯ ಆದಾರದ ಮೇಲೆ ಮಾಡಿರುವುದಿಲ್ಲ. ಇದು ಅವೈಜ್ಞಾಕ ಕಾನೂನು ಬಾಹಿರವಾಗಿರುವ ತೀರ್ಮಾನವಾಗಿದೆ. ಇದರಿಂದ ಬಂಜಾರ ಕೊರಮ ಕೊರಚ ಬೋವಿ ಸಮುದಾಯಗಳಿಗೆ ಘೋರ ಅನ್ಯಾಯವಾಗಲಿದೆ ಎಂದು ಗೋರ್ ಸೇನಾ ಕರ್ನಾಟಕ ರಾಜ್ಯ ಪ್ರಧಾನ ಕಾರ್ಯದರ್ಶಿ ಸುರೇಶ್ ಬಳೂಟಗಿ ಆರೋಪಿಸಿದರು.

ಈ ವೇಳೆಯಲ್ಲಿ ಬಂಜಾರರ ಸಾಂಪ್ರದಾಯಿಕ ಉಡುಗೆ ತುಡಿಗಳನ್ನು ತೊಟ್ಟು ಕುಲ ಕಸುಬು ಕಟ್ಟಿಗೆ ಮಾರುವುದರ ವೇಶಧರಿಸಿ ಜೊತೆಗೆ ಬಹಳ ವಿಭಿನ್ನವಾಗಿ ಯುವಕರು ತಮ್ಮ ತಲೆ ಕೂದಲನ್ನು ಬೋಳಿಸುವ ಮುಖಾಂತರ ರಾಜ್ಯ ಕಾಂಗ್ರೆಸ್ ಸರ್ಕಾರದ ವಿರುದ್ಧ ತಮ್ಮ ಆಕ್ರೋಶ ಹೊರಹಾಕಿದರು.

ಇಂದು ಕುಕನೂರು ಪಟ್ಟಣದಲ್ಲಿ ಬೃಹತ್ ಪ್ರತಿಭಟನೆ ರ್ಯಾಲಿ ಹಮ್ಮಿಕೊಂಡಿದ್ದರು, ಈ ಕುರಿತು ಮಾತನಾಡಿದ ಅವರು,'ಕೊಲಂಬೋ (ಕೊರಮ,ಕೊರಚ,ಲಂಬಾಣಿ,ಭೋವಿ) ಸಮುದಾಯಗಳ ಜನಸಂಖ್ಯೆಯು ಹೆಚ್ಚಾಗಿದ್ದು, ಈ ಸಮುದಾಯವು ಸಾಮಾಜಿಕ,ಶೈಕ್ಷಣಿಕ,ರಾಜಕೀಯ, ಆರ್ಥಿಕ&ಉದ್ಯೋಗಿಕ ಸೌಲಭ್ಯಗಳಿಂದ ಈಗಾಗಲೇ ವಂಚಿತವಾಗಿದೆ.

ನ್ಯಾ. ನಾಗಮೋಹನದಾಸ್ ಆಯೋಗವು ಪರಿಶಿಷ್ಟ ಜಾತಿಗಳ ಸಮೀಕ್ಷೆ ಮಾಡುವ ಸಂದರ್ಭದಲ್ಲಿ ಲಂಬಾಣಿ ಸಮುದಾಯದ ಜನರು ಗೋವಾ,ಕೇರಳ,ಆಂಧ್ರ,ಮಹಾರಾಷ್ಟ್ರ ರಾಜ್ಯಗಳಿಗೆ ಹೊಟ್ಟೆಪಾಡಿಗಾಗಿ ವಲಸ ಹೋಗಿದ್ದರು ಅವರು ಈ ಸಮೀಕ್ಷೆಯಿಂದ ಹೊರ ಉಳಿದಿದ್ದಾರೆ ಎಂದರು.

ಈ ಸಮೀಕ್ಷೆ ಮಾಡುವ ಸಂಧರ್ಭದಲ್ಲಿ ಉಪಜಾತಿ ಕಾಲಂನಲ್ಲಿ ಬಂಜಾರ' ಕೊರಮ ಕೊರಚ ಬೋವಿ ಸಮುದಾಯಗಳ ಜಾತಿಯನ್ನು ಸರಿಯಾಗಿ ನಮೂದಿಸಿರುವುದಿಲ್ಲ. ಕೊಲಂಬೋ ವಾಸಿಸುವ ಕೆಲವೊಂದು ಕಡೆ ಆದಿ ಆಂಧ್ರ ಆದಿ ದ್ರಾವಿಡ ಆದಿ ಕರ್ನಾಟಕ ಎಂದು ತಪ್ಪಾಗಿ ನಮೂದಿಸಲಾಗಿದೆ.ಹೀಗೆ ವಿವಿಧ ರೀತಿಯ ಧೋರಣೆಗಳಿಂದ ಈ ಸಮೀಕ್ಷೆಯಲ್ಲಿ ನಮಗೆ ಅನ್ಯಾಯ ಮಾಡಲಾಗಿದೆ. ಪರಿಶಿಷ್ಟ ಜಾತಿಗಳಲ್ಲಿ ಸಾಮಾಜಿಕ, ಶೈಕ್ಷಣಿಕ, ಆರ್ಥಿಕ, ಉದ್ಯೋಗಿಕ, ರಾಜಕೀಯವಾಗಿ ಕಡಿಮೆ ಸೌಲಭ್ಯ ತೆಗೆದುಕೊಂಡಿರುವುದು ಕೊಲಂಬೋ ಸಮುದಾಯಗಳು ಆದರೂ ಹೆಚ್ಚಿನ ಸೌಲಭ್ಯ ಪಡೆದಿರುತ್ತಾರೆ ಎಂದು ಪೂರ್ವಪೀಡಿತರಾಗಿ ತಿಳಿಸಿರುತ್ತಾರೆ ಎಂದು ತಿಳಿಸಿದರು.

ಈ ಹಿಂದಿನ ಸರ್ಕಾರವು ಸಚಿವ ಸಂಪುಟದಲ್ಲಿ ನಮಗೆ(ಕೊಲಂಬೋ) 4.5 ಒಳ ಮೀಸಲಾತಿಯನ್ನು ನೀಡುವುದಾಗಿ ತೀರ್ಮಾನಿಸಿ ಅದನ್ನು ಅಂಗೀಕಾರ ಮಾಡಿತ್ತು. ಅಂದಿನ ಸಂಧರ್ಬದಲ್ಲಿ ನಮ್ಮ ಸಮುದಾಯಗಳಿಗೆ ಅನ್ಯಾಯ ವಾಗುತ್ತದೆ ಎಂದು ಅದನ್ನು ತಿರಸ್ಕರಿಸಿದವು. ಆದರೆ ಈಗ ನಾಗಮೋಹನ್ ದಾಸ್ ವರದಿಯು ಬಂಜಾರ ಲಂಬಾಣಿ ಕೊರಮ ಕೊರಚ ಬೋವಿ ಸಮುದಾಯಗಳಿಗೆ 4 ಒಳಮೀಸಲಾತಿ ನೀಡಬೇಕೆಂದು ಹೇಳಿದೆ ಇದು ಯಾವ ನ್ಯಾಯ? ಸರ್ಕಾರವು ಸಚಿವ ಸಂಪುಟದಲ್ಲಿ ತೆಗೆದುಕೊಂಡಿರುವ ತೀರ್ಮಾನ, ಕರಡು ಅಧಿಸೂಚನೆ ಹಾಗೂ ನಾಗಮೋಹನದಾಸ್ ವರದಿ ಎರಡು ಬಿನ್ನವಾಗಿವೆ.

ಸರಿಯಾದ ಮಾರ್ಗ ಅನುಸರಿಸದೆ ವೈಜ್ಞಾನಿಕವಾಗಿ ಸಮೀಕ್ಷೆ ಮಾಡದೆ ದತ್ತಾಂಶಗಳನ್ನು ಕ್ರೈಡೀಕರಿಸಿ ಸಿದ್ಧಪಡಿಸಿರುವ ಈ ವರದಿಯನ್ನು ಅಂಗೀಕರಿಸಬಾರದು. ಮತ್ತೊಮ್ಮೆ ನೈಜತೆಯಿಂದಿರುವ ದತ್ತಾಂಶಗಳನ್ನು ಸಮೀಕ್ಷಯ ಮೂಲಕ ಕ್ರೈಡೀಕರಿಸಲು ಆಯೋಗಕ್ಕೆ ಸೂಚಿಸಬೇಕು. ಇಲ್ಲವಾದಲ್ಲಿ ಕೇಂದ್ರ ಸರ್ಕಾರವು ಮುಂದಿನ ದಿನಗಳಲ್ಲಿ ಮಾಡುವ ಜನಸಂಖ್ಯೆ ಹಾಗೂ ಜಾತಿಗಣತಿಯನ್ನು ಪರಿಗಣಿಸಬೇಕು ಎಂದು ಒತ್ತಾಯಿಸಿದರು.

ರಾಜ್ಯ ಸರ್ಕಾರವೂ ಸಚಿವ ಸಂಪುಟದಲ್ಲಿ ತೆಗೆದುಕೊಂಡಿರುವ ತೀರ್ಮಾನವನ್ನು ಕೈ ಬಿಡಬೇಕು. ಸಚಿವ ಸಂಪುಟದ ಒಳಮೀಸಲಾತಿಯ ವರ್ಗೀಕರಣದ ಕರಡು ಅಧಿಸೂಚನೆಯನ್ನು ಹಿಂತೆಗೆದುಕೊಳ್ಳಬೇಕು. ಒಳಮೀಸಲಾತಿಯ ವೈಜ್ಞಾನಿಕ ವರ್ಗೀಕರಣ ಮಾಡುವುದಾದರೆ ಎಲ್ಲರಿಗೂ ಸಮಾಪಾಲು ನೀಡುವ ಮೂಲಕ ಬಂಜಾರ ಕೊರಮ ಕೊರಚ ಬೋವಿ ಸಮುದಾಯಗಳಿಗೆ 5 ಮೀಸಲಾತಿಯ ಪ್ರಮಾಣವನ್ನು ನೀಡಬೇಕು.

ಈ ವೇಳೆ ತಹಶೀಲ್ದಾರ್ ಹೆಚ್ ಪ್ರಾಣೇಶ್ ಅವರಿಗೆ ಮನವಿ ಪತ್ರ ಸಲ್ಲಿಸಿದರು. ಇದೇ ಸಂದರ್ಭದಲ್ಲಿ ಲಂಬಾಣಿಗರ ನಂಗಾರ,ವಾಜಾ ಅಂದರೆ ಭಜನೆ ಮಾಡುತ್ತಾ ತಮ್ಮ ಕುಲಕಸಬು ಕಟ್ಟಿಗೆ ಮಾರುವು ರೀತಿಯಲ್ಲಿ ವೇಶಧರಿಸಿ ಬಹಳ ವಿಶಿಷ್ಟವಾಗಿ ಪ್ರತಿಭಟನೆ ಮಾಡಿದರು.

ಈ ಸಂದರ್ಭದಲ್ಲಿ ಮುಖಂಡರಾದ ಮೇಘರಾಜ್ ಬಳಗೇರಿ, ಬಸವರಾಜ ನಾಯ್ಕ್, ಜೀತು ನಾಯ್ಕ್, ಹಂಪಣ್ಣ ಕಟ್ಟಿಮನಿ, ಯಮನೂರಪ್ಪ ಕಟ್ಟಮನಿ, ಯಲ್ಲಪ್ಪ ಕಾರಭಾರಿ, ಯಮನೂರಪ್ಪ ಭಾನಾಪೂರ್, ಪರಸಪ್ಪ ಕಾರಭಾರಿ, ತುಕಾರಂ ಹೊನ್ನುಂಚಿ, ಸೋಮಪ್ಪ ಚಿಕೇನಕೊಪ್ಪ, ಕಳಕೇಶ್ ನಾಯ್ಕ್, ಮಹಿಳಾ ಮುಖಂಡರಾದ ದೇವವ್ವ ಕಟ್ಟಿಮನಿ, ಶಿವವ್ವ ಭಾನಾಪುರ, ಲಕ್ಷ್ಮವ್ವ ಬಳಗೇರಿ,ಸೋನವ್ವ ಚಿಕೆನಕೊಪ್ಪ, ಹಾಗೂ ಶ್ರೀಕಾಂತ್ ಕಟ್ಟಿಮನಿ, ರಾಘವೇಂದ್ರ ಬಳಗೇರಿ, ಪ್ರಕಾಶ್ ಬಳಗೇರಿ , ಹೋಬಣ್ಣ ಚವ್ಹಾಣ, ಬಸುವರೆಡ್ಡೆಪ್ಪ ಬಳಗೇರಿ,ಹನುಮಂತಪ್ಪ ಚವ್ಹಾಣ, ಕಲ್ಲಪ್ಪ ಕಟ್ಟಿಮನಿ, ತಿರುಪತಿ ಕಟ್ಟಿಮನಿ, ಕುಮಾರ್ ಬಳಗೇರಿ ಇನ್ನು ಸಮಾಜ ಮುಖಂಡರು ಹಾಗೂ ಕೊಲಂಭೋ ಸಮಾಜದ ಮುಖಂಡರು ಭಾಗವಹಿಸಿದ್ದರು.

# ರಾಜ್ಯದಲ್ಲಿ ಮಾದರಿ ನಗರವಾಗಿ ವಿಜಯಪುರ ಅಭಿವೃದ್ಧಿ: ರಾಮನಗೌಡ



ಮಲ್ಲಮ್ಮ ನುಡಿ ವಾರ್ತೆ

ವಿಜಯಪುರ,ಸೆ.13:ನಗರ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರು, ಲೋಕೋಪಯೋಗಿ ಇಲಾಖೆಯಿಂದ ಮಂಜೂರಿಸಿರುವ ರೂ.1.30 ಕೋಟಿ ಅನುದಾನದಲ್ಲಿ ನಗರದ ವಾರ್ಡ್ ನಂ.35 ರಲ್ಲಿ ಬರುವ ಮಹಾತ್ಮಾ ಗಾಂಧಿ ಕಾಲೊನಿಯ ಮುಖ್ಯ ರಸ್ತೆ ಹಾಗೂ ಆಂತರಿಕ ರಸ್ತೆ ಅಭಿವೃದ್ಧಿ ಪಡಿಸುವ ಕಾಮಗಾರಿಗೆ ಗುರುವಾರ ಭೂಮಿಪೂಜೆ ನೆರವೇರಿಸಲಾಯಿತು.

ನಗರದ ಮಹಾತ್ಮ ಗಾಂಧಿ ಕಾಲೊನಿಯ ಸಾಯಿಬಾಬಾ ದೇವಸ್ಥಾನ ಹತ್ತಿರ ನಡೆದ ಭೂಮಿಪೂಜಾ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿರ್ದೇಶಕ ರಾಮನಗೌಡ ಪಾಟೀಲ ಯತ್ನಾಳ ಅವರು, ನಗರದಲ್ಲಿ ಗುಣಮಟ್ಟದ ರಸ್ತೆಗಳು, ಚರಂಡಿಗಳ ನಿರ್ಮಾಣ, ಕಸ ವಿಲೇವಾರಿ, ಸಮುದಾಯ ಭವನಗಳು, ಅಂಗನವಾಡಿಗಳು, ಶಾಲಾ ಕೊಠಡಿಗಳ ನಿರ್ಮಾಣ, ಬೀದಿ ದೀಪಗಳ ಅಳವಡಿಕೆ ಹೀಗೆ ಸಾಕಷ್ಟು ಅಭಿವೃದ್ಧಿ ಕಾರ್ಯಗಳಾಗಿವೆ. ಉಳಿದಿರುವ ಸಣ್ಣಪುಟ್ಟ ಕಾಮಗಾರಿಗಳಿಗೂ ಕೂಡ ಶಾಸಕರು ಅನುದಾನ ತಂದು ಕಾಮಗಾರಿಗಳನ್ನು ಕೈಗೊಳ್ಳುತ್ತಿದ್ದಾರೆ. ರಾಜ್ಯದಲ್ಲಿ ಮಾದರಿ ನಗರವಾಗಿ ವಿಜಯಪುರ ಅಭಿವೃದ್ಧಿಗೊಂಡಿದೆ ಎಂದು ತಿಳಿಸಿದರು.

ಮಹಾನಗರ ಪಾಲಿಕೆ ಮೇಯರ್ ಎಂ.ಎಸ್. ಕರಡಿ, ಸದಸ್ಯ ರಾಜಶೇಖರ ಕುರಿಯವರ, ಮುಖಂಡರಾದ ಬಸವರಾಜ ಮಧಬಾವಿ, ಗೋಪಾಲ ಮಲಘಾಣ, ಆರ್.ಎಂ. ನಾಗಾವಿ, ಮಹೇಶ ಗುಡ್ಯಾಳ, ಸಾಗರ ಪತಂಗೆ, ಛಾಯಾ ಮಸಿ, ಆರ್.ಡಿ. ಸಾರವಾಡ, ಉಮಾ ಹೂಲಿ, ಸತೀಶ ಬಿರಾದಾರ, ಪ್ರಶಾಂತ ಕಾಪಾಳೆ ಮತ್ತಿತರರು ಉಪಸ್ಥಿತರಿದ್ದರು.

# ಕನಿಷ್ಠ ಬೆಲೆಗಿಂತ ಕಡಿಮೆ ನೀಡಿದರೆ ಅಪರಾಧ: ಎಚ್.ಕೆ ಪಾಟೀಲ



ಮಲ್ಲಮ್ಮ ನುಡಿ ವಾರ್ತೆ

ಮೈಸೂರು: ಸೆ.13:– ರೈತರು ಬೆಳೆದ ಪದಾರ್ಥಗಳಿಗೆ ಕನಿಷ್ಠ ಮಾರುಕಟ್ಟೆ ಬೆಲೆಗಿಂತ ಕಡಿಮೆ ದರದಲ್ಲಿ ಬೆಲೆಯನ್ನು ನಿಗದಿ ಮಾಡಲು ಮುಂದಾಗುವ ವರ್ತಕರ ಕ್ರಮವನ್ನು ಅಪರಾಧ ಎಂದು ಹೇಳುವಂತಹ ಕಾನೂನುಗಳನ್ನು ರಚನೆ ಮಾಡುವ ಅವಶ್ಯಕತೆ ಇದೆ ಎಂದು ಕಾನೂನು ಸಚಿವ ಎಚ್. ಕೆ ಪಾಟೀಲ ಅಭಿಪ್ರಾಯಪಟ್ಟರು.

ನಗರದ ವಿದ್ಯಾವಿಕಾಸ ಕಾನೂನು ಅಧ್ಯಯನ ಸಂಸ್ಥೆ ವತಿಯಿಂದ ಶುಕ್ರವಾರ ಆಯೋಜಿಸಿದ್ದ ಕೃಷಿ ಉತ್ಪಾದನೆ ಮಾರುಕಟ್ಟೆಯಲ್ಲಿ ಕಾನೂನು ಕುರಿತು ಏರ್ಪಡಿಸಿದ್ದ ವಿಚಾರ ಸಂಕಿರಣ ಉದ್ಘಾಟಿಸಿ ಮಾತನಾಡಿದ ಅವರು, ಶ್ರೀಮಂತ ವರ್ಗದವರು, ಹಣ ಉಳ್ಳವರು ಮಾರುಕಟ್ಟೆಯಲ್ಲಿ ಖರೀದಿ ಮಾಡುವ ಪದಾರ್ಥಗಳ ಗರಿಷ್ಠ ಮಾರಾಟ ದರಕ್ಕಿಂತ ಒಂದೆರೆಡು ರೂಪಾಯಿ ಹೆಚ್ಚಿಗೆ ತೆಗೆದುಕೊಂಡರೂ ಅದನ್ನು ಅಪರಾಧ ಎಂದು ಹೇಳಿ ಕ್ರಮ ತೆಗೆದುಕೊಳ್ಳುವ ವ್ಯವಸ್ಥೆ ನಮ್ಮಲ್ಲಿ ಇರುವಾಗ, ರೈತರು ಬೆಳೆದ ಉತ್ಪನ್ನಗಳ ವಿಚಾರದಲ್ಲೂ ಇಂತಹ ಕಾನೂನು ರಚನೆಯಾಗಬೇಕು ಎಂದು ಅವರು ಒತ್ತಿ ಹೇಳಿದರು. ರೈತರು ಬೆಳೆದ ಬೆಳೆಯನ್ನು ಖರೀದಿ ಮಾಡುವ ವರ್ತಕರು ಡಿಜಿಟಲ್ ವಿಧಾನದಲ್ಲಿ ರೈತನಿಗೆ ಹಣ ಪಾವತಿ ಮಾಡುವ ವ್ಯವಸ್ಥೆ ಜಾರಿಯಾಗಬೇಕು. ಇದರಿಂದ ವರ್ತಕರು ಕಪ್ಪು ಹಣ ಚಲಾವಣೆ ಮಾಡುವುದು ತಪ್ಪುತ್ತದೆ. ರೈತನಿಗೆ 1000 ರೂ ನೀಡಿ ವರ್ತಕರು ತಮ್ಮ ಬಿಲ್ ಬುಕ್‌ನಲ್ಲಿ ತಮಗೆ ಬೇಕಾದಷ್ಟು ಬೆಲೆಯನ್ನು ನಮೂದಿಸುವ ಅವಕಾಶಗಳೂ ಇರುತ್ತವೆ. ಹೀಗಾಗಿ ಡಿಜಿಟಲ್ ಪೇಮೆಂಟ್‌ಗೆ ಒತ್ತು ನೀಡಬೇಕು. ಆಗ ರೈತರಿಗೂ ತಮಗೆ ಎಷ್ಟು ಹಣ ದೊರೆಯಿತು ಎಂದು ತಿಳಿಯುತ್ತದೆ. ವರ್ತಕರಿಂದ ವಂಚನೆಗೆ ಒಳಗಾಗುವುದು ತಪ್ಪುತ್ತದೆ ಎಂದರು.

ರೈತ ಉತ್ಪಾದನಾ ಮಾರುಕಟ್ಟೆ ಎನ್ನುವುದು ಅತ್ಯಂತ ನಿರ್ಲಕ್ಷ್ಯಕ್ಕೆ ಒಳಗಾಗಿರುವ ಕ್ಷೇತ್ರವಾಗಿದೆ. ಆರ್ ಬಿ ಐ ಅಧ್ಯಯನದ ವರದಿಯ ಪ್ರಕಾರ ರೈತರು ಬೆಳೆದ ಬೆಳೆಯು ಕೊನೆಯ ಗ್ರಾಹಕನಿಗೆ ಮುಟ್ಟಿದಾಗ ಇರುವ ಬೆಲೆಗೂ ರೈತ ನೀಡಿದಾಗ ಬೆಲೆಗೂ ಅಜಗಜಾಂತರ ವ್ಯತ್ಯಾಸ ಇದೆ. ರೈತನಿಗೆ ಶೇ.33 ರಷ್ಟು ಮಾತ್ರ ಬೆಲೆ ಸಿಗುತ್ತಿದೆ. ಇನ್ನು ಮಿಕ್ಕದು ವರ್ತಕರು, ಮಾರಾಟಗಾರರ ಪಾಲಾಗುತ್ತಿದೆ. ಇನ್ನೂ ಕೊಳೆತು ಹೋಗುವ ತರಕಾರಿ, ಪದಾರ್ಥಗಳಿಗೆ ಇದಕ್ಕಿಂತಲೂ ಕಡಿಮೆ ಸಿಗುವ ಸಂಭವವೇ ಜಾಸ್ತಿ ಇರುತ್ತದೆ ಎಂದು ಅವರು ಕಳವಳ ವ್ಯಕ್ತಪಡಿಸಿದರು.

ಮಾನವ ಹಕ್ಕು ಆಗಬೇಕು: ರೈತರು ಬೆಳೆದ ಪದಾರ್ಥಗಳಿಗೆ ಸೂಕ್ತ ಬೆಲೆ ದೊರಕಬೇಕಾಗಿರುವುದು ಮಾನವ ಹಕ್ಕು ಆಗಬೇಕು. ವಿದೇಶದಲ್ಲಿ ಸಮರ್ಪಕ ರಸ್ತೆಗಳು, ಪ್ರವಾಸೋದ್ಯಮ, ವೀಸಾ ಕೂಡ ಮಾನವ ಹಕ್ಕಿನ ವ್ಯಾಪ್ತಿಗೆ ಬರುತ್ತದೆ. ಅಂತಹದರಲ್ಲಿ ನಮ್ಮ ದೇಶದಲ್ಲಿ ರೈತ ಬೆಳೆದ ಬೆಳೆಗೆ ಬೆಲೆ ಬರಲಿಲ್ಲ ಎಂದರೆ ಅದು ಹಕ್ಕಿಗೆ ಚ್ಯುತಿ ತಂದಂತೆ ಎಂದರು.

ನಮ್ಮ ರೈತ ಮಾರುಕಟ್ಟೆ ಕಾನೂನುಗಳು ಸಮಸ್ಯೆಯ ಬೇರುಗಳನ್ನು ಸ್ಪರ್ಶಿಸುವಂತೆ ಇಲ್ಲ. ಶ್ರೀಮಂತರನ್ನು ರಕ್ಷಿಸುತ್ತವೆ. ದೇಶದ ಆಸ್ತಿಯನ್ನು ರಕ್ಷಿಸುವ ರೈತನಿಗೆ ಅನುಕೂಲವಾಗುವಂತೆ ರೂಪಿತವಾಗಿಲ್ಲ. ವಿರುದ್ಧ ದಿಕ್ಕಿನಲ್ಲಿ ಸಾಗುತ್ತಾ ವ್ಯಾಪಾರಸ್ಥರಿಗೆ ಬೇಕಾದಂತೆ ಇವೆ ಎಂದರು. ಎಪಿಎಂಸಿಯಲ್ಲಿ ಸರ್ಕಾರ ಸ್ವಲ್ಪ ನಿಯಂತ್ರಣ ಇಟ್ಟುಕೊಂಡು ರೈತರಿಗೆ ವರ್ತಕರಿಂದ ಸಕಾಲದಲ್ಲಿ ಹಣ ಪಾವತಿ ಮಾಡಿಸಲಾಗುತ್ತಿತ್ತು. ಆದರೆ, ಕೇಂದ್ರ ಸರ್ಕಾರ ಜಾರಿಗೆ ತರಲು ಉದ್ದೇಶಿಸಿದ್ದ ಮೂರು ಕಾಯ್ದೆಗಳು ಮಾರುಕಟ್ಟೆ ವ್ಯವಸ್ಥೆಯನ್ನು ನೆಲಸಮ ಮಾಡಲು ಹೊರಟ್ಟಿತ್ತು. ದೊಡ್ಡ ಹೋರಾಟಗಳು ನಡೆದ ಮೇಲೆ ಸರ್ಕಾರ ಬಗ್ಗಿತು ಎಂದರು.

ಮಸೂದೆ ರೂಪಿಸಿ: ಕಿಲ್ಪರ್ ಸಂಸ್ಥೆಯ ವತಿಯಿಂದ ಈಗಾಗಲೇ ನೂರು ಮಸೂದೆಯನ್ನು ತಯಾರಿಸಲಾಗುತ್ತಿದೆ. ಪ್ರಸ್ತುತ ನಡೆದಿರುವ ವಿಚಾರ ಸಂಕಿರಣದ ವಿಷಯವಾಗಿಯೂ ಕೂಡ ಮಸೂದೆಯನ್ನು ತಯಾರು ಮಾಡಿದರೆ, ಅಗತ್ಯ ಮುಂದಿನ ಕ್ರಮಗಳನ್ನು ತಗೆದುಕೊಳ್ಳಬಹುದು ಎಂದರು. ರೈತರೇ ಬೆಲೆ ನಿರ್ಧರಿಸಬೇಕು: ರೈತರು ತಾವು ಬೆಳೆದ ಬೆಳೆಗೆ ತಾವೇ ದರವನ್ನು ನಿರ್ಧರಿಸುವ ದಿನ ಬಂದಾಗ ರೈತರ ಕಲ್ಯಾಣವಾಗುತ್ತದೆ. ಬ್ರ್ಯಾಂಡೆಡ್ ಶೂ ಮಾರಾಟ ಮಾಡುವವರೂ ಬೆಲೆಯನ್ನು ತಾವೇ ನಿರ್ಧಾರ ಮಾಡಿರುತ್ತಾರೆ. ಬೊಂಬೆ ಮಾಡುವವರು ಕೂಡ ದರ ನಿಗದಿ ಮಾಡುತ್ತಾರೆ. ಹತ್ತು ರೂಪಾಯಿ ಪಾನ್ ಮಾರಾಟ ಮಾಡುವವರು ಬೆಲೆಯನ್ನು ಅವರೇ ನಿಗದಿ ಮಾಡುತ್ತಾರೆ. ಅಂತಹದರಲ್ಲಿ 500 ಚೀಲ ಜೋಳ ಬೆಳೆದ ರೈತ ತನ್ನ ಉತ್ಪನ್ನಕ್ಕೆ ಬೆಲೆ ನಿಗದಿ ಮಾಡುವ ಸಾಮರ್ಥ್ಯ, ಶಕ್ತಿ, ಅಧಿಕಾರ ಇಲ್ಲವೆಂದರೆ ಹೇಗೆ? ಆದ್ದರಿಂದ ರೈತರೇ ಬೆಲೆ ನಿರ್ಧಾರ ಮಾಡುವ ವ್ಯವಸ್ಥೆ ಸೃಷ್ಟಿಯಾಗಬೇಕು. ಇದರ ವಿಚಾರವಾಗಿ ಕಾನೂನು ನಿರ್ಮಾಣ ಆಗಬೇಕು ಎಂದು ಎಚ್.ಕೆ.ಪಾಟೀಲ ತಿಳಿಸಿದರು.

ವಿವಿಐಎಸ್‌ಎಸ್ ಕಾನೂನು ಶಿಕ್ಷಣ ಸಲಹೆಗಾರ ಪ್ರೋ.ಈಶ್ವರ್ ಭಟ್ ದಿಕ್ಸೂಚಿ ಭಾಷಣ ಮಾಡಿದರು. ವಿವಿಇಟಿ ಕಾರ್ಯದರ್ಶಿ ವಿ.ಕವೀಶ್ ಗೌಡ ಅಧ್ಯಕ್ಷತೆ ವಹಿಸಿದ್ದರು. ಕಿಲ್ಪರ್ ನಿರ್ದೇಶಕ ಡಾ.ಸಿ.ಎಸ್.ಪಾಟೀಲ್, ಸಂಶೋಧನಾ ಮುಖ್ಯಸ್ಥ ಡಾ.ರೇವಯ್ಯ ಒಡೆಯರ್, ವಿವಿಐಎಲ್‌ಎಸ್ ನಿರ್ದೇಶಕ ಡಾ.ಎಸ್.ನಟರಾಜು ವೇದಿಕೆಯಲ್ಲಿ ಇದ್ದರು.

# ರಾಮದುರ್ಗದಲ್ಲಿ ನೂತನ ಶಾಖೆ ಬೀಳೂರು ಗುರುಬಸವ ಪತ್ತಿನ ಸಂಘಕ್ಕೆ 1.92ಕೋಟಿ ರೂ.ಲಾಭ–ಚರಂತಿಮಠ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಸೆ.13–25ವಸಂತಗಳನ್ನು ಕಂಡಿರುವ ನಗರದ ಬೀಳೂರು ಗುರುಬಸವ ಪತ್ತಿನ ಸಹಕಾರ ಸಂಘ ಕಳೆದ ಮಾರ್ಚ ಅಂತ್ಯಕ್ಕೆ 1.92 ಕೋಟಿ ರೂ.ಗಳ ಲಾಭ ಗಳಿಸಿದ್ದು, ಸದಸ್ಯರಿಗೆ ಶೇ.15 ರಷ್ಟು ಲಾಭಾಂಶ ಹಂಚಿಕೆ ಮಾಡಲು ನಿರ್ಣಯಿಸಿದೆ ಎಂದು ಸಂಘದ ಅಧ್ಯಕ್ಷ ವೀರಣ್ಣ ಚರಂತಿಮಠ ಹೇಳಿದರು.

ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಸಂಘದ ಪ್ರಗತಿಯನ್ನು ವಿವರಿಸಿದ ಅವರು, ಸಂಘ ಈಗಾಗಲೇ 6 ಶಾಖೆಗಳನ್ನು ಹೊಂದಿದ್ದು ಬರುವ ದಿನಗಳಲ್ಲಿ ಬೆಳಗಾವಿ ಜಿಲ್ಲೆ ರಾಮದುರ್ಗ ಪಟ್ಟಣದಲ್ಲಿ ಹೊಸ ಶಾಖೆ ಪ್ರಾರಂಭಿಸಲಾಗುವುದು ಎಂದರು.

2001ರಲ್ಲಿ ಪ್ರಾರಂಭವಾದಾಗಿನಿಂದ ಸಹಕಾರಿ ಸಂಘ ಪ್ರಗತಿಯನ್ನು ಸಾಧಿಸುತ್ತಲೇ ಸಾಗಿದ್ದು, 1 ಸಾವಿರ ಸದಸ್ಯರೊಂದಿಗೆ ಆರಂಭಗೊಂಡು ಪ್ರಸ್ತುತ 7177 ಸದಸ್ಯರನ್ನು, 3.74 ಕೋಟಿ ರೂ.ಗಳ ಶೇರು ಬಂಡವಾಳ ಹೊಂದಿದೆ. 29.93 ಕೋಟಿ ರೂ.ಗಳ ನಿಧಿಗಳು, 288.29 ಕೋಟಿ ರೂ.ಗಳ ಠೇವು ಸಂಗ್ರಹಿಸಿದೆ ಎಂದು ಚರಂತಿಮಠ ತಿಳಿಸಿದರು.

192.78 ಕೋಟಿ ರೂ.ಗಳ ಗುಂತಾವಣೆಗಳು, 321.98 ಕೋಟಿ ರೂ.ಗಳ ದುಡಿಯುವ ಬಂಡವಾಳ ಹೊಂದಿರುವ ಪತ್ತಿನ ಸಹಕಾರ ಸಂಘ, ಕಳೆದ ಮಾರ್ಚ ಅಂತ್ಯಕ್ಕೆ ಇರುವಂತೆ 125.74 ಕೋಟಿ ರೂ.ಗಳ ಸಾಲ ನೀಡಿದೆ ಎಂದು ಹೇಳಿದ ಅವರು, ಎನ್.ಪಿ.ಎ ಸದಾ ನಿಯಂತ್ರಣದಲ್ಲಿದೆ ಎಂದು ಹೇಳಿದರು.

ಕೋವಿಡ್ ಸಮಯದಲ್ಲೂ ಸಂಘವು ಸದಸ್ಯರಿಗೆ ಶೇ.15 ರಷ್ಟು ಲಾಭಾಂಶ ಹಂಚಿಕೆ ಮಾಡಿದ್ದು, ಈ ವರ್ಷವೂ ಶೇ.15 ರಷ್ಟು ಡಿವ್ಹಿಡೆಂಡ್ ಹಂಚಲು ಆಡಳಿತ ಮಂಡಳಿ ತೀರ್ಮಾನಿಸಿದೆ ಎಂದ ಚರಂತಿಮಠ, ಎಲ್ಲಾ ಶಾಖೆಗಳು ಲಾಭದಲ್ಲಿದ್ದು ಪ್ರಗತಿಯನ್ನು ಸಾಧಿಸಿವೆ. ಸಂಘದ ಗಮನಾರ್ಹ ಪ್ರಗತಿಗೆ ಆಡಳಿತ ಮಂಡಳಿ ಸದಸ್ಯರ ಸಹಕಾರ, ಸಿಬ್ಬಂದಿಗಳ ಪ್ರಾಮಾಣಿಕ ದುಡಿಮೆ ಕಾರಣವಾಗಿದೆ ಎಂದು ತಿಳಿಸಿದರು.

ನಗರ ಹಾಗೂ ಗ್ರಾಮೀಣ ಭಾಗದ ಸದಸ್ಯರಿಗೆ ಆಸ್ತಿ ಭದ್ರತೆ, ಸಂಬಳ ಭದ್ರತೆ ಸಾಲ, ಜಾಮೀನು ಸಾಲ. ವಾಹನ ಸಾಲ, ಮನೆ ಕಟ್ಟುವುದಕ್ಕೆ ಸಾಲ ಹೀಗೆ ವಿವಿಧ ರೀತಿಯ ಸಾಲಗಳನ್ನು ಅವರ ಅವಶ್ಯಕತೆಗನುಗುಣವಾಗಿ ವಿತರಣೆ ಮಾಡಿದೆ. ಸಾಲ ಪಡೆದವರೂ ಸಹ ಸರಿಯಾದ ಸಮಯಕ್ಕೆ ಮರು ಪಾವತಿ ಮಾಡುತ್ತಿದ್ದಾರೆ ಎಂದು ವೀರಣ್ಣ ಚರಂತಿಮಠ ಹೇಳಿದರು.

ಸಂಘದ ಉಪಾಧ್ಯಕ್ಷ ಮುರಿಗೆಪ್ಪ ನಾರಾ, ನಿರ್ದೇಶಕರುಗಳಾದ ಗುರುಬಸವ ಸೂಳಿಭಾವಿ, ಲಕ್ಷ್ಮೀನಾರಾಯಣ ಕಾಸಟ, ವಿಜಯಕುಮಾರ ಅಂಗಡಿ, ವೀರಣ್ಣ ಹಲಕುರ್ಕಿ, ಅಶೋಕ ಸಜ್ಜನ, ಪ್ರಕಾಶ ರೇವಡಿಗಾರ, ಮಲ್ಲಿಕಾರ್ಜುನ ಸಾಸನೂರ, ಪ್ರಭಯ್ಯ ಸರಗಣಾಚಾರಿ, ರುದ್ರಪ್ಪ ಅಕ್ಕಿಮರಡಿ ಮತ್ತಿತರರು ಇದ್ದರು.

# ನ. 30 ರಂದು ಬೀದರನಲ್ಲಿ ಸಂಭಾಜಿ ಬ್ರಿಗೇಡ್‌ನ 16ನೇ ವಾರ್ಷಿಕೋತ್ಸವ: ಮನೋಜ ಆಖರೆ




ಮಲ್ಲಮ್ಮ ನುಡಿ ವಾರ್ತೆ

ಬೀದರ:ಸೆ.13: ಈ ವರ್ಷದ ನವೆಂಬರ್ 30 ರಂದು ಬೀದರನಲ್ಲಿ ಸಂಭಾಜಿ ಬ್ರಿಗೇಡ್ ಸಂಘಟನೆ ವತಿಯಿಂದ ರಾಷ್ಟ್ರಮಟ್ಟದ 16ನೇ ವರ್ಷಾಚರಣೆ ಕಾರ್ಯಕ್ರಮ ಆಯೋಜಿಸಲಾಗುತ್ತಿದೆ. ಇದನ್ನು ರಾಷ್ಟ್ರೀಯ ಕಾರ್ಯಕಾರಿ ಮಂಡಳಿ ತೀರ್ಮಾನಿಸಿದೆ ಎಂದು ಬ್ರಿಗೇಡ್‌ನ ರಾಷ್ಟ್ರೀಯ ಅಧ್ಯಕ್ಷ ಮನೋಜ ಆಖರೆ ತಿಳಿಸಿದರು.

ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ಶುಕ್ರವಾರ ಕರೆದ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು ಸಂಭಾಜಿ ಬ್ರಿಗೇಡ್ ಸಂಘಟನೆಯು ಶಾಹು ಮಹಾರಾಜ್, ಛತ್ರಪತಿ ಶಿವಾಜಿ ಮಹಾರಾಜ, ಮಹಾತ್ಮ ಜ್ಯೋತಿಬಾ ಫುಲೆ, ಮಹಾತ್ಮ ಬಸವೇಶ್ವರ, ಡಾ.ಬಿ.ಆರ್.ಅಂಬೇಡ್ಕರ್, ಅಣ್ಣಾಭಾವು ಸಾಠೆ, ಮಹಾತ್ಮ ಚಕ್ರಧರ ಸ್ವಾಮಿ, ಸಂತ ತುಕಾರಾಮ, ಸಂತ ನಾಮದೇವ ಮಹಾರಾಜ್ ಇವರ ವಿಚಾರಧಾರೆಗಳನ್ನಿಟ್ಟುಕೊಂಡು ಮಹಾರಾಷ್ಟ್ರ ಸೇರಿದಂತೆ ಕರ್ನಾಟಕ, ಆಂಧ್ರಪ್ರದೇಶ, ಮಧ್ಯಪ್ರದೇಶ, ಹರಿಯಾಣ ಹಾಗೂ ಇತರೆ ರಾಜ್ಯಗಳಲ್ಲಿ ರೈತರು, ಯುವಜನರು, ಮಹಿಳೆಯರಿಗಾಗಿ ಬ್ರಿಗೇಡ್ ಕಾರ್ಯತತ್ಪರವಾಗಿದೆ. ಶಿಕ್ಷಣ, ಆರೋಗ್ಯ, ಆರ್ಥಿಕ, ರಾಜಕೀಯ ಮತ್ತು ಧಾರ್ಮಿಕವಾಗಿ ಈ ಪಂಚ ಕ್ಷೇತ್ರಗಳಲ್ಲಿ ಕಾರ್ಯನಿರ್ವಹಿಸುತ್ತಿದೆ. ಈ ವರ್ಷ ಆಚರಿಸುವ ಕಾರ್ಯಕ್ರಮದ ಮುಖೇನ ಕರ್ನಾಟಕ ರಾಜ್ಯದಲ್ಲಿ ಮರಾಠಾ ಸಮಾಜವನ್ನು ಮಹಾರಾಷ್ಟ್ರ ರಾಜ್ಯದ ಓಬಿಸಿ ಮಾದರಿಯಲ್ಲಿ ಇಲ್ಲಿಯೂ ಸಹ 2ಎ ಪ್ರವರ್ಗಕ್ಕೆ ಸೇರ್ಪಡೆ ಮಾಡಬೇಕು. ಈಗಾಗಲೇ ಬೆಂಗಳೂರಿನ ಶಿವಾಜಿ ನಗರ ಮೆಟ್ರೋ ಸ್ಟೇಷನ್ ಹೆಸರು ಬದಲಿಸಲು ಹೊರಟಿರುವ ರಾಜ್ಯ ಸರ್ಕಾರವು ಅದನ್ನು ಕೈಬಿಟ್ಟು ಛತ್ರಪತಿ ಶಿವಾಜಿ ಮಹಾರಾಜ ಹೆಸರನ್ನೇ ಮುಂದುವರೆಸಬೇಕು. ದಾವಣಗೆರೆ ಜಿಲ್ಲೆಯ ಹುದಗಿರಿಯಲ್ಲಿರುವ ಛತ್ರಪತಿ ಶಿವಾಜಿ ಮಹಾರಾಜರ ತಂದೆ ಶಹಾಜಿ ರಾಜೆ ಮಹಾರಾಜರ ಸಮಾಧಿಯನ್ನು ಸ್ಮಾರಕವನ್ನಾಗಿ ಪರಿವರ್ತಿಸಬೇಕು. ಜೊತೆಗೆ ತಾಯಿ ಜೀಜಾಬಾಯಿ, ಶಿವಾಜಿ ಹಾಗೂ ಶಹಾಜಿ ರಾಜೆ ಅವರ ಹೆಸರಿನಲ್ಲಿ ಮ್ಯೂಜಿಯಂ ಸ್ಥಾಪಿಸಬೇಕು. ಈ ವರ್ಷ ರಾಜ್ಯದಲ್ಲಿ ಸಂಪೂರ್ಣ ಬೆಳೆ ನಾಶವಾಗಿದ್ದು ಪ್ರತೀ ಹೆಕ್ಟೆರ್‌ಗೆ ತಲಾ ರೂ. 50 ಸಾವಿರ ಪರಿಹಾರ ನೀಡಬೇಕು. ಈ ಪ್ರಮುಖ ಬೇಡಿಕೆಗಳನ್ನು ಸರ್ಕಾರ ಈಡೇರಿಸಬೇಕೆಂದು ಅಂದಿನ ಕಾರ್ಯಕ್ರಮದಲ್ಲಿ ನಿರ್ಣಯ ಕೈಗೊಳ್ಳಲಾಗುವುದು ಎಂದರು.

ಪತ್ರಿಕಾಗೋಷ್ಠಿಯಲ್ಲಿ ಬ್ರಿಗೇಡ್ ಜಿಲ್ಲಾಧ್ಯಕ್ಷ ಸತೀಶ ವಾಸರೆ ಮಾತನಾಡಿದರು. ಗಜಾನಂದ ಭೋಯರ್, ಸಂಕೇತ ಪಾಟೀಲ, ಜೆಜೆರಾವ ಪಾಟೀಲ, ಸತೀಷ ಪಾಟೀಲ ಮಹಾಗಾಂವಕರ್, ಸಂಜೀವಕುಮಾರ ಪಾಟೀಲ, ದತ್ತಾ ಪಾಟೀಲ, ರಾಮ ರಾವಣಗಾವೆ, ಗೋವಿಂದ ಪಾಟೀಲ, ರತಿಕಾಂತ ಬಿರಾದಾರ, ದತ್ತಾತ್ರೇಯ ಪಾಟೀಲ, ಸಂತೋಷ ಪಾಟೀಲ, ಸಂತೋಷ ಬಿರಾದಾರ, ಅಂಕುಶ ಪಾಟೀಲ, ದತ್ತಾ ಚೌಪಡೆ, ಪ್ರಶಾಂತ ಬಿರಾದಾರ, ಜ್ಞಾನೇಶ್ವರ ಸಗರ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

# ರಾಷ್ಟ್ರೀಯ ಪೌಷ್ಟಿಕ ದಿನಾಚರಣೆ



ಮಲ್ಲಮ್ಮನುಡಿ ವಾರ್ತೆ ಹುಮನಾಬಾದ:ಇಂದು ತಾಲೂಕಾ ಪಂಚಾಯತ ಸಭಾಂಗಣದಲ್ಲಿ ಕಾನೂನು ಸೇವೆಗಳ ಪ್ರಾಧಿಕಾರ,ಸಿಡಿಪಿಓ, ಆರೋಗ್ಯ ಇಲಾಖೆ ಸಹಯೋಗದೊಂದಿಗೆ ರಾಷ್ಟ್ರೀಯ ಪೌಷ್ಟಿಕ ದಿನಾಚರಣೆಯನ್ನು ಗೌರವಾನ್ವಿತ ಹಿ.ಸಿ. ನ್ಯಾಯಧೀಶರು & ಜೆ.ಎಂ.ಎಫ್.ಸಿ. ಹುಮನಾಬಾದ ಶ್ರೀ ಪ್ರಶಾಂತ ಬಾದವಾಡಗಿ ರವರು ಉದ್ಘಾಟಿಸಿ ಮಾತನಾಡಿದರು. ಮುಖ್ಯ ಅಥಿತಿ ಭಾಷಣವನ್ನು ಗೌರವಾನ್ವಿತ ನ್ಯಾಯಧೀಶರಾದ ಶ್ರೀ ಸಣ್ಣಹನುಮಗೌಡ.ರವರು ಮಾಡಿದರು. ಅಧ್ಯಕ್ಷತೆ ಶ್ರೀ ಶಿವಪ್ರಸಾದ ಸಿ.ಡಿ.ಪಿ.ಓ. ರವರು ವಹಿಸಿದರು. ಮುಖ್ಯಸಂಪನ್ಮೂಲ ಅತಿಥಿಗಳಾಗಿ ಡಾ ನಾಗನಥ ಹುಲಸೂರೆ ಹಿರಿಯ ತಜ್ಞ ವೈದ್ಯರು ಮಾತನಾಡಿ ಮಾನ್ಯ ಪ್ರಧಾನಮಂತ್ರಿ

ಸನ್ಮಾನ್ಯ ನರೇಂದ್ರ ಮೋದಿಯವರ ಮಹತ್ವಾಕಾಂಕ್ಷೆಯ "ಸುಪೋಷಿತ ಭಾರತ" ಅನ್ವಯ ಆರು ವರ್ಷದೊಳಗಿನ ಕುಪೋಷಿತ ಮಕ್ಕಳು, ಗರ್ಬಿಣಿ ತಾಯಂದಿರು, ಹಾಲುಣಿಸುವ ತಾಯಂದಿರಿಗೆ ಪೌಷ್ಟಿಕಯುಕ್ತ ಆಹಾರ ನೀಡಬೇಕು ಬಾಲ್ಯವಿವಾಹ ನಿರ್ಮೂಲನೆ ಬಾಲಕಾರ್ಮಿಕ ನಿರ್ಮೂಲನೆ ಮತ್ತು ಪಿಸಿಪಿಎನಡಿ ಅನ್ವಯ ಗಂಡು ಹೆಣ್ಣು ಭೇದಭಾವ ಮಾಡಿದರೆ ಕಠಿಣ ಕಾನೂನು ಕ್ರಮ ಎದುರಿಸಬೇತಾಗುವುದು ಎಂದ ತಿಳಿಸಿದರು & ಶ್ರೀ ಮೌನದಾಸ ಕ್ಷೇಆಶಿಅ ಪೌಷ್ಟಿಕತೆ ಬಗ್ಗೆ ತಿಳಿಸಿ ಶಪಥವನ್ನು ಬೋಧಿಸಿದರು. ಇದೇ ಸಂದರ್ಭದಲ್ಲಿ ಅನ್ನಪ್ರಾಶನ ,ಅಕ್ಷರ ಕಲಿಕೆ, ಸೀಮಂತ ಕಾರ್ಯಕ್ರಮ ಮಾಡಲಾಯಿತು.

# ವೀರಶೈವ-ಲಿಂಗಾಯತ ಬೇರೆ ಬೇರೆ ಅಲ್ಲ: ಚರಂತಿಮಠ



ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ,ಸೆ.13-ವೀರಶೈವ-ಲಿಂಗಾಯತ ಎರಡೂ ಒಂದೇ ಆಗಿದ್ದು, ಯಾರೂ ಬೇರೆ ಬೇರೆ ಅಲ್ಲ. ಹಾಗೇ ಬೇರೆ ಬೇರೆ ಎನ್ನುವವರಿಗೆ ನಾವೇನು ಹೇಳಲಾಗದು ಎಂದು ಮಾಜಿ ಶಾಸಕ ವೀರಣ್ಣ ಚರಂತಿಮಠ ಹೇಳಿದರು. ನಗರದಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಈ ಬಗ್ಗೆ ಕೇಳಲಾದ ಪ್ರಶ್ನೆಗೆ ಉತ್ತರಿಸಿದ ಅವರು, ನಾವು ಎಲ್ಲರೂ ಒಂದೇ ಎನ್ನುವವರ ಪರವಾಗಿ ಇರುತ್ತೇವೆ. ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆಯ ಸಂದರ್ಭದಲ್ಲಿ ಧರ್ಮ ಹಿಂದೂ ಎಂದು, ಜಾತಿ ವೀರಶೈವ ಲಿಂಗಾಯತ ಎಂದು ಬರೆಸುವುದಾಗಿ ತಿಳಿಸಿದರು. ಕೆಲ ಸ್ವಾಮೀಜಿಗಳು ಲಿಂಗಾಯತ ಪ್ರತ್ಯೇಕ ಧರ್ಮ, ಸಮೀಕ್ಷೆಯಲ್ಲಿ ಬರೀ ಲಿಂಗಾಯತ ಎಂದು ಬರೆಯಿಸುವಂತೆ ಕರೆ ನೀಡಿದ್ದಾರಲ್ಲ ಎಂಬುದಕ್ಕೆ, ಅದು ಅವರಿಗೆ ಬಿಟ್ಟ ವಿಚಾರ. ವೀರಶೈವ ಪದಕ್ಕೆ ನೂರಾರು ವರ್ಷಗಳ ಇತಿಹಾಸವಿದೆ. ಈ ಬಗ್ಗೆ ಗದುಗಿನ ಮಠದಲ್ಲಿಯೇ ಹಿಂದೆ ವೀರಶೈವ ಅಧ್ಯಯನ ಸಂಸ್ಥೆ, ವೀರಶೈವ ಪ್ರಗತಿಶೀಲ ಸಂಘ ಹಾಗೂ ವೀರಶೈವ ಪುಣ್ಯವಂತರ ಸಾಹಿತ್ಯರತ್ನಮಾಲೆ ಇತ್ತು. ಹೊತ್ತು ಬಂದಾಗೊಂದು ಹೇಳುವವರಿಗೆ ಉತ್ತರ ಕೊಡುವುದು ಅಸಾಧ್ಯ ಎಂದರು.

ಸೆ.19 ರಂದು ವೀರಶೈವ ಲಿಂಗಾಯತ ಮಹಾಸಭಾದ ಸಭೆ ನಡೆಯಲಿದ್ದು, ಅಲ್ಲಿ ಗಣತಿ ಸಮಯದಲ್ಲಿ ಬರೆಯಿಸಬೇಕಾದ ವಿಷಯದ ಬಗ್ಗೆ ತೀರ್ಮಾನಿಸಲಾಗುವುದು ಎಂದ ಚರಂತಿಮಠ, ದೇಶವ್ಯಾಪ್ತಿಯಲ್ಲಿ ನಾವು ಹಿಂದುಗಳು. ಧರ್ಮದ ವ್ಯಾಪ್ತಿಯಲ್ಲಿ ವೀರಶೈವ ಲಿಂಗಾಯತರು ಎಂದು ಹೇಳಿದರು.

# ಸಭೆ ಮಾಡಿ ಕೈಬಿಡಬೇಡಿ-ಸಂತ್ರಸ್ತರಿಗೆ ಪರಿಹಾರ ಒದಗಿಸಿ:ಕಾಶಪ್ಪನವರ



ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ,ಸೆ.13-ಸಂತ್ರಸ್ತರ ಸಮಸ್ಯೆಗಳ ಕುರಿತು ಚರ್ಚಿಸುವ ನಿಟ್ಟಿನಲ್ಲಿ ಪುನರ್ವಸತಿ ಅಧಿಕಾರಿಗಳು ಕೇವಲ ಸಭೆ ನಡೆಸಿದರೆ ಸಾಲದು. ಅವುಗಳಿಗೆ ಪರಿಹಾರ ಕಲ್ಪಿಸುವ ಕೆಲಸ ಮಾಡಬೇಕೆಂದು ಹುನಗುಂದ ಶಾಸಕ ವಿಜಯಾನಂದ ಕಾಶಪ್ಪನವರ ಹೇಳಿದರು.

ಜಿಲ್ಲೆಯ ಹುನಗುಂದ ತಹಶೀಲ್ದಾರ ಕಚೇರಿಯ ಸಭಾಂಗಣದಲ್ಲಿ ನಡೆದ ಪ್ರವಾಹ ಪೀಡಿತ ಗ್ರಾಮಗಳ ಸ್ಥಳಾಂತರ, ಹಕ್ಕುಪತ್ರ ವಿತರಣೆ, ಮೂಲಭೂತ ಸೌಕರ್ಯಗಳ ಪರಿಶೀಲನೆ ಕುರಿತ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ನಾರಾಯಣಪುರ ಜಲಾಶಯದ ಹಿನ್ನೀರಿನಿಂದ ಬಾಧಿತವಾದ ಪ್ರದೇಶಗಳಲ್ಲಿ ಸುಸಜ್ಜಿತ ರಸ್ತೆ, ಚರಂಡಿ ಸೇರಿದಂತೆ ಇನ್ನಿತರ ಮೂಲಭೂತ ಸೌಕರ್ಯಗಳು ಇಲ್ಲದಂತಾಗಿವೆ. ಈ ಕೇಂದ್ರಗಳಲ್ಲಿ ದೇವಸ್ಥಾನ, ಸಮುದಾಯ ಭವನ ನಿರ್ಮಾಣ ಮತ್ತು ಸ್ಮಶಾನ ಜಾಗವನ್ನು ನಿರ್ಧಿಷ್ಟಪಡಿಸಿಲ್ಲ. ಜಾಗ ಹಸ್ತಾಂತರ ಮಾಡಿದರೆ ಪಂಚಾಯತಿಯಿಂದ ಕೆಲಸ ಮಾಡಿಸಿಕೊಳ್ಳುತ್ತೇವೆ ಎಂದು ಹೇಳಿದರು.

ಭೂಮಿ ಕಳೆದುಕೊಂಡ ರೈತರಿಗೆ ಅನ್ಯಾಯವಾಗಿದೆ. ಕೆಲವು ಗ್ರಾಮಗಳಲ್ಲಿ ಸಂತ್ರಸ್ತರಿಗೆ ಇನ್ನೂ ಹಕ್ಕುಪತ್ರ ಕೊಡಲು ಸಾಧ್ಯವಾಗಿಲ್ಲ. ಹಕ್ಕುಪತ್ರ ವಿತರಣೆಯಲ್ಲಿ ಸಣ್ಣ ಪುಟ್ಟ ಸಮಸ್ಯೆಗಳಿದ್ದು, ಪುನರ್ವಸತಿ ಕೇಂದ್ರಗಳಿಗೆ ಅಧಿಕಾರಿಗಳು ಭೇಟಿ ನೀಡಿ ಗ್ರಾಮ ಪಂಚಾಯತಿಯ 9 ನಂಬರ್ ಪುಸ್ತಕ (ಅಸ್ತಿ ವಿವರ) ದಲ್ಲಿನ ಆಧಾರದ ಮೇಲೆ ಠರಾವು ಮಾಡಿ ಹಕ್ಕುಪತ್ರ ವಿತರಿಸಬೇಕೆಂದು ಕಾಶಪ್ಪನವರ ಹೇಳಿದರು.

ನಾರಾಯಣಪುರ ಹಿನ್ನೀರಿನಿಂದ ಬಾಧಿತ 13 ಗ್ರಾಮಗಳಲ್ಲಿ 10 ಗ್ರಾಮಗಳ ಸಂತ್ರಸ್ತರಿಗೆ ಹಕ್ಕು ಪತ್ರ ವಿತರಿಸಲಾಗಿದೆ. ಅಡಿಹಾಳ, ಕೆಂಗಲ್ ಮತ್ತು ಕಡಪಟ್ಟಿ ಗ್ರಾಮಗಳಿಗೆ ಹಕ್ಕು ಪತ್ರ ಕೊಟ್ಟಿಲ್ಲ. ಎಮ್ಮೆಟ್ಟಿಯಲ್ಲಿ ಪುನರ್ವಸತಿ ಕೇಂದ್ರದ ಜಾಗಕ್ಕೆ ಸಂಬಂಧಿಸಿದಂತೆ ನ್ಯಾಯಾಲಯದಲ್ಲಿ ಪ್ರಕರಣವಿದೆ ಎಂದು ಅಧಿಕಾರಿಗಳು ಸಭೆಗೆ ಮಾಹಿತಿ ನೀಡಿದರು.

ನಮ್ಮ ಬದುಕು ಮುಳುಗಿ ಹೋಗುತ್ತಿದೆ. ವಾಸಿಸುವ ಶೆಡ್ ಗಳು ಶಿಥಿಲಗೊಂಡಿವೆ. ಪುನರ್ವಸತಿ ಕೇಂದ್ರಕ್ಕೆ ಬಂದು 20 ವರ್ಷ ಕಳೆದಿವೆ. ಸತ್ತರೆ ಸ್ಮಶಾನಕ್ಕೆ ಜಾಗವಿಲ್ಲ. ಅಂತ್ಯಕ್ರಿಯೆಗೆ 4-5 ಕಿ.ಮೀ ದೂರ ಹೋಗಬೇಕಾಗಿದೆ ಎಂದು ಕೂಡಲಸಂಗಮದ ಸುಲೇಮಾನ್ ಮುಲ್ಲಾ ನೋವು ತೋಡಿ-ಕೊಂಡರು. ಸಂತ್ರಸ್ತರಿಗೆ ಸೂಕ್ತ ವ್ಯವಸ್ಥೆ ಮಾಡಬೇಕು ಎಂದು ಇದ್ದಲಗಿಯ ಮಹಾಂತೇಶ ನಾಡಗೌಡ ಶಾಸಕರು ಮತ್ತು ಅಧಿಕಾರಿಗಳಲ್ಲಿ ಮನವಿ ಮಾಡಿಕೊಂಡರು. ಜಿಲ್ಲಾಧಿಕಾರಿ ಸಂಗಪ್ಪ ಮಾತನಾಡಿ, ಕೆಲಸ ಕಾರ್ಯಗಳಿಗೆ ಸಂತ್ರಸ್ತರನ್ನು ಅಲೆದಾಡಿಸಬೇಡಿ. ಅವರ ಬಳಿ ಹೋಗಿ ಕೆಲಸ ಮಾಡಿಕೊಡಿ ಎಂದು ಸೂಚಿಸಿದರು. ಪುನರ್ವಸತಿ ಮತ್ತು ಪುನರ್ ನಿರ್ಮಾಣದ ವಿಶೇಷ ಜಿಲ್ಲಾಧಿಕಾರಿ ಮಾರುತಿ ಬ್ಯಾಕೋಡ, ಪುನರ್ವಸತಿ ಮತ್ತು ಪುನರ್ ನಿರ್ಮಾಣದ ಉಪ ಮಹಾ ವ್ಯವಸ್ಥಾಪಕ, ಮಹಾದೇವ ಮುರುಗಿ, ಉಪವಿಭಾಗಾಧಿಕಾರಿ ಸಂತೋಷ ಜಗಲಾಸರ, ಪುನರ್ವಸತಿ ಮತ್ತು ಪುನರ್ ನಿರ್ಮಾಣದ ಸೂಪರಿಡೆಂಟ್ ಎಂಜನಿಯರ್ ಶ್ರೀಮತಿ ಸುಜಾತ, ಪುನರ್ವಸತಿ ಕೇಂದ್ರದ ಅಧಿಕಾರಿ ಎಂ.ಬಿ.ನಾಗಠಾಣ, ಆಲಮಟ್ಟಿ, ನಾರಾಯಣಪುರ ಇಲಾಖೆ ಅಧಿಕಾರಿಗಳು ಇತರರು ಇದ್ದರು.

**ಸಿಬ್ಬಂದಿಗೆ ನೀಡಲು ಸೂಚನೆ-**

ಹುನಗುಂದ ಭೂ ದಾಖಲೆಗಳ ಕೇಂದದ್ರದಲ್ಲಿ ಸಾರ್ವಜನಿಕರ ಕೆಲಸಕ್ಕೆ ಬಂದಾಗ ನಿಗದಿತ ಸಮಯದೊಳಗೆ ಅವರ ಕೆಲಸ ಮಾಡದೇ ವಿನಾಕಾರಣ ವಿಳಂಬ ಅಲೆದಾಡುವಂತೆ ಮಾಡಿದ ಸಂಬಂಧಿಸಿದ ಅಧಿಕಾರಿಗಳಿಗೆ ದಂಡ ವಿಧಿಸಿ ನೋಟಿಸ್ ಜಾರಿ ಮಾಡುವಂತೆ ಜಿಲ್ಲಾಧಿಕಾರಿ ಸಂಗಪ ಅವರು ಉಪವಿಭಾಗಾಧಿಕಾರಿ ಸಂತೋಷ ಜಗಲಾಸರ ಅವರಿಗೆ ಆದೇಶ ಮಾಡಿದ ಘಟನೆ ನಡೆಯಿತು.

# ಶಿಕ್ಷಕರು ಅಭಿವೃದ್ಧಿಯ ರುವಾರಿಗಳು: ಶಾಸಕ ಪ್ರಭು ಚವ್ಹಾಣ



ಔರಾಧ:ಸೆ.13:ಶಿಕ್ಷಕರಿಗೆ ದೇಶದಲ್ಲಿ ಬಹುದೊಡ್ಡ ಸ್ಥಾನಮಾನ ನೀಡಲಾಗಿದೆ. ಮಕ್ಕಳಿಗೆ ವಿದ್ಯೆ, ಬುದ್ಧಿ ಕಲಿಸಿ ಉಜ್ವಲ ಭವಿಷ್ಯ ರೂಪಿಸುವ ಶಿಕ್ಷಕರು ಅಭಿವೃದ್ಧಿಯ ರುವಾರಿಗಳು ಎಂದು ಮಾಜಿ ಸಚಿವರು ಹಾಗೂ ಔರಾದ(ಬಿ) ಶಾಸಕರಾದ ಪ್ರಭು ಬಿ.ಚವ್ಹಾಣ ಅವರು ತಿಳಿಸಿದರು.

ಶಾಲಾ ಶಿಕ್ಷಣ ಇಲಾಖೆಯಿಂದ ಸೆ.13ರಂದು ಔರಾದ(ಬಿ) ಪಟ್ಟಣದ ಡಾ.ಗುರುಪಾದಪ್ಪ ಕಲ್ಯಾಣ ಮಂಟಪದಲ್ಲಿ ನಡೆದ 2025-26ನೇ ಸಾಲಿನ ತಾಲ್ಲೂಕು ಮಟ್ಟದ ಶಿಕ್ಷಕರ ದಿನಾಚರಣೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು.ಔರಾದ(ಬಿ) ವಿಧಾನಸಭಾ ಕ್ಷೇತ್ರ ಸಾಕಷ್ಟು ಸುಧಾರಣೆ ಕಂಡಿದೆ. ಇದರಲ್ಲಿ ಶಿಕ್ಷಕರ ಪಾತ್ರವೂ ಹೆಚ್ಚಿದೆ. ಕ್ಷೇತ್ರದಲ್ಲಿ ಶಿಕ್ಷಕರು ಸರಿಯಾಗಿ ಕೆಲಸ ಮಾಡುತ್ತಿದ್ದು, ಶಿಕ್ಷಣ ಕ್ಷೇತ್ರ ಸಾಕಷ್ಟು ಸುಧಾರಿಸಿದೆ. ಫಲಿತಾಂಶ ಸುಧಾರಣೆಯಲ್ಲಿ ಇನ್ನಷ್ಟು ಪ್ರಯತ್ನ ಹಾಕಬೇಕು. ಮುಂಬರುವ ದಿನಗಳಲ್ಲಿ ಔರಾದ(ಬಿ) ಹಾಗೂ ಕಮಲನಗರ ತಾಲ್ಲೂಕುಗಳು ಫಲಿತಾಂಶದಲ್ಲಿ ನಂ.1 ಮಾಡಬೇಕೆಂಬ ಅಭಿಲಾಶೆಯಿದೆ. ಶಿಕ್ಷಕರು ಇದಕ್ಕೆ ಸಹಕರಿಸಬೇಕು. ಶೇ.100ರಷ್ಟು ಫಲಿತಾಂಶ ಕೊಡುವುದಾಗಿ ಪ್ರಮಾಣ ಮಾಡಬೇಕೆಂದು ಶಾಸಕರು ತಿಳಿಸಿದರು.

ಶಿಕ್ಷಕರ ಮೇಲೆ ನನಗೆ ಅತ್ಯಂತ ಗೌರವವಿದೆ. ಅದಕ್ಕೆಂದೇ 2009ರಿಂದ ನಿರಂತರ ಸನ್ಮಾನಿಸುತ್ತಾ ಬರುತ್ತಿದ್ದು, ಯಾವುದೇ ಅಡ್ಡಿ ಆತಂಕಗಳು ಬಂದರೂ ಶಿಕ್ಷಕರು, ವಿದ್ಯಾರ್ಥಿಗಳನ್ನು ಸನ್ಮಾನಿಸುವ ಕೆಲಸ ನಿಲ್ಲಿಸುವುದಿಲ್ಲ. ಜೀವಮಾನ ಇರುವವರೆಗೆ ಈ ಕಾರ್ಯಕ್ರಮ ನಿರಂತರವಾಗಿ ನಡೆಸುತ್ತೇನೆ. ನಾನು ಮಣ್ಣಿನ ಮಗನಾಗಿದ್ದು, ಅಡ್ಡಿಗಳು ಬಂದಷ್ಟು ಗಟ್ಟಿಯಾಗುತ್ತೇನೆ. ಮುಂದಿನ ದಿನಗಳಲ್ಲಿ ಶಿಕ್ಷಕರ ದಿನಾಚರಣೆ ಮತ್ತಷ್ಟು ಅದ್ದೂರಿಯಾಗಿ ಮಾಡಿ ಶಿಕ್ಷಕರನ್ನು ಗೌರವಿಸುತ್ತೇನೆ ಎಂದರು.

ಪಾಲಕರು ತಮ್ಮ ಮಕ್ಕಳನ್ನು ಶಿಕ್ಷಕರ ಮೇಲೆ ಭರವಸೆಯಿಟ್ಟು ಶಾಲೆಗೆ ಕಳುಹಿಸುತ್ತಾರೆ. ಅವರ ನಿರೀಕ್ಷೆಗೆ ಧಕ್ಕೆಯಾಗದ ರೀತಿಯಲ್ಲಿ ಮಕ್ಕಳಿಗೆ ವಿದ್ಯಾಭ್ಯಾಸ ಮಾಡಿಸಬೇಕು. ಪಠ್ಯ ಚಟುವಟಿಕೆಯ ಜೊತೆಗೆ ಉತ್ತಮ ಸಂಸ್ಕಾರ, ದೇಶಭಕ್ತಿ, ಸೇವಾಭಾವನೆ ಮೂಡಿಸಿ ಉತ್ತಮ ಪ್ರಜೆಗಳನ್ನಾಗಿ ರೂಪಿಸುವ ಬಹುದೊಡ್ಡ ಜವಾಬ್ದಾರಿ ಶಿಕ್ಷಕರ ಮೇಲಿದೆ ಎಂದರು.

ದೇಶದಲ್ಲಿ ಶಿಕ್ಷಣ ವ್ಯವಸ್ಥೆಯ ಸುಧಾರಣೆಯಲ್ಲಿ ಡಾ.ಸರ್ವಪಲ್ಲಿ ರಾಧಾಕೃಷ್ಣನ್ ಹಾಗೂ ಸಾವಿತ್ರಿಬಾಯಿ ಫೂಲೆ ಅವರ ಕೊಡುಗೆ ಸಾಕಷ್ಟಿದೆ. ಶಿಕ್ಷಕರು ಅವರ ತತ್ವಾದರ್ಶಗಳನ್ನು ಪಾಲಿಸಬೇಕು ಎಂದರು

ಈ ಬಾರಿ ಅತಿ ಹೆಚ್ಚು ಮಳೆಯಾಗಿದ್ದು, ರೈತರ ಬಹಳಷ್ಟು ಬೆಳೆ ಹಾನಿಯಾಗಿದೆ. ಅವರಿಗೆ ಸೂಕ್ತ ಪರಿಹಾರ ಕಲ್ಪಿಸಲು ಪ್ರಯತ್ನಿಸುತ್ತಿದ್ದು, ರೈತರ ಕೈ ಬಲಪಡಿಸಿ ಅವರನ್ನು ಆರ್ಥಿಕವಾಗಿ ಸಬಲರನ್ನಾಗಿಸಲು ನಿರಂತರ ಕೆಲಸ ಮಾಡುತ್ತೇನೆ. ಔರಾದ(ಬಿ) ತಾಲ್ಲೂಕಿನ ಸಮಗ್ರ ಅಭಿವೃದ್ಧಿಪಡಿಸುವ ಸಂಕಲ್ಪದೊಂದಿಗೆ ಮುಂದುವರೆದಿದ್ದು, ಇದಕ್ಕೆ ಶಿಕ್ಷಕರ ಸಹಕಾರ ಅವಶ್ಯಕ ಎಂದು ತಿಳಿಸಿದರು.

ಠಾಣಾಕುಶನೂರ ಮಠದ ಪೂಜ್ಯ ಸಿದ್ಧಲಿಂಗ ಸ್ವಾಮಿ, ಭಾಲ್ಕಿ ಹಿರೇಮಠದ ಪೂಜ್ಯ ಮಹಾಲಿಂಗ ಸ್ವಾಮಿ, ಹೆಡಗಾಪೂರ ಮಠದ ಪೂಜ್ಯ ಕೇದಾರನಾಥ ಶಿವಾಚಾರ್ಯರು, ಗುಡಪಳ್ಳಿ ಮಠದ ಪೂಜ್ಯ ಚಂದ್ರಶೇಖರ ಶಿವಾಚಾರ್ಯರು ಸಾನ್ನಿಧ್ಯ ವಹಿಸಿದ್ದರು. ಔರಾದ(ಬಿ) ಪಟ್ಟಣ ಪಂಚಾಯತ್ ಅಧ್ಯಕ್ಷರಾದ ಸರುಬಾಯಿ ಘೂಳೆ, ಶಾಲಾ ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ಗುರು ಪ್ರಸಾದ, ತಹಸೀಲ್ದಾರರಾದ ಮಹೇಶ ಪಾಟೀಲ, ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳಾದ ಕಿರಣ ಪಾಟೀಲ, ಹಣಮಂತರಾಯ ಕೌಟಗೆ, ಕ್ಷೇತ್ರ ಶಿಕ್ಷಣಾಧಿಕಾರಿ ಬಿ.ಜೆ ರಂಗೇಶ, ಪಿ.ಎಂ ಪೋಷಣ ಶಕ್ತಿ ನಿರ್ಮಾಣ ಯೋಜನೆಯ ಸಹಾಯಕ ನಿರ್ದೇಶಕ ಧೂಳಪ್ಪ ಮಳೆನೂರ, ಕ್ಷೇತ್ರ ಸಮನ್ವಯಾಧಿಕಾರಿ ಪ್ರಕಾಶ ರಾಠೋಡ, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯದ ಯಶವಂತ ಡೊಂಬಾಳೆ, ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಸೋಮಶೇಖರ ಬಿರಾದಾರ, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷ ರವೀಂದ್ರರೆಡ್ಡಿ ಮಾಲಿಪಾಟೀಲ, ಜಿಲ್ಲಾ ಕಾರ್ಯದರ್ಶಿ ಪ್ರಭುಲಿಂಗ ತೂಗಾವೆ, ಸಂಘದ ಪ್ರಮುಖರಾದ ಪಂಢರಿ ಆಡೆ, ಸುನೀಲ ಕಸ್ತೂರೆ, ವಿಶ್ವನಾಥ ಬಿರಾದಾರ, ಸೂರ್ಯಕಾಂತ ಬಿರಾದಾರ, ಸಂಜೀವ ಮೇತ್ರೆ, ಬಸವರಾಜ ಪಾಟೀಲ, ಇಲಾಖೆಯ ನಯೀಮುದ್ದಿನ್, ಬಲಭೀಮ ಕುಲಕರ್ಣಿ, ಡಾ.ಶಾಲೀವಾನ್ ಉದಗೀರೆ ಸೇರಿದಂತೆ ಶಾಲಾ ಶಿಕ್ಷಣ ಇಲಾಖೆಯ ಇಲಾಖೆಯ ಅಧಿಕಾರಿಗಳು, ಸಂಘ ಸಂಸ್ಥೆಗಳ ಪ್ರಮುಖರು, ಪದಾಧಿಕಾರಿಗಳು ಹಾಗೂ ಎಲ್ಲ ಶಾಲಾ ಕಾಲೇಜುಗಳ ಶಿಕ್ಷಕರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಶಾಸಕರು ಔರಾದ(ಬಿ) ಹಾಗೂ ಕಮಲನಗರ ತಾಲ್ಲೂಕಿನ ನಿವೃತ್ತ ಶಿಕ್ಷಕರು, ಮರಣ ಹೊಂದಿದ ಶಿಕ್ಷಕರ ಅವಲಂಬಿತರು ಹಾಗೂ ಸರ್ಕಾರಿ, ಅನುದಾನಿತ, ಖಾಸಗಿ ಶಾಲಾ-ಕಾಲೇಜಗಳ ಸುಮಾರು 3 ಸಾವಿರ ಶಿಕ್ಷಕರನ್ನು ಕಾರ್ಯಕ್ರಮದಲ್ಲಿ ಸನ್ಮಾನಿಸಲಾಯಿತು.

# ಮಾನವೀಯ ಕಳಕಳಿಯಿಂದ ಜಗತ್ತಿನಲ್ಲಿ ಶ್ರೇಷ್ಠತೆ : ಅಳವಂಡಿ



ಮಲ್ಲಮ್ಮ ನುಡಿವಾರ್ತೆ ಕೊಪ್ಪಳ : ಸೆ.13: ಜಗತ್ತಿನಲ್ಲಿ ಶ್ರೇಷ್ಠತೆಯು ಮಾನವೀಯ ಕಳಕಳಿಯಿಂದ ಬರುತ್ತದೆ ಎಂದು ಭಾರತೀಯ ರೆಡ್ ಕ್ರಾಸ್ ಸಂಸ್ಥೆಯ ಕೊಪ್ಪಳ ಜಿಲ್ಲಾ ಶಾಖೆಯ ಸಭಾಪತಿ ಸೋಮರಡ್ಡಿ ಅಳವಂಡಿ ಅವರು ಹೇಳಿದರು.

ನಗರದ ಸರಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನಲ್ಲಿ ಶನಿವಾರ ಭಾರತೀಯ ರೆಡ್ ಕ್ರಾಸ್ ಸಂಸ್ಥೆ ಜಿಲ್ಲಾ ಶಾಖೆ, ಕೊಪ್ಪಳ ಮತ್ತು ಸರಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನ ಯುವ ರೆಡ್ ಕ್ರಾಸ್ ಘಟಕ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ವಿಶ್ವ ಪ್ರಥಮ ಚಿಕಿತ್ಸೆ ದಿನಾಚರಣೆ-2025 ಕಾರ್ಯಕ್ರಮ ವನ್ನು ಉದ್ಘಾಟನೆ ಮಾಡಿ ಅವರು ಮಾತನಾಡಿದರು.

ಎಲ್ಲರೂ ಮಾನವೀಯ ಸೇವೆಯನ್ನು ಮಾಡಬೇಕು. ನಮ್ಮ ಅಕ್ಕ ಪಕ್ಕ ದವರು ಸಂಕಷ್ಟಕ್ಕೆ ಒಳಪಟ್ಟಾಗ ಅವರ ನೆರವಿಗೆ ದಾವಿಸಬೇಕು. ಎಲ್ಲರಲ್ಲಿ ಮಾನವೀಯತೆ, ಸಮಾಜದ ಪರ ಕಾಳಜಿ ಇರಬೇಕು. ನೀವು ಅಕ್ಕ ಪಕ್ಕ ದ ಸಮಸ್ಯೆಗಳಿಗೆ ಪರಿಹಾರ ಹುಡುಕಿದರೆ ಜೀವನದಾರಿ ಸುಗಮವಾಗುತ್ತದೆ. ಉತ್ತಮವಾದ ಅವಕಾಶಗಳು ದೊರೆಯುತ್ತವೆ. ಅವುಗಳನ್ನು ಸದುಪಯೋಗ ಪಡಿಸಿಕೊಳ್ಳಿ. ವಿದ್ಯಾರ್ಥಿಗಳು ಪ್ರಶ್ನೆ ಮಾಡುವ ಮನಸ್ಥಿತಿಯನ್ನು ಬೆಳಿಸಿಕೊಳ್ಳಬೇಕು. ನಮ್ಮ ಚಿಂತನೆಗಳು ಸಮಾಜ ಮುಖಿಯಾಗಿರಬೇಕು. ಕೊಪ್ಪಳದ ರೆಡ್ ಕ್ರಾಸ್ ವತಿಯಿಂದ ಒಂದು ಲಕ್ಷ ಇಪ್ಪತ್ತು ಸಾವಿರ ಜನರಿಗೆ ರಕ್ತ ಕೊಟ್ಟಿದೆ. ರೆಡ್ ಕ್ರಾಸ್ ಘಟಕವು ಅನೇಕ ಜನಪರ ಉಪಯೋಗ ಕೆಲಸಗಳನ್ನು ಮಾಡಿದೆ.

ಕಾರ್ಯಕ್ರದಲ್ಲಿ ಭಾರತೀಯ ರೆಡ್ ಕ್ರಾಸ್ ಸಂಸ್ಥೆಯ ಕೊಪ್ಪಳ ಜಿಲ್ಲಾ ಶಾಖೆಯ ನಿರ್ದೇಶಕರಾದ ಡಾ. ಶಿವನಗೌಡ ಪಾಟೀಲ್ ಕಾಮನೂರಿನ ಆಯುರ್ವೇದ ಚಿಕಿತ್ಸಾಲಯದ ವೈದ್ಯಧಿಕಾರಿ ಡಾ ಕವಿತಾ ಹ್ಯಾಟಿ ಅವರು ವಿಶೇಷ ಉಪನ್ಯಾಸ ನೀಡಿದರು.

ಕಾರ್ಯಕ್ರಮ ದ ಅಧ್ಯಕ್ಷತೆಯನ್ನು ವಹಿಸಿದ್ದ ಕಾಲೇಜಿನ ಪ್ರಾಚಾರ್ಯ ಡಾ. ಗಣಪತಿ ಲಮಾಣಿ ಅಧ್ಯಕ್ಷತೆ ವಹಿಸಿದ್ದರು.

ಕಾರ್ಯಕ್ರಮದಲ್ಲಿ ಭಾರತೀಯ ರೆಡ್ ಕ್ರಾಸ್ ಸಂಸ್ಥೆಯ ಕೊಪ್ಪಳ ಜಿಲ್ಲಾ ಶಾಖೆಯ ನಿರ್ದೇಶಕರು ಮತ್ತು ಸಂಯೋಜಕರಾದ

ರಾಜೇಶ್ ಯಾವಗಲ್ ಅವರು ಮಾತನಾಡಿದರು. ಕಾರ್ಯಕ್ರಮದಲ್ಲಿ ಕಾಲೇಜಿನ ರೆಡ್ ಕ್ರಾಸ್ ಘಟಕದ ಸಂಚಾಲಕರಾದ ಡಾ. ಅಶೋಕ ಕುಮಾರ, ಶಿಕ್ಷಣ ಪ್ರೇಮಿ ಬಿ. ಜಿ. ಕರಿಗಾರ, ಕಾಲೇಜಿನ ಹಿರಿಯ ಪ್ರಾಧ್ಯಾಪಕರಾದ ಡಾ. ಪ್ರದೀಪ್ ಕುಮಾರ, ಪ್ರೊ. ವಿಠೋಬ, ಡಾ. ನರಸಿಂಹ ಉಪಸ್ಥಿತರಿದ್ದರು. ಪ್ರಸ್ತವಿಕವಾಗಿ ಕೊಪ್ಪಳ ರೆಡ್ ಕ್ರಾಸ್ ಸಂಸ್ಥೆ ಯ ದೇವೇಂದ್ರಪ್ಪ ಅವರು ಮಾತಾನಾಡಿದರು.

ಕಾರ್ಯಕ್ರಮವನ್ನು ಡಾ. ಅಶೋಕ ಕುಮಾರ ನಿರೂಪಿಸಿ, ಸ್ವಾಗತಿಸಿದರು. ಅಕ್ಕಮ್ಮ ಪ್ರಾರ್ಥನೆ ಗೀತೆ ಹಾಡಿದರು. ಡಾ. ಪ್ರದೀಪ್ ಕುಮಾರ ವಂದಿಸಿದರು.



ಹುಮನಾಬಾದ :ಈದ್ ಮೀಲಾದ ಉನ್ ನಬಿ ಪ್ರಯುಕ್ತ ಸಾರ್ವಜನಿಕ ಆಸ್ಪತ್ರೆ ಹುಮನಾಬಾದನಲ್ಲಿ ರೋಗಿಗಳಿಗೆ ಹಣ್ಣು ಹಂಪಲು ಹಂಚಿದರು ಹಿರಿಯ ತಜ್ಞ ವೈದ್ಯರಾದ ಡಾ ಸಂಗೀತಾ ಹುಲಸೂರೆ , ಡಾ ನಾಗನಾಥ ಹುಲಸೂರೆ ,ಅಬ್ದುಲ ಮತಿನ,ಖಾಲೀದ ಕಂಟ್ರೋಲರ್ ಮಹ್ಮದ್ ಮುತಾಜಾ, ಅಬ್ದುಲ್ ಸಲೀಮ್, ಖುರ್ಷಿದ ಖಾನ್,ಇತರರು ಇದ್ದರು

# ನೆರೆಹಾನಿ ಪ್ರದೇಶಗಳ ರೈತರು, ಸಂತ್ರಸ್ತರ ಸಮಸ್ಯೆಗಳಿಗೆ ಸ್ಪಂದಿಸಲು ಸೆ.15 ರಂದು ನಿಖಿಲ್ ಕುಮಾರಸ್ವಾಮಿ ಕಲಬುರಗಿಗೆ



ಕಲಬುರಗಿ:ಸೆ.13: ನೆರೆಹಾನಿ ಪ್ರದೇಶಗಳ ರೈತರು, ಸಂತ್ರಸ್ತರ ಸಮಸ್ಯೆಗಳಿಗೆ ಸ್ಪಂದಿಸುವ ಸಲುವಾಗಿ ಜೆಡಿಎಸ್ ಪಕ್ಷದ ರಾಜ್ಯ ಯುವ ಘಟಕದ ರಾಜ್ಯಧ್ಯಕ್ಷ ನಿಖಿಲ ಕುಮಾರ ಸ್ವಾಮಿ ಅವರು ಸೆ.15 ರಂದು ಕಲಬುರಗಿ ಜಿಲ್ಲಾ ಪ್ರವಾಸ ಹಮ್ಮಿಕೊಂಡಿದ್ದಾರೆ ಎಂದು ಜೆಡಿಎಸ್ ಪಕ್ಷದ ಜಿಲ್ಲಾಧ್ಯಕ್ಷ ಬಾಲರಾಜ್ ಗುತ್ತೇದಾರ ತಿಳಿಸಿದ್ದರು.

ಈ ಕುರಿತು ಪತ್ರಿಕಾ ಪ್ರಕಟಣೆ ಹೊರಡಿಸಿರುವ ಅವರು ಪಕ್ಷದ ರಾಜ್ಯಾಧ್ಯಕ್ಷರು ಹಾಗೂ ಕೇಂದ್ರ ಸಚಿವರಾದ ಹೆಚ್.ಡಿ. ಕುಮಾರಸ್ವಾಮಿರವರು ಈಗಾಗಲೇ ರಚಿಸಿದ್ದಾರೆ.ಈ ತಂಡವು ಸೆ.15 ಕಲಬುರಗಿಗೆ ಭೇಟಿ ನೀಡಲಿದೆ.

ರಾಜ್ಯದ ಕಲ್ಯಾಣ ಕರ್ನಾಟಕ ಜಿಲ್ಲೆಗಳಾದ ಬೀದರ್ ಹಾಗೂ ಕಲಬುರಗಿ ಜಿಲ್ಲೆಗಳಲ್ಲಿ ಭಾರಿ ಮಳೆಗೆ ಮತ್ತು ಪ್ರವಾಹಕ್ಕೆ ತುತ್ತಾದ ಪ್ರದೇಶಗಳಲ್ಲಿ ಆಸ್ತಿ-ಪಾಸ್ತಿಗಳಿಗೆ ಉಂಟಾಗಿರುವ ಹಾನಿಗಳ ಬಗ್ಗೆ ಜನತಾದಳ (ಜಾತ್ಯತೀತ) ಪಕ್ಷದಿಂದ ಸಮೀಕ್ಷೆ ನಡೆಸಲು ಪಕ್ಷದ ಶಾಸಕರು, ಮಾಜಿ ಶಾಸಕರು ಮತ್ತು ಜಿಲ್ಲಾಧ್ಯಕ್ಷರುಗಳನ್ನು ಒಳಗೊಂಡ ತಂಡ ಕಲಬುರಗಿ ಜಿಲ್ಲೆಗೆ ಭೇಟಿ ನೀಡಿ ವೀಕ್ಷಿಸಲಿದೆ

ರಾಜ್ಯದಲ್ಲಿ ಮುಂಗಾರು ಮಳೆಯ ಅತಿವೃಷ್ಟಿಯಿಂದ ಲಕ್ಷಾಂತರ ಹೆಕ್ಟರ್ ಪ್ರದೇಶದಲ್ಲಿ ರೈತರ ಬೆಳೆ ನಷ್ಟವಾಗಿದ್ದು, ನೆರೆಹಾನಿಯಿಂದ ಜನಸಾಮಾನ್ಯರು ಸಹ ಮನೆಗಳನ್ನು ಕಳೆದುಕೊಂಡು ಸಂಕಷ್ಟ ಅನುಭವಿಸುತ್ತಿದ್ದಾರೆ. ರೈತ ವಿರೋಧಿ ಕಾಂಗ್ರೆಸ್ ಸರ್ಕಾರ ಹಾಗೂ ಜಿಲ್ಲಾ ಉಸ್ತುವಾರಿ ಮಂತ್ರಿಗಳು ನೆರವಿಗೆ ಧಾವಿಸದೆ, ಪರಿಹಾರಗಳನ್ನು ಒದಗಿಸಿದೆ ನಿರ್ಲಕ್ಷ್ಯವಹಿಸಿದೆ ,

ಈ ಹಿನ್ನೆಲೆಯಲ್ಲಿ ನೆರೆ ಸಂತ್ರಸ್ತರ ಸಮಸ್ಯೆಗಳನ್ನು ಆಲಿಸಲು ಜನತಾದಳ ಜಾತ್ಯತೀತ ಪಕ್ಷದ ವತಿಯಿಂದ ರಾಜ್ಯ ಪ್ರವಾಸ ಕೈಗೊಳ್ಳಲಾಗಿದ್ದು, ಬೆಳೆ ಹಾನಿ, ಮನೆ ಕುಸಿತ ಪ್ರದೇಶಗಳಿಗೆ ಭೇಟಿ ನೀಡಿ ವಸ್ತು ಸ್ಥಿತಿ ವರದಿಯನ್ನು ರಾಜ್ಯ ಸರ್ಕಾರಕ್ಕೆ ನಮ್ಮ ಪಕ್ಷದ ನಾಯಕರು ನೀಡಲಿದ್ದಾರೆ.

ಈ ತಿಂಗಳಿಂದ ಮುಂಗಾರು ಹೆಚ್ಚಾಗಿದೆ. ಉತ್ತರ ಕರ್ನಾಟಕ, ಕಲ್ಯಾಣ ಕರ್ನಾಟಕ ಭಾಗದಲ್ಲಿ ಸಾಕಷ್ಟು ರೈತರು ಬೆಳೆದ ಬೆಳೆಗಳು ಸಂಪೂರ್ಣವಾಗಿ ನಾಶವಾಗಿದೆ. ರಾಜ್ಯದಲ್ಲಿ ದೊಡ್ಡ ಮಟ್ಟದಲ್ಲಿ ಬೆಳೆ ಹಾನಿಯಾಗಿದೆ ಎಂದು ಹೇಳಿದರು.

ತೊಗರಿ ಎಲ್ಲಾ ಬೆಳೆ ನಾಶವಾಗಿದೆ. ಸರ್ಕಾರ, ಸಚಿವರು ತುರ್ತು ಪರಿಹಾರ ನೀಡಿಲ್ಲ. ಆಯಾ ಪ್ರದೇಶಗಳಿಗೆ ಭೇಟಿ ನೀಡಿಲ್ಲ. ಕೃಷಿ ಸಚಿವರು ಇದ್ದಾರೋ, ಇಲ್ಲವೋ ಅನ್ನೋ ಪ್ರಶ್ನೆ ಉದ್ಬವವಾಗಿದೆ. 266? ಚೀಲದ ಗೊಬ್ಬರ ಇತ್ತು, ಬ್ಲಾಕ್ ಮಾರ್ಕೆಟ್‌ಗೆ ಹೋಗಿ 1000 ಕೊಟ್ಟು ಖರೀದಿ ಮಾಡಿದ್ದಾರೆ ಎಂದು ವಾಗ್ದಾಳಿ ನಡೆಸಿದರು.

ನಿಖಿಲ ಕುಮಾರ್ ಸ್ವಾಮಿ ಪ್ರವಾಸ:ಸೆ. 15 ರಂದು ಬೆಳಿಗ್ಗೆ 11.45 ರಿಂದ 1.30 ಕ್ಕೆ ಕಲಬುರಗಿ ಎ.ಪಿ.ಎಂ.ಸಿ ಮಾರುಕಟ್ಟೆಯಲ್ಲಿ ರೈತರೊಂದಿಗೆ ಸಂವಾದ ನಡೆಸಲಿದ್ದಾರೆ, ಮಧ್ಯಾಹ್ನ 2 ಗಂಟೆಗೆ ಜೇವರ್ಗಿ ಮತಕ್ಷೇತ್ರದ ಸೊಮನಾಥ ಹಳ್ಳಿಗೆ ಭೇಟಿ ಅತಿವೃಷ್ಠಿಯಿಂದ ಹಾನಿಯಾದ ಸ್ಥಳಗಳಿಗೆ ಭೇಟಿ ನೀಡಲಿದ್ದಾರೆ ,

ನಂತರ 3.30 ರಿಂದ 5.30 ರ ವರೆಗೆ ಕಟ್ಟಿ ಸಂಗಾವಿ, ಜೇವರ್ಗಿ ನಗರ, ಅವರಾದ,ಗಂವ್ಹಾರ, ಗ್ರಾಮಕ್ಕೆ ಭೇಟಿ ನೀಡಿ ಅತಿವೃಷ್ಠಿಯಿಂದ ಹಾನಿಯಾದ ಸ್ಥಳಗಳಿಗೆ ಭೇಟಿ ನೀಡಲಿದ್ದಾರೆ,

ಸಂಜೆ 6.15 ಕ್ಕೆ ಪತ್ರಿಕಾ ಗೋಷ್ಠಿ ನಡೆಸಲಿದ್ದಾರೆ .ಸೇ.16 ರಂದು ಬೆಳ್ಳಿಗ್ಗೆ 8 ಗಂಟೆಗೆ ಮಹಾದಾಸೋಹಿ ಶ್ರೀ ಶರಣಬಸವೇಶ್ವರ ದೇವಸ್ಥಾನಕ್ಕೆ ಭೇಟಿ ನೀಡಲಿದ್ದಾರೆ ಎಂದು ತಿಳಿಸಿದ್ದರು .

ನೀಖಿಲಕುಮಾರ ಸ್ವಾಮಿ ಅವರೊಂದಿಗೆ ಮಾಜಿ ಸಚಿವರಾದ ವೆಂಕಟರಾವ್ ನಾಡಗೌಡ, ಬಂಡೆಪ್ಪ ಖಾಶೆಂಪೂರ್, ಗುರುಮಿಠಕಲ್ ಶಾಸಕರಾದ ಶರ-ಣಗೌಡ ಕಂದಕೂರು,ಹಗರಿಬೊಮ್ಮನಹಳ್ಳಿ ಶಾಸಕರಾದ

ಕೆ. ನೇಮಿರಾಜ್ ನಾಯ್ಕ, ದೇವದುರ್ಗ ಶಾಸಕರಾದ ಶ್ರೀಮತಿ ಕರೆಮ್ಮಾ ಜಿ.ನಾಯ್ಕ,ಮಾಜಿ ಶಾಸಕರಾದ ದೊಡ್ಡಪ್ಪಗೌಡ ಎಸ್.ಪಾಟೀಲ್ ನರಬೋಳ ಸೇರಿದಂತೆ ಮಾಜಿ ಶಾಸಕರು ,ಪಕ್ಷದ ಮುಖಂಡರು ತಂಡದಲ್ಲಿದ್ದಾರೆ ಎಂದು ತಿಳಿಸಿದ್ದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿಗಳಾದ ಡಿ.ಕೆ.ಶಿವಕುಮಾರ ಅವರು ಕಲ್ಯಾಣ ಕರ್ನಾಟಕ ಉತ್ಸವಕ್ಕೆ ಜಿಲ್ಲೆಗೆ ಆಗಮಿಸುತ್ತಿದ್ದು, ಈ ಭೇಟಿ ವೇಳೆ ರೈತರ ಹೊಲಗಳಿಗೆ ಭೇಟಿ ನೀಡಿ ರೈತರಿಗೆ ವಿಶೇಷ ಪ್ಯಾಕೇಜ್ ಪರಿಹಾರ ಘೋಷಿಸಬೇಕು.

**ಬಾಲರಾಜ್ ಗುತ್ತೇದಾರ**
**ಜಿಲ್ಲಾಧ್ಯಕ್ಷರು ಜೆಡಿಎಸ್ ಕಲಬುರಗಿ**

# ವಿಧಾನ ಮಂಡಲದಲ್ಲಿಯ ಆರೋಗ್ಯಪೂರ್ಣ ಚರ್ಚೆಗಳೇ ಪ್ರಜಾಪ್ರಭುತ್ವದ ಯಶಸ್ಸಿನ ಮೂಲಾಧಾರ: ಬಸವರಾಜ ಹೊರಟ್ಟಿ




ಬೆಂಗಳೂರು:ಸೆ.13:ವಿಧಾನಮಂಡಲಗಳಲ್ಲಿ ನಡೆಯುವ ಸಮಾಜಮುಖಿ ಹಾಗೂ ಆರೋಗ್ಯಪೂರ್ಣ ಚರ್ಚೆಗಳೇ ಪ್ರಜಾಪ್ರಭುತ್ವದ ಯಶಸ್ಸಿಗೆ ಮೂಲಾಧಾರವಾಗಿವೆ ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅಭಿಮತ ವ್ಯಕ್ತಪಡಿಸಿದ್ದಾರೆ.

ಬೆಂಗಳೂರಿನಲ್ಲಿ ನಡೆಯುತ್ತಿರುವ 11ನೇ ಕಾಮನ್ ವೆಲ್ತ್ ಸಂಸದೀಯ ಸಂಘ ಭಾರತ ವಲಯದ ಸಮ್ಮೇಳನದಲ್ಲಿ ವಿಧಾನ ಮಂಡಲದ ಚರ್ಚೆಗಳು ಜನರ ವಿಶ್ವಾಸಗಳಿಸುವುದರೊಂದಿಗೆ ಜನರ ಆಶೋತ್ತರಗಳನ್ನು ಈಡೇರಿಸುವಲ್ಲಿಯ ಪಾತ್ರ ಕುರಿತ ವಿಚಾರ ಮಂಡಿಸಿದ ಬಸವರಾಜ ಹೊರಟ್ಟಿ, ಚುನಾಯಿತ ಪ್ರತಿನಿಧಿಗಳು ಸಾರ್ವಜನಿಕ ಕಾಳಜಿಗಳನ್ನು ಚರ್ಚಿಸಲು ಸರ್ಕಾರಿ ನೀತಿಗಳನ್ನು ಪರಿಶೀಲಿಸಲು ಮತ್ತು ಕಾನೂನು ರಚನೆಯ ಪ್ರಕ್ರಿಯೆಯಲ್ಲಿ ಭಾಗವಹಿಸಲು ವಿಧಾನ ಮಂಡಲ ಪರಿಣಾಮಕಾರಿ ವೇದಿಕೆಯಾಗಿದ್ದು, ಅದನ್ನು ಸಮರ್ಥವಾಗಿ ಬಳಸಿಕೊಳ್ಳಲು ಜನಪ್ರತಿನಿಧಿಗಳು ಮುಂದಾಗಬೇಕು ಎಂದರು. ಸದನವು ಕ್ರಮಬದ್ಧವಾಗಿಲ್ಲದಿದ್ದಾಗ ಮತ್ತು ಅರ್ಥಪೂರ್ಣ ಚರ್ಚೆಯಿಲ್ಲದೆ ಕಾನೂನುಗಳನ್ನು ಅಂಗೀಕರಿಸಿದಾಗ ನಮ್ಮ ಮೇಲಿನ ಜನರ ನಂಬಿಕೆಗಳು ಕ್ಷೀಣಿಸುವ ಸಂದರ್ಭ ಬರಬಹುದೆನ್ನುವ ಎಚ್ಚರಿಕೆ ಜನಪ್ರತಿನಿಧಿಗಳಿಗಿರಬೇಕು ಎಂದು ಹೇಳಿದರು. ಸದನ ಕಲಾಪಗಳ ಪ್ರಧಾನ ಅಂಶಗಳಾದ ಪ್ರಶ್ನೋತ್ತರ ಅವಧಿ, ಶೂನ್ಯವೇಳೆ ಚರ್ಚೆ, ಅರ್ಧಗಂಟೆಯ ಚರ್ಚೆ, ಕಿರುಸೂಚನೆ ಪ್ರಶ್ನೆಗಳು ಮತ್ತು ಸದನದ ಗಮನ ಸೆಳೆಯುವ ಪ್ರಸ್ತಾವಗಳ ಮೂಲಕ ಪ್ರತಿಯೊಬ್ಬ ಸದಸ್ಯರು ಸದನದಲ್ಲಿನ ಅವಕಾಶಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಲು ಅನುವು ಮಾಡಿಕೊಡುವ ಮೂಲಕ ಸುಗಮ ಮತ್ತು ರಾಜತಾಂತ್ರಿಕ ಮಾರ್ಗಗಳನ್ನು ಪ್ರತಿನಿಧಿಗಳು ಯಾವಾಗಲೂ ಆಯ್ಕೆ ಮಾಡಿಕೊಳ್ಳಬೇಕು ಎಂದು ಸಭಾಪತಿ ಬಸವರಾಜ ಹೊರಟ್ಟಿ ತಿಳಿಸಿದರು.

ಶಾಸಕಾಂಗ ಸದನಗಳಲ್ಲಿ ನನ್ನ 45 ವರ್ಷಗಳ ಅವಧಿಯಲ್ಲಿ ವಿಧಾನ ಪರಿಷತ್ತಿನ ಸಭಾಪತಿಯಾಗಿ 3ನೇ ಬಾರಿಗೆ ಪಡೆದ ಅನುಭವದ ಮೂಲಕ ಹೇಳುವುದಾದರೆ, ಸಾರ್ವಜನಿಕ ಪ್ರತಿನಿಧಿಗಳು ಜನಪರ ಮಹತ್ವದ ವಿಷಯಗಳಿಗೆ ಮಹತ್ವ ನೀಡುವುದರ ಮೂಲಕ ತಮ್ಮ ಜವಾಬ್ದಾರಿ ನಿಭಾಯಿಸಬೇಕು ಎಂದು ನುಡಿದರು.

Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.
Editor: Ramesh Reddy, Office Ph. No: +91 9449732000.